ಶುಕ್ರವಾರ, ಡಿಸೆಂಬರ್ 30, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

'ಸೂತ್ರಧಾರಿ'ಗಾಗಿ ರ್‍ಯಾಪರ್ ಚಂದನ್ ಶೆಟ್ಟಿ ಜೊತೆ ಹೆಜ್ಜೆ ಹಾಕಿದ್ದಾರೆ ನಟಿ ಸಂಜನಾ ಆನಂದ್...



ಶುಕ್ರವಾರ, ಡಿಸೆಂಬರ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 360 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಹಿತ್ಯ ಸಮ್ಮೇಳನ: 13 ಮುಸ್ಲಿಮರಿಗೆ ಅವಕಾಶ 7

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ 12

ಇಂದು ಸಿನಿಮಾ ಪುರವಣಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,134 ▲	18,191 ▲	₹56,250 (ಬೆಂಗಳೂರು) ▼	₹69,500 (ಬೆಂಗಳೂರು) ▼	82.87 ▼

ಇಡಬ್ಲ್ಯುಎಸ್ ಮೀಸಲು ಹಂಚಿಕೆ • ಒಕ್ಕಲಿಗರಿಗೆ ಶೇ 7–ಲಿಂಗಾಯತರಿಗೆ ಶೇ 9 ?

ಪ್ರಬಲರಿಗೆ ಹೊಸ 'ಪ್ರವರ್ಗ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮೀಸಲಾತಿ ಪಟ್ಟಿಯಲ್ಲಿನ ಸ್ಥಾನಪಲ್ಲಟಕ್ಕೆ ಸುದೀರ್ಘ ಹೋರಾಟ ನಡೆಸಿದ್ದ ಲಿಂಗಾಯತ ಪಂಚಮಸಾಲಿ ಸಮುದಾಯ ಹಾಗೂ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂಬ ಒಕ್ಕಲಿಗರ ಬೇಡಿಕೆಗೆ ಮನ್ನಣೆ ನೀಡಿರುವ ಸರ್ಕಾರ, ಈ ಎರಡೂ ಸಮುದಾಯಗಳಿಗೆ ಹೊಸ ಪ್ರವರ್ಗವನ್ನೇ ಸೃಷ್ಟಿಸಿದೆ.

ವಿಧಾನಮಂಡಲ ಅಧಿವೇಶನ ಮುಗಿಯುತ್ತಿದ್ದಂತೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ–ಪಂಗಡದವರ ಮೀಸಲು ಪ್ರಮಾಣದ ಹೆಚ್ಚಳದ ನಿರ್ಧಾರ ಪ್ರಕಟಿಸಿದ್ದ ಬೆನ್ನಲ್ಲೇ, ಉಳಿದ ಸಮುದಾಯಗಳು ಮೀಸಲಾತಿ ಬೇಡಿಕೆಯನ್ನು ಮುಂದಿಟ್ಟು ಹೋರಾಟಕ್ಕೆ ಅಣಿಯಾಗಿದ್ದವು. ವಿಧಾನಸಭೆ ಚುನಾವಣೆ ಹೊತ್ತಿನಲ್ಲಿ ಮೀಸಲಾತಿ ಬೇಡಿಕೆಗಳು ಕಾವು ಪಡೆಯುತ್ತಿರುವುದನ್ನು ಅರಿತ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ, ಎರಡು ಪ್ರಬಲ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ನಿರ್ಣಯ ಕೈಗೊಂಡಿದೆ. ನಾಲ್ಕು ತಿಂಗಳಿನಲ್ಲಿ ನಡೆಯಲಿರುವ ಚುನಾವಣೆಗೆ ಮತಬ್ಯಾಂಕ್ ಅನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವತ್ತ ದೃಷ್ಟಿ ನೆಟ್ಟಿದೆ.

ಮೀಸಲಾತಿ ಪ್ರವರ್ಗ ಪುನರ್‌ರಚನೆ ಮಾಡಿದ್ದು, 'ಪ್ರವರ್ಗ 3 ಎ'ನಲ್ಲಿದ್ದ ಒಕ್ಕಲಿಗ ಸಮುದಾಯವನ್ನು ಹೊಸದಾಗಿ ರೂಪಿಸಿರುವ '2 ಸಿ' ಪ್ರವರ್ಗದಡಿ ತರಲಾಗಿದೆ. ಪ್ರವರ್ಗ 2 ಎಗೆ ಪಟ್ಟು ಹಿಡಿದಿದ್ದ ಪಂಚಮಸಾಲಿ ಸಮುದಾಯಕ್ಕೆ ಅದನ್ನು ನೀಡಿಲ್ಲ.

6ನೇ ಪುಟ ನೋಡಿ

ಯಾವ ಪ್ರವರ್ಗದಲ್ಲಿ ಯಾವ ಜಾತಿ

- ಪರಿಶಿಷ್ಟ ಜಾತಿ (ಹೊಲೆಯ, ಮಾದಿಗ, ಬೋವಿ, ಲಂಬಾಣಿ, ಕೊರಚ, ಕೊರಮ ಸೇರಿ 101 ಜಾತಿಗಳು)
- ಪರಿಶಿಷ್ಟ ಪಂಗಡ (ವಾಲ್ಮೀಕಿ, ನಾಯಕ, ಸೋಲಿಗರು, ಕುರುಮಾನ್ ಸೇರಿದಂತೆ 50 ಜಾತಿಗಳು)
- ಹಿಂದುಳಿದ ವರ್ಗಗಳ ಪ್ರವರ್ಗ 1 (ಗಂಗಾಮತಸ್ಥ, ಉಪ್ಪಾರ, ಗೊಲ್ಲ ಸೇರಿ 95 ಜಾತಿಗಳು)
- ಹಿಂದುಳಿದ ವರ್ಗಗಳ ಪ್ರವರ್ಗ 2ಎ (ಕುರುಬ, ಈಡಿಗ, ವಿಶ್ವಕರ್ಮ, ಕುಂಬಾರ, ಸವಿತಾ ಸಮಾಜ, ದೇವಾಂಗ, ನೇಕಾರ, ಮಡಿವಾಳ ಸೇರಿ 102 ಜಾತಿಗಳು)
- ಹಿಂದುಳಿದ ವರ್ಗಗಳ ಪ್ರವರ್ಗ 2ಬಿ (ಮುಸ್ಲಿಂ ಮತ್ತು ಅದರಲ್ಲಿರುವ ಉಪ ಜಾತಿಗಳು),
- ಹಿಂದುಳಿದ ವರ್ಗಗಳ ಪ್ರವರ್ಗ 2ಸಿ (ಒಕ್ಕಲಿಗ, ಒಕ್ಕಲಿಗರ ಉಪಜಾತಿಗಳು, ರೆಡ್ಡಿ, ಕಮ್ಮ,ನಾಯ್ಡು, ಬಲಿಜ, ಬಂಟ, ಕೊಡಗರು)
- ಹಿಂದುಳಿದ ವರ್ಗಗಳ ಪ್ರವರ್ಗ 2 ಡಿ (ವೀರಶೈವ ಲಿಂಗಾಯತ, ಪಂಚಮಸಾಲಿ, ಲಿಂಗಾಯತ ಉಪಜಾತಿಗಳು, ಕ್ರಿಶ್ಚಿಯನ್)

ರಾಜ್ಯದಲ್ಲಿ ಮೀಸಲಾತಿ– ಲೆಕ್ಕಾಚಾರ

ಪ್ರವರ್ಗ	ಮೀಸಲಾತಿ ಪ್ರಮಾಣ (ಶೇ)
ಪರಿಶಿಷ್ಟ ಜಾತಿ	17
ಪರಿಶಿಷ್ಟ ಪಂಗಡ	7
ಪ್ರವರ್ಗ–1	4
ಪ್ರವರ್ಗ–2ಎ	15
ಪ್ರವರ್ಗ–2ಬಿ	4
ಪ್ರವರ್ಗ–2ಸಿ	7
ಪ್ರವರ್ಗ–2ಡಿ	9
ಇಡಬ್ಲ್ಯುಎಸ್ (ಬ್ರಾಹ್ಮಣ, ಆರ್ಯ ವೈಶ್ಯ, ನಾಯರ್, ಮೊದಲಿಯಾರ್)	3
ಒಟ್ಟು	66

'ಪೂರ್ಣ ವರದಿ ನೋಡಿಕೊಂಡು ಮುಂದಿನ ಹೆಜ್ಜೆ'

ಬೆಳಗಾವಿ: 'ಸರ್ಕಾರ ಸದನದಲ್ಲಿ ಪ್ರಸ್ತಾಪಿಸಿರುವ 2ಡಿ ಮೀಸಲಾತಿಯಲ್ಲಿ ಪಂಚಮಸಾಲಿ ಸಮುದಾಯಕ್ಕೆ ಏನು ಸಿಗುತ್ತದೆ ಎಂಬುದು ಸ್ಪಷ್ಟವಾಗಿಲ್ಲ. ಇದರ ಪ್ರತಿಗಳು ಸಹಿಯಾಗಿ ಹೊರಬಂದ ಬಳಿಕ ಪೂರ್ಣ ಅಧ್ಯಯನ ಮಾಡಿ, ಮುಂದಿನ ಹೆಜ್ಜೆ ಇಡಲಾಗುವುದು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಗುರುವಾರ ಪ್ರತಿಕ್ರಿಯಿಸಿದರು.

6ನೇ ಪುಟ ನೋಡಿ

ಮಹದಾಯಿ ಯೋಜನೆ ಡಿಪಿಆರ್‌ಗೆ ಹಸಿರು ನಿಶಾನೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ನಾಲ್ಕು ತಿಂಗಳುಗಳು ಉಳಿದಿರುವ ಹೊತ್ತಿನಲ್ಲಿ, ಮಹದಾಯಿ ಯೋಜನೆಯ (ಕಳಸಾ–ಬಂಡೂರಿ ನಾಲಾ ಯೋಜನೆ) ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗ ಅನುಮೋದನೆ ನೀಡಿದೆ.

ಈ ಯೋಜನೆಯು ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿದೆ.

ಮಹದಾಯಿ ನದಿ ನೀರು ವಿವಾದ ನ್ಯಾಯಾಧೀಕರಣವು 2018ರ ಆಗಸ್ಟ್ 14ರಂದು ಕಳಸಾ– ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿತ್ತು. ಬಳಿಕ ಕರ್ನಾಟಕ ಸರ್ಕಾರವು ಯೋಜನೆಯ ಪೂರ್ವ- ಕಾರ್ಯಸಾಧ್ಯತಾ ವರದಿಗಳನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು. ಇದನ್ನು ಪರಿಶೀಲಿಸಿದ ಆಯೋಗವು, 'ನ್ಯಾಯಮೂರ್ತಿ ಬಚಾವತ್ ಆಯೋಗದ ವರದಿಯ ಪ್ರಕಾರ, ಈ ಯೋಜನೆಗೆ ಕೃಷ್ಣಾ ನದಿ ತೀರದ ಇತರ ರಾಜ್ಯಗಳ ಅನುಮತಿ ಕೂಡ ಅಗತ್ಯ' ಎಂದು ಸ್ಪಷ್ಟಪಡಿಸಿತ್ತು.

12ನೇ ಪುಟ ನೋಡಿ

ಕಳಸಾ ಬಂಡೂರಿ: ತಕ್ಷಣವೇ ಕಾಮಗಾರಿಗೆ ಚಾಲನೆ– ಬೊಮ್ಮಾಯಿ

ಬೆಳಗಾವಿ: 'ಕಳಸಾ ಬಂಡೂರಿ ಪರಿಷ್ಕೃತ ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ತಕ್ಷಣವೇ ಟೆಂಡರ್ ಪ್ರಕ್ರಿಯೆ ಆರಂಭಿಸಿ, ಕಾಮಗಾರಿ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, 'ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವಾಗಲೇ ಪ್ರಧಾನಿ ನರೇಂದ್ರ ಮೋದಿ ಸಿಹಿ ಸುದ್ದಿ ನೀಡಿದ್ದಾರೆ. ಕೂಡಲೇ ಕಾಮಗಾರಿ ಕೈಗೊಳ್ಳಲು ಕ್ರಮಕೈಗೊಳ್ಳುತ್ತೇವೆ. ನಾವೇ ಅಡಿಗಲ್ಲು ಹಾಕಿ ದೊಡ್ಡ ಕಾರ್ಯಕ್ರಮ ಮಾಡಿ ಈ ಭಾಗದ ಜನರಿಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡುತ್ತೇವೆ' ಎಂದರು.

12ನೇ ಪುಟ ನೋಡಿ

ಉತ್ತರ ಕರ್ನಾಟಕ ಭಾಗದ ಜನರ ಬಹುಕಾಲದ ಬೇಡಿಕೆಯನ್ನು ಕೇಂದ್ರ ಸರ್ಕಾರ ಈಡೇರಿಸಿದೆ. ಯೋಜನೆ ಅನುಷ್ಠಾನದಿಂದ ಹುಬ್ಬಳ್ಳಿ, ಧಾರವಾಡ ನಗರಗಳ ನೀರಿನ ಬವಣೆ ನೀಗಲಿದೆ

ಪ್ರಲ್ಹಾದ ಜೋಷಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಾಸಸ್ಥಳದಿಂದಲೇ ವಲಸಿಗರ ಮತದಾನಕ್ಕೆ ಆರ್‌ವಿಎಂ ಅಭಿವೃದ್ಧಿ

ನವದೆಹಲಿ (ಪಿಟಿಐ): ವಲಸಿಗ ಮತದಾರರು ತಾವಿರುವ ಸ್ಥಳದಿಂದಲೇ ಮತದಾನ ಮಾಡಲು ಅನುವಾಗುವಂತೆ ದೂರನಿಯಂತ್ರಿತ ವಿದ್ಯುನ್ಮಾನ ಮತಯಂತ್ರದ (ಆರ್‌ವಿಎಂ) ಮಾದರಿಯನ್ನು ಕೇಂದ್ರ ಚುನಾವಣಾ ಆಯೋಗವು ಅಭಿವೃದ್ಧಿಪಡಿಸಿದೆ.

ಆರ್‌ವಿಎಂ ಕಾರ್ಯಶೈಲಿಯ ಬಗ್ಗೆ ಆಯೋಗವು ರಾಜಕೀಯ ಪಕ್ಷಗಳಿಗೆ ಜ.16ರಂದು ಪ್ರಾತ್ಯಕ್ಷಿಕೆ ನೀಡಲಿದೆ. ನೂತನ ಸೌಲಭ್ಯ ಜಾರಿಗೆ ಬಂದರೆ ವಲಸಿಗರು ತಾವು ವಾಸವಿರುವ ಸ್ಥಳದಿಂದಲೇ ಮತದಾನ ಮಾಡಬಹುದು. ಮತದಾನ ಮಾಡಲೆಂದೇ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿರುವ ಹುಟ್ಟೂರಿಗೆ ಪ್ರಯಾಣಿಸುವ ಅಗತ್ಯ ಬರುವುದಿಲ್ಲ.

ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಿಸುವುದು ಇದರ ಉದ್ದೇಶ. ಇವಿಎಂಗಳ ಮಾದರಿಯಲ್ಲಿಯೇ ಆರ್‌ವಿಎಂ ಇರಲಿದೆ. ದೃಢವಾಗಿದ್ದು, ಲೋಪಕ್ಕೆ ಅವಕಾಶ ಇರುವುದಿಲ್ಲ. ಇಂಟರ್‌ನೆಟ್ ಸಂಪರ್ಕ ಕಲ್ಪಿಸಲಾಗುವುದಿಲ್ಲ ಎಂದು ಆಯೋಗ ಹೇಳಿದೆ.

ಪ್ರಾತ್ಯಕ್ಷಿಕೆ ಹಾಗೂ ಆರ್‌ವಿಎಂ ಕಾರ್ಯಶೈಲಿ ವಿವರಿಸಲು ಮಾನ್ಯತೆ ಪಡೆದ ಎಂಟು ರಾಷ್ಟ್ರೀಯ ಮತ್ತು 57 ಪ್ರಾದೇಶಿಕ ಪಕ್ಷಗಳಿಗೆ ಆಯೋಗ ಆಹ್ವಾನ ಕಳುಹಿಸಿದೆ.

13ನೇ ಪುಟ ನೋಡಿ

ಫುಟ್‌ಬಾಲ್ ದಿಗ್ಗಜ ಪೆಲೆ ಇನ್ನಿಲ್ಲ



ಸಾವೊ ಪಾಲೊ, ಬ್ರೆಜಿಲ್ (ಎಎಫ್‌ಪಿ): ಬ್ರೆಜಿಲ್‌ನ ಫುಟ್‌ಬಾಲ್ ದಿಗ್ಗಜ ಪೆಲೆ ಎಂದೇ ಖ್ಯಾತರಾಗಿರುವ ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ (82) ಗುರುವಾರ ರಾತ್ರಿ ಇಲ್ಲಿ ಕ್ಯಾನ್ಸರ್‌ನಿಂದ ನಿಧನರಾದರು.

ವಿವರ ಪುಟ 14

ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಕರ್ತವ್ಯದಿಂದ ಬಿಡುಗಡೆಗೆ ಸುತ್ತೋಲೆ

ಅತಿಥಿ ಉಪನ್ಯಾಸಕರು ಮತ್ತೆ ಅತಂತ್ರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಡಿಸೆಂಬರ್ ಅಂತ್ಯದ ಒಳಗೆ ಕರ್ತವ್ಯದಿಂದ ಬಿಡುಗಡೆ ಮಾಡಲು ಸರ್ಕಾರ ಹೊರಡಿಸಿದ ಸುತ್ತೋಲೆಗೆ ಆಕ್ರೋಶ ವ್ಯಕ್ತವಾಗಿದೆ.

ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ ಸೇವಾಂಕ ದೊರಕದೆ, ಸೇವಾಭದ್ರತೆ ಇಲ್ಲದೆ ಉದ್ಯೋಗ ಖಾತ್ರಿ, ಹಣ್ಣು, ತರಕಾರಿ ಮಾರಾಟ ಮತ್ತಿತರ ಅರೆಕಾಲಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅತಿಥಿ ಉಪನ್ಯಾಸಕರಿಗೆ ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲೇ ಬಿಡುಗಡೆಗೆ ಸುತ್ತೋಲೆ ಹೊರಡಿಸಿರುವುದು ಮತ್ತಷ್ಟು ಸಂಕಷ್ಟ ತಂದಿದೆ.

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ 15 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದರು. ಕಡಿಮೆ ಗೌರವಧನಕ್ಕೆ ದುಡಿಯುತ್ತಿದ್ದ ಅವರು ಸೇವಾ ಭದ್ರತೆ, ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ, ದಶಕದಿಂದ ಹೋರಾಟ ನಡೆಸುತ್ತಿದ್ದರು. ಸರ್ಕಾರ ವರ್ಷದ ಹಿಂದೆ ಅತಿಥಿ ಉಪನ್ಯಾಸಕರ ನೇಮಕಾತಿ ನಿಯಮಗಳಲ್ಲಿ ಬದಲಾವಣೆ ಮಾಡಿ, ಗೌರವಧನ ಹೆಚ್ಚಳದ ನೆಪದಲ್ಲಿ ಉಪನ್ಯಾಸದ ಅವಧಿಯನ್ನು ವಾರಕ್ಕೆ ಎಂಟು ಗಂಟೆಗಳಿಂದ 15 ಗಂಟೆಗಳಿಗೆ ಹೆಚ್ಚಿಸಿತು.

7ನೇ ಪುಟ ನೋಡಿ

ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬಿಡುಗಡೆಗೆ ಸೂಚಿಸಿರುವುದು ಸರಿಯಲ್ಲ. ಯಥಾಸ್ಥಿತಿ ಮುಂದುವರಿಸಲು ಆಗ್ರಹಿಸಿ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳುತ್ತೇವೆ

ಡಾ.ಎಚ್.ಸೋಮಶೇಖರ ಶಿವೊಗ್ಗಿ, ಅಧ್ಯಕ್ಷ, ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

ಅಸಾಮಾನ್ಯ ಬದುಕಿನ ಶಿಲ್ಪಿ ಕಾಮರೂಪಿ 7

ಬಿಜೆಪಿ ಫ್ಲೆಕ್ಸ್‌ಗಳಲ್ಲಿ ಪಕ್ಷೇತರ ಸಂಸದೆ ಚಿತ್ರ 8

'ಕಾಂಗ್ರೆಸ್ ವಿಷನ್–2023' ವೆಬ್‌ಸೈಟ್‌ಗೆ ಚಾಲನೆ ● ಹಿಂದಿನ ಪ್ರಣಾಳಿಕೆಯ ಬಹುತೇಕ ಭರವಸೆ ಈಡೇರಿಕೆ

'ಜನಾಭಿಪ್ರಾಯ ಆಧರಿಸಿ ಕಾಂಗ್ರೆಸ್ ಪ್ರಣಾಳಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರ ಅಭಿಪ್ರಾಯವನ್ನು ಆಲಿಸಿ, ಅವರ ಬೇಡಿಕೆಗಳಿಗೆ ಪೂರಕವಾಗಿ ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಣಾಳಿಕೆಯನ್ನು ರೂಪಿಸಲಿದೆ ಎಂದು ಕೆಪಿಸಿಸಿ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಕಾಂಗ್ರೆಸ್ ವಿಷನ್–2023' ವೆಬ್‌ಸೈಟ್‌ಗೆ ಚಾಲನೆ ನೀಡಿದರು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ, ಕೆ.ಇ. ರಾಧಾಕೃಷ್ಣ, ರಾಜೀವ್ ಗೌಡ ಮತ್ತು ಹುಸೇನ್ ಉಪಸ್ಥಿತರಿದ್ದರು.

ಬಳಿಕ ಮಾತನಾಡಿದ ಪರಮೇಶ್ವರ ಅವರು, 'ಜನಸಮುದಾಯದ ಭಾವನೆ, ನಿರೀಕ್ಷೆಗಳನ್ನು ಅರಿತು ಚುನಾವಣಾ ಪ್ರಣಾಳಿಕೆ ರೂಪಿಸಲು ನಿರ್ಧರಿಸಿದ್ದೇವೆ. ಅದಕ್ಕಾಗಿ ಜನರ ಬಳಿಯೇ ಹೋಗಿ ಅಭಿಪ್ರಾಯ ಆಲಿಸುತ್ತೇವೆ. ವೆಬ್‌ಸೈಟ್ ಮೂಲಕವೂ ಜನರ ಅಭಿಪ್ರಾಯ, ಸಲಹೆಗಳನ್ನು ಸ್ವೀಕರಿಸುತ್ತೇವೆ' ಎಂದರು.



ಕಾಂಗ್ರೆಸ್ ಪ್ರಣಾಳಿಕೆ ಸಮಿತಿಯು 'ಕಾಂಗ್ರೆಸ್ ವಿಷನ್–2023' ವೆಬ್‌ಸೈಟ್‌ಗೆ ಗುರುವಾರ ಚಾಲನೆ ನೀಡಿತು. ಸಮಿತಿ ಅಧ್ಯಕ್ಷ ಪರಮೇಶ್ವರ, ಪ್ರಮುಖರಾದ ರಾಜೀವ್ ಗೌಡ, ಕೆ.ಇ. ರಾಧಾಕೃಷ್ಣ, ಸಲೀಂ ಅಹಮದ್, ಮಧುಬಂಗಾರಪ್ಪ, ಹುಸೇನ್ ಇದ್ದರು – ಪ್ರಜಾವಾಣಿ ಚಿತ್ರ

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿನ ಬಹುತೇಕ ಭರವಸೆಗಳನ್ನು ಈಡೇರಿಸಲಾಗಿತ್ತು. ಅದೇ ರೀತಿಯಲ್ಲಿ ಈ ಬಾರಿಯೂ ಅನುಷ್ಠಾನಕ್ಕೆ ಯೋಗ್ಯವಾದಂತಹ ಭರವಸೆಗಳನ್ನು ನೀಡಲಾಗುವುದು. ವಿವಿಧ ಹಂತಗಳಲ್ಲಿ ಅನುಷ್ಠಾನಕ್ಕೆ ತರಬಹುದಾದ ಕಾರ್ಯಕ್ರಮಗಳನ್ನು ಗುರುತಿಸಿ, ವರ್ಗೀಕರಿಸಿ ಪ್ರಕಟಿಸಲಾಗುವುದು ಎಂದು ಹೇಳಿದರು.

ವಿವಿಧ ಸಮುದಾಯ, ವರ್ಗದ ಜನರ ಸಮಸ್ಯೆಗಳನ್ನು ಅರಿತು ಅವುಗಳನ್ನು ಪರಿಹರಿಸುವ ನಿಟ್ಟನಲ್ಲಿ ಪ್ರಣಾಳಿಕೆಯಲ್ಲಿ ಕಾರ್ಯಕ್ರಮಗಳನ್ನು ಪ್ರಕಟಿಸಲಾಗುವುದು. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಆದ್ಯತೆಯಾಗಿ ಪರಿಗಣಿಸುವ ಹತ್ತು ವಿಷಯಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಅದೇ ರೀತಿಯಲ್ಲಿ ರಾಜ್ಯದ ಎಲ್ಲ ಭಾಗಗಳ ಸಮಸ್ಯೆಗಳಿಗೂ ಪ್ರಣಾಳಿಕೆಯಲ್ಲಿ ಸ್ಪಂದಿಸಲಾಗುವುದು ಎಂದರು.

ಮಹಿಳೆಯರು, ಯುವಜನರ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಪ್ರಣಾಳಿಕೆಯಲ್ಲಿ ಪ್ರತಿಕ್ರಿಯಿಸಲಾಗುವುದು. ಕೃಷಿ, ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಬೆಂಗಳೂರು ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಅವರು ಹೇಳಿದರು.

ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ ಎದುರಿಸಲು ಕಾಂಗ್ರೆಸ್ ಸಿದ್ಧವಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಟಿಕೆಟ್‌ಗೆ ಹೆಚ್ಚಿನ ಬೇಡಿಕೆ ಇದೆ. ಸಾವಿರಾರು ಅರ್ಜಿಗಳು ಸಲ್ಲಿಕೆಯಾಗಿವೆ. ಸ್ಥಳೀಯ ಮಟ್ಟದಿಂದ ಶಿಫಾರಸು ಪಡೆದು ಪಕ್ಷದ ವರಿಷ್ಠರು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ ಎಂದು ಪರಮೇಶ್ವರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಳ ಮೀಸಲು ಕುರಿತು ಪ್ರಣಾಳಿಕೆಯಲ್ಲಿ ಸ್ಪಷ್ಟತೆ: ಪರಮೇಶ್ವರ

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ತನ್ನ ನಿಲುವನ್ನು ಸ್ಪಷ್ಟಪಡಿಸಲಿದೆ' ಎಂದು ಕೆಪಿಸಿಸಿ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಹೇಳಿದರು.

'ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರವೇ ಒಳ ಮೀಸಲಾತಿ ಕುರಿತು ಅಧ್ಯಯನ ನಡೆಸಲು ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗ ರಚಿಸಿತ್ತು. ವರದಿಯನ್ನು ಸದನದಲ್ಲಿ ಮಂಡಿಸುವಂತೆ ಈಗಲೂ ಆಗ್ರಹಿಸುತ್ತಿದ್ದೇವೆ' ಎಂದರು.

ವೈರಾಣು ಜ್ವರ: ಮಕ್ಕಳು, ವೃದ್ಧರಲ್ಲಿ ಹೆಚ್ಚಳ

ಬೆಂಗಳೂರು: 'ಹವಾಮಾನ ವೈಪರೀತ್ಯದಿಂದ ಕಳೆದ ಎರಡು ವಾರಗಳಲ್ಲಿ ವೈರಾಣು ಜ್ವರ ಪ್ರಕರಣಗಳು ವೃದ್ಧರಲ್ಲಿ ಶೇ 30ರಷ್ಟು ಹಾಗೂ ಮಕ್ಕಳಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ' ಎಂದು ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

'ಕೆಲ ದಿನಗಳಿಂದ ಮಳೆ ಕಡಿಮೆಯಾದರೂ ಚಳಿಯ ವಾತಾವರಣ ಇದೆ. ಇದರಿಂದಾಗಿ ಮಕ್ಕಳು ಹಾಗೂ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಅನಾರೋಗ್ಯ ಪೀಡಿತರಾಗುತ್ತಿದ್ದು, ಹೆಚ್ಚಿನವರು ಜ್ವರ, ಉಸಿರಾಟದ ಸಮಸ್ಯೆ, ಗಂಟಲು ನೋವು ಸಮಸ್ಯೆ ಸಂಬಂಧ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ವೃದ್ಧರಲ್ಲಿ ಕೀಲು ನೋವಿನ ಸಮಸ್ಯೆ ಶೇ 20ರಷ್ಟು ಏರಿಕೆಯಾಗಿದೆ. ಇದಲ್ಲದೆ, ಟೈಫಾಯಿಡ್, ಡೆಂಗಿ, ಮಲೇರಿಯಾ ಮತ್ತು ಚಿಕೂನ್‌ಗುನ್ಯಾ ಪ್ರಕರಣಗಳೂ ಪತ್ತೆಯಾಗುತ್ತಿವೆ' ಎಂದು ಆಸ್ಪತ್ರೆಯ ಆಂತರಿಕ ವೈದ್ಯಕೀಯ ಸಮಾಲೋಚಕಿ ಡಾ. ನಿಧಿ ಮೋಹನ್ ತಿಳಿಸಿದ್ದಾರೆ.

'ಚಳಿಗಾಲದ ಅವಧಿಯಲ್ಲಿ ತಾಜಾ ಮತ್ತು ಬೆಚ್ಚಗಿನ ಆಹಾರ ಸೇವಿಸಬೇಕು. ಕೈ, ಕಾಲು ಮತ್ತು ಬಾಯಿಯ ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಮನೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ದೂಳಿನಿಂದಲೂ ಅಲರ್ಜಿಯಂತಹ ಅನಾರೋಗ್ಯ ಸಮಸ್ಯೆ ಕಾಣಿಸಿಕೊಳ್ಳಲಿದೆ. ಹೊರಗಡೆ ಓಡಾಡುವಾಗ ಮುಖಗವಸು ಧರಿಸುವುದು ಉತ್ತಮ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಗರದಲ್ಲಿ ಇಂದು

ರಾಜ್ಯ ಮಟ್ಟದ ಸಂಗೀತ ಸಂಭ್ರಮ, ಕವಿಗೋಷ್ಠಿ ಹಾಗೂ ಸಾಧಕರಿಗೆ ಸನ್ಮಾನ: ಉದ್ಘಾಟನೆ: ಎನ್.ಎ. ಹ್ಯಾರಿಸ್, ಅಧ್ಯಕ್ಷತೆ: ಪಿ. ಶಿವಕುಮಾರ್, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಎಂ.ಆರ್. ವೆಂಕಟೇಶ್, ಮಹೇಂದ್ರ ಮುನೋತ್, ಕೃಷ್ಣಕುಮಾರ್ ಎನ್.ಜಿ., ಅಬ್ಬಾಸ್, ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಮಂಜುನಾಥ, ರಮೇಶ್, ಆಯೋಜನೆ: ಜಾಗೃತಿ ಟ್ರಸ್ಟ್, ಸ್ಥಳ: ಶಾಂತಿನಗರ, ರಿಚ್‌ಮಂಡ್ ಟೌನ್ ಉದ್ಯಾನ, ಬೆಳಿಗ್ಗೆ 10

ಜನಪದ ಝೇಂಕಾರ: ಉದ್ಘಾಟನೆ: ಸಿದ್ಧಲಿಂಗೇಶ ಕಣವಿ, ಅಧ್ಯಕ್ಷತೆ: ರಮೇಶ್ ಚಂದ್ರ, ಅತಿಥಿಗಳು: ಆರ್. ಚಂದ್ರಶೇಖರ್, ನಮ್ರತಾ, ಬೇಬಿ ಜ್ಞಾನ ಗುರುರಾಜ್, ಆಯೋಜನೆ: ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಶ್ರೀ ಕೃಷ್ಣ ಅರಮನೆ ಪಾರ್ಟಿ ಹಾಲ್, ಉಲ್ಲಾಳ ಮುಖ್ಯ ರಸ್ತೆ, ಮಧ್ಯಾಹ್ನ 3

ಕಾವೆಂಶ್ರೀ ಕಾವ್ಯಸೌರಭ: ಅಧ್ಯಕ್ಷತೆ: ಹಿರೇಮಗಳೂರು ಪ್ರದೀಪ್, ಅತಿಥಿ: ಎಂ. ಪುಟ್ಟರಾಜು, ಆಯೋಜನೆ: ಮಂದಾರ ಗಾಯನ ಚೇತನ್ ಟ್ರಸ್ಟ್, ಸ್ಥಳ: ಕ್ರಾಸ್ ಫೇಡ್ ಸ್ಟುಡಿಯೋ, ಸಿ.ಜೆ. ವೆಂಕಟೇಶ್‌ದಾಸ್ ರಸ್ತೆ, ಪದ್ಮನಾಭ ನಗರ, ಸಂಜೆ 4.30

ಆರ್.ಎಸ್.ಎನ್ ಗೌಡ ಅವರಿಗೆ ನುಡಿನಮನ: ಅತಿಥಿಗಳು: ಜಾಣಗೆರೆ ವೆಂಕಟರಾಮಯ್ಯ, ತಲಕಾಡು ಚಿಕ್ಕರಂಗೇಗೌಡ, ಹಿರಿಯೂರು ರಾಘವೇಂದ್ರ, ಗುರುರಾಜ್ ಹೊಸಕೋಟೆ, ಎಸ್. ಸಂಪತ್ ಕುಮಾರ್, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್ ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ ರಸ್ತೆ, ಸಂಜೆ 4.30

ಜಿ.ಕೃಷ್ಣಪ್ಪ ಅವರಿಗೆ ಅಭಿನಂದನೆ: ಅಭಿನಂದನೆ ಹಾಗೂ ಡಿಪ್ಲೊಮಾ ಇನ್ ಇ–ಆಫೀಸ್ ಮ್ಯಾನೇಜ್‌ಮೆಂಟ್ ಉದ್ಯೋಗಾಧಾರಿತ ಕಂಪ್ಯೂಟರ್ ಕೌಶಲ ತರಬೇತಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಸಿ. ಸೋಮಶೇಖರ್, ಅಧ್ಯಕ್ಷತೆ: ಶ್ರೀರಾಮೇಗೌಡ, ಉಪಸ್ಥಿತಿ: ಟಿ.ವಿ. ರಾಜು, ಕೆ. ಶೇಷಮೂರ್ತಿ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಸಂಸ್ಕೃತಿ ಭವನ, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡ ನಗರ, ಸಂಜೆ 4.30

ಲೆಫ್ಟಿನೆಂಟ್ ಕರ್ನಲ್ ಅಜಿತ್ ಭಂಡಾರ್ಕರ್ ಅವರ ಸತ್ಯ ಕಥೆ ಆಧಾರಿತ 'ದಿ ಸಾಗಾ ಆಫ್ ಬ್ರೇವ್‌ಹಾರ್ಟ್' ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ನಂತರ ಚರ್ಚೆ: ಅತಿಥಿಗಳು: ಮಾಯಾ ಚಂದ್ರ, ಶಕುಂತಲಾ ಅಜಿತ್ ಭಂಡಾರ್ಕರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸಂಜೆ 6.30

'ನಾಸ್ಟಾಲ್ಜಿಯಾ ಬೆಂಗಳೂರು–1' ವಿಷಯ ಆಧರಿಸಿದ ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಎಸ್. ತಿಪ್ಪೇಸ್ವಾಮಿ, ಮುಖ್ಯ ಅತಿಥಿ: ಕೆ.ಎನ್. ಶಾಂತಕುಮಾರ್, ಆಯೋಜನೆ: ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಸ್ಥಳ: ಬಿಸಿಐ ಫೋಟೊ ಗ್ಯಾಲರಿ, ದೊಮ್ಮಲೂರು, ಸಂಜೆ 6

ಸಹಕಾರ ಫಲಾನುಭವಿಗಳ ಸಮಾವೇಶ: ಉದ್ಘಾಟನೆ: ಅಮಿತ್ ಶಾ, ಸ್ವಸಹಾಯ ಗುಂಪುಗಳ ಫಲಾನುಭವಿಗಳಿಗೆ ಸಾಲ ವಿತರಣೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಡಾ. ಸಿ.ಎನ್. ಅಶ್ವತ್ಥನಾರಾಯಣ, ಎಸ್.ಟಿ. ಸೋಮಶೇಖರ್, ಆರಗ ಜ್ಞಾನೇಂದ್ರ, ಆಯೋಜನೆ: ಸಹಕಾರ ಇಲಾಖೆ, ಸ್ಥಳ: ಗಾಯಿತ್ರಿ ವಿಹಾರ, ಅರಮನೆ ಮೈದಾನ, ಸಂಜೆ 5

ಡಾ. ರಾಜ್, ನರಸಿಂಹರಾಜು, ಬಾಲಣ್ಣ, ಜಿ.ವಿ. ಅಯ್ಯರ್, ಸ್ಮರಣಾರ್ಥ ನಾಟಕ, ನೃತ್ಯ, ಸಂಗೀತ, ರಂಗಗೌರವ ಕಾರ್ಯಕ್ರಮ: ಉದ್ಘಾಟನೆ: ಚಂದ್ರಶೇಖರ್ ಆರ್., ಅತಿಥಿಗಳು: ದೊಡ್ಡ ರಂಗೇಗೌಡ, ಟಿ.ಎಸ್. ನಾಗಾಭರಣ, ಸುಧಾ ನರಸಿಂಹರಾಜು, ಆಯೋಜನೆ: ಗಾನ ಸಂಗಮ ಕಲಾ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ ರಸ್ತೆ, ಸಂಜೆ 5.15

ನೃತ್ಯ ಸಿರಿ: ಅತಿಥಿಗಳು: ಆರ್. ಚಂದ್ರಶೇಖರ್, ಉಷಾ ಬಸಪ್ಪ, ಅರುಣಾ ಗೋಪಿನಾಥ, ಭರತನಾಟ್ಯ ಪ್ರದರ್ಶನ: ವೀಣಾ ಗಂಗಾಧರ್ ಮತ್ತು ನಾಟ್ಯ ತರಂಗ ನೃತ್ಯಾಲಯದ ವಿದ್ಯಾರ್ಥಿಗಳು, ರೇಖಾ ದಿನೇಶ್ ಕುಮಾರ್ ಮತ್ತು ಬೆನಕ ನಾಟ್ಯ ಮಂದಿರದ ವಿದ್ಯಾರ್ಥಿಗಳು, ಸಂಸ್ಕೃತಿ ಕೇಶವನ್, ದರ್ಶಿನಿ ಮಂಜುನಾಥ್ ಮತ್ತು ನೃತ್ಯ ದಿಶಾ ಟ್ರಸ್ಟ್ ವಿದ್ಯಾರ್ಥಿಗಳು, ಆಯೋಜನೆ: ಸುಧೀಂದ್ರ ನೃತ್ಯ ಕಲಾನಿಕೇತನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.45

ಶಂಕರನಾಗ್ ನಾಟಕೋತ್ಸವ ಸಮಾರೋಪ ಸಮಾರಂಭ: ಅತಿಥಿಗಳು: ಬಿ.ಸುರೇಶ, ಮೈಮ್ ರಮೇಶ್, ಕೆ.ವಿ. ವೆಂಕಟರಮಣಪ್ಪ, ಅರೆಹೊಳೆ ಸದಾಶಿವ ರಾವ್, ಮಂಜುನಾಥ ಸೊಸ್ಲೆ, ಸುಧಾಕರ್, ನರೇಂದ್ರ ಬಾಬು, ಬಿ.ಟಿ ಮಂಜುನಾಥ, ಕೆ.ಎಂ. ಕೋಮಣ್ಣ, ಆಯೋಜನೆ: ರಂಗಪಯಣ, ಸ್ಥಳ:ರವೀಂದ್ರ ಕಲಾಕ್ಷೇತ್ರ, ಜೆ.ಸಿ ರಸ್ತೆ, ಸಂಜೆ 6

ಸಾಹಿತಿ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಅಭಿಮತ

‘ಇಂದಿನ ಪರಿಸ್ಥಿತಿಗೆ ಕುವೆಂಪು ಓದು ಔಷಧ’



ಕಾರ್ಯಕ್ರಮದಲ್ಲಿ (ಎಡದಿಂದ) ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ, ಕೆ. ಮರುಳಸಿದ್ದಪ್ಪ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಮತ್ತು ನ್ಯಾ.ಎ.ಜೆ. ಸದಾಶಿವ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹದಗೆಟ್ಟಿರುವ ಇಂದಿನ ಸಾಮಾಜಿಕ, ರಾಜಕೀಯ ಪರಿಸ್ಥಿತಿಗೆ ಕುವೆಂಪು ಅವರ ಓದು ಔಷಧವಾಗಲಿದೆ’ ಎಂದು ಸಾಹಿತಿ ಪ್ರೊ. ಎಸ್‌.ಜಿ. ಸಿದ್ಧರಾಮಯ್ಯ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರ ಹಾಗೂ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ನಗರದಲ್ಲಿ ಗುರುವಾರ ಜಂಟಿಯಾಗಿ ಆಯೋಜಿಸಿದ್ದ ಕುವೆಂಪು ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ‘20ನೇ ಶತಮಾನದ ಪೂರ್ವಾರ್ಧದಲ್ಲಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದ ಕುವೆಂಪು ಅವರು, ಯುಗಪ್ರಜ್ಞೆಯ ಕವಿಯಾಗಿದ್ದರು. ಅವರ ಬರಹ ದೇಶದ ಸಾಂಸ್ಕೃತಿಕ ಇತಿಹಾಸವನ್ನು ಸಮಗ್ರತೆಯಲ್ಲಿ ಸಂವೇದಿಸಿದಂತೆ ಕಟ್ಟಿತು. ರವೀಂದ್ರನಾಥ ಟ್ಯಾಗೋರ್ ಅವರಿಗೆ ಸಮವಾಗಿ ನಿಲ್ಲಬಲ್ಲ ಸಮಗ್ರ ದೃಷ್ಟಿಕೋನದ ಕವಿ ಕುವೆಂಪು. ಈ ದೇಶದ ಚರಿತ್ರೆ, ಪುರಾಣ ಪರಂಪರೆಯನ್ನು ಅರ್ಥ ಮಾಡಿಕೊಂಡಂತೆ ಅವರು ಸಾಹಿತ್ಯ ರಚಿಸಿದರು’ ಎಂದು ಹೇಳಿದರು.

‘ಈ ಹೊತ್ತಿನಲ್ಲಿ ಯುವಜನರು ಕುವೆಂಪು ಅವರನ್ನು ಓದುವ ಅಗತ್ಯವಿದೆ. ನಿರಂಕುಶಮತಿಗಳಾಗಿ ಬಾಳಬೇಕಾದರೆ ಕುವೆಂಪು ಅಧ್ಯಯನ ಅನಿವಾರ್ಯ’ ಎಂದರು.

ಸಾಹಿತಿ ಕೆ. ಮರುಳಸಿದ್ದಪ್ಪ, ‘ಕುವೆಂಪು ಅವರು ಕಾವ್ಯ, ನಾಟಕ, ಕಥೆ, ಕಾದಂಬರಿ ಸೇರಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ಸಾಹಿತ್ಯವು ವೈಚಾರಿಕ ಪ್ರಜ್ಞೆಯಿಂದ ಕೂಡಿರುತ್ತಿತ್ತು. ಅವರು ಕನ್ನಡಿಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿದರು. ಅವರ ವಿಚಾರಗಳನ್ನು ಪುನರ್ಮನನ ಮಾಡಿಕೊಳ್ಳಬೇಕು. ಅವರು ಈ ನಾಡಿಗೆ ಶಕ್ತಿಯಾಗಿದ್ದರು’ ಎಂದು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ, ‘ಕುವೆಂಪು ಅವರು ಬರವಣಿಗೆಗೆ ಸಂಬಂಧಿಸಿದಂತೆ ಯಾರ ಜತೆಗೂ ರಾಜಿ ಮಾಡಿಕೊಂಡಿರಲಿಲ್ಲ. ಅನ್ಯಾಯದ ವಿರುದ್ಧ ಎದ್ದು ನಿಲ್ಲುತ್ತಿದ್ದ ಗಟ್ಟಿ ಧ್ವನಿ ಅವರದ್ದಾಗಿತ್ತು. ಸಮಾಜದಲ್ಲಿ ಯಾವ ರೀತಿ ಬದುಕಬೇಕು ಎನ್ನುವುದನ್ನು ಅವರು ತೋರಿಸಿಕೊಟ್ಟರು’ ಎಂದು ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಇದ್ದರು.



ಕುವೆಂಪು ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನವನ್ನು ಲಾಲ್‌ಬಾಗ್ ಪಶ್ಚಿಮ ದ್ವಾರದ ಆವರಣದಲ್ಲಿ ಗುರುವಾರ ಕನ್ನಡ ಪುಸ್ತಕಗಳನ್ನು ವಿತರಣೆ ಮಾಡುವ ಮೂಲಕ ಆಚರಿಸಲಾಯಿತು. ವಿಶ್ವಮಾನವ ಪ್ರತಿಷ್ಠಾನದ ಅಧ್ಯಕ್ಷ ಎಂ. ಪುಟ್ಟರಾಜು, ತಾ.ಸಿ. ತಿಮ್ಮಯ್ಯ, ಅನಿಲ್ ಕುಮಾರ್, ಕಸಾಪ ನಗರ ಘಟಕದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಗಾಯಕರಾದ ಆನಂದ ಮಾದಲಗೆರೆ, ‘ಜೀವನ್ಮುಖಿ’ ಪತ್ರಿಕೆಯ ಸಂಪಾದಕ ಸುರೇಶ ಇದ್ದರು.



ನಗರದ ಮಲ್ಲೇಶ್ವರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಆಯೋಜಿಸಿದ್ದ ಕುವೆಂಪು ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕನ್ನಡಪರ ಹೋರಾಟಗಾರರು ಪಾಲನೇತ್ರ, ಬೇಂದ್ರೆ ಕೃಷ್ಣಪ್ಪ ಮತ್ತು ರಫಾಯಲ್ ರಾಜ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ತುಮಕೂರು ಹಿರೇಮಠಾಧ್ಯಕ್ಷ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಸಾಹಿತಿ ರಾಜಶೇಖರ ಮಠಪತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಮತ್ತು ರಾಜ್ಯಾಧ್ಯಕ್ಷ ಎಚ್. ಶಿವರಾಮೇಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ

2.5 ಲಕ್ಷ ನಲ್ಲಿ ಸಂಪರ್ಕಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಪೂರೈಕೆಗೆ 2.5 ಲಕ್ಷ ನಲ್ಲಿ ಸಂಪರ್ಕಕ್ಕೆ ಬೇಡಿಕೆ ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ದಿನೇಶ್ ಗೂಳಿಗೌಡ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿ, ‘ಕಳೆದ ನವೆಂಬರ್‌ವರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ 10.15 ಲಕ್ಷ ನಲ್ಲಿ ಸಂಪರ್ಕಗಳಿವೆ. ಹೊಸದಾಗಿ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರಿರುವ ಪ್ರದೇಶಗಳಲ್ಲಿ 2.5 ಲಕ್ಷ ನಲ್ಲಿ ಸಂಪರ್ಕ ಕಲ್ಪಿಸಬೇಕಿದೆ’ ಎಂದು ಮಾಹಿತಿ ನೀಡಿದ್ದಾರೆ.

2014ರಿಂದ ಈವರೆಗೆ ಬೆಂಗಳೂರು ಜಲ ಮಂಡಳಿಯು ನೀರಿನ ದರ ಪರಿಷ್ಕರಣೆ ಮಾಡಿಲ್ಲ. ಪ್ರಸ್ತುತ ನೀರು ಪೂರೈಕೆಯಿಂದ ಬೆಂಗಳೂರು ಜಲ ಮಂಡಳಿಗೆ ತಿಂಗಳಿಗೆ ₹ 115 ಕೋಟಿ ಸಂಗ್ರಹವಾಗುತ್ತಿದೆ ಎಂದು ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರ ಸಭಾತ್ಯಾಗ

ವಿಶೇಷ ಹೂಡಿಕೆ ಪ್ರದೇಶ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಾಂಗ್ರೆಸ್ ಸದಸ್ಯರ ಸಭಾತ್ಯಾಗದ ಮಧ್ಯೆಯೇ ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಮಸೂದೆಗೆ ವಿಧಾನ ಪರಿಷತ್‌ನಲ್ಲಿ ಗುರುವಾರ ಅನುಮೋದನೆ ನೀಡಲಾಯಿತು.

ಮಸೂದೆ ಮಂಡಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ‘ಉದ್ಯಮಗಳನ್ನು ಸ್ಥಾಪಿಸುವುದು ಸರಳಗೊಳಿಸುವ ನಿಟ್ಟಿನಲ್ಲಿ ಈ ಮಸೂದೆ ರೂಪಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸಹ ಈ ಮಸೂದೆಗೆ ಒಪ್ಪಿಗೆ ಸೂಚಿಸಿದೆ’ ಎಂದು ಪ್ರತಿಪಾದಿಸಿದರು.

ಮಸೂದೆಗೆ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಸ್ಥಳೀಯ ಸಂಸ್ಥೆಗಳನ್ನು ಕಡೆಗಣಿಸುವುದು ಈ ಮಸೂದೆಯಲ್ಲಿನ ಪ್ರಮುಖ ಅಂಶ. ರೈತರಿಂದ ಭೂಮಿ ಕುಸಿದುಕೊಳ್ಳುವ ಹುನ್ನಾರವೂ ಇದರಲ್ಲಿ ಅಡಗಿದೆ. ಸಚಿವರು ಉದ್ಯಮಿಯೂ ಆಗಿರುವುದರಿಂದ ಹಿತಾಸಕ್ತಿ ಸಂಘರ್ಷದ ಪ್ರಶ್ನೆಯೂ ಇಲ್ಲಿ ಉದ್ಭವವಾಗುತ್ತದೆ. ಹೀಗಾಗಿ, ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಅಥವಾ ಪರಿಶೀಲನಾ ಸಮಿತಿಗೆ ಒಪ್ಪಿಸಿ’ ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಪಿ.ಆರ್. ರಮೇಶ್ ಮಾತನಾಡಿ, ‘ಈ ಮಸೂದೆ ಸಂವಿಧಾನ ವಿರೋಧಿಯಾಗಿದೆ. ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಭಾಗಿಯಾಗಬೇಕು’ ಎಂದು ಪ್ರತಿಪಾದಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ‘ಕೆಐಎಡಿಬಿ ನಿವೇಶನಗಳು ಕೇವಲ ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳು ಮತ್ತು ಶಾಸಕರ ಪಾಲಾಗುತ್ತಿವೆ. ಕೆಲವರು ಐದು ನಿವೇಶನಗಳನ್ನು ಬೇರೆಯವರ ಹೆಸರಿನಲ್ಲಿ ಪಡೆದುಕೊಂಡಿದ್ದಾರೆ. ಒಬ್ಬ ಅಧಿಕಾರಿ ಹತ್ತು ನಿವೇಶನ ಪಡೆದುಕೊಂಡಿದ್ದಾರೆ. ಆದರೆ, ಪರಿಶಿಷ್ಟರಿಗೆ ಹತ್ತು ವರ್ಷವಾದರೂ ಸಿಗುತ್ತಿಲ್ಲ’ ಎಂದು ದೂರಿದರು.

‘ಈ ಮಸೂದೆ ರೈತರ ವಿರೋಧಿಯಾಗಿದೆ’ ಎಂದು ದೂರಿದ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.


‘ಉಪಪತ್ನಿಯರಿಗೂ ನಿವೇಶನ’

ಕೆಐಎಡಿಬಿಯ ನಿವೇಶನಗಳನ್ನು ಕೆಲವರು ಉಪಪತ್ನಿಯರ ಹೆಸರಿನಲ್ಲಿ ಪಡೆದುಕೊಂಡಿದ್ದಾರೆ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ನೀಡಿದ ಹೇಳಿಕೆ ಸದನದಲ್ಲಿ ನಗೆ ಉಕ್ಕಿತು.

ಈ ಶಬ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ತೇಜಸ್ವಿನಿಗೌಡ, ‘ಇಲ್ಲಿ ಗಂಭೀರ ವಿಷಯಗಳು ಚರ್ಚೆಯಾಗಬೇಕು. ಉಪಪತ್ನಿ ವಿಷಯದ ಬಗ್ಗೆ ಪದೇ ಪದೇ ಪ್ರಸ್ತಾಪಿಸುವುದು ಸಲ್ಲದು. ಯಾರು ಉಪಪತ್ನಿಯರು ಇದ್ದಾರೆ ಎಂದು ಹೇಳಿಕೊಳ್ಳುತ್ತಾರೋ ಅವರಿಗೆ ಧರ್ಮಪತ್ನಿಯರಿಂದ ಸೊಂಟ ಮುರಿಸ್ತೀವಿ’ ಎಂದು ಆಕ್ರೋಶದಿಂದ ಹೇಳಿದರು.

ನಿಧನ ವಾರ್ತೆ

ವಾಗೀಶ್



ಬೆಂಗಳೂರು: ಬಿಬಿಎಂಪಿ ಮಾಜಿ ಸದಸ್ಯ ವಾಗೀಶ್ ಅವರು ಹೃದಯಾಘಾತದಿಂದ ಗುರುವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ.

2010ರಲ್ಲಿ ಮಾರುತಿ ಮಂದಿರ ವಾರ್ಡ್ ಸದಸ್ಯರಾಗಿದ್ದ ಅವರು, ಮಾಜಿ ಮೇಯರ್, ಕಸಾಪ ಮಾಜಿ ಅಧ್ಯಕ್ಷ ಜಿ. ನಾರಾಯಣ್ ಅವರ ಮೊಮ್ಮಗ. ರಾವತ್ ಹಳ್ಳಿಯಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು.



ಬೆಳಗಾವಿ ಸುವರ್ಣಸೌಧದ ಆವರಣದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಮಹಾತ್ಮ ಗಾಂಧಿ, ಡಾ. ಬಿ. ಆರ್. ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಭೂಮಿ ಪೂಜೆ ನೆರವೇರಿಸಿದರು. ವಿಧಾನ ಪರಿಷತ್ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ, ಶಾಸಕಿ ಲಕ್ಷ್ಮಿ ಹೆಬ್ಬಾಳಕರ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರಾದ ಕೆ.ಎಸ್. ಈಶ್ವರಪ್ಪ, ಬಂಡೆಪ್ಪ ಕಾಶೆಂಪೂರ, ಸಚಿವರಾದ ಸಿ.ಸಿ. ಪಾಟೀಲ, ಗೋವಿಂದ ಕಾರಜೋಳ, ಶಶಿಕಲಾ ಜೊಲ್ಲೆ ಇದ್ದರು.

ಆಟದ ಮೈದಾನದಲ್ಲಿ ಕಾಂಕ್ರೀಟ್ ಕಾಮಗಾರಿ ಬೇಡ: ಮನವಿ

ಬೆಂಗಳೂರು: ಕೆಂಪೇಗೌಡ ನಗರದ ಬಸವನಗುಡಿ ರಸ್ತೆಯಲ್ಲಿರುವ ಬಿಬಿಎಂಪಿ–ಉದಯಭಾನು ಕಲಾಸಂಘ ಆಟದ ಮೈದಾನದ ಮಧ್ಯಭಾಗದಲ್ಲಿ ಕಾಂಕ್ರೀಟ್ ತಳಪಾಯ ಹಾಕಿ, ಅನಗತ್ಯ ಕಾಮಗಾರಿ ನಡೆಸಲಾಗುತ್ತಿದೆ ಎಂದು ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ ದೂರಿದರು.

‘ಹೈಕೋರ್ಟ್ ಮೆಟ್ಟಿಲೇರಿ ಆಟದ ಮೈದಾನವನ್ನು ಉಳಿಸಿಕೊಳ್ಳಲಾಗಿದೆ. ಆಟದ ಮೈದಾನವನ್ನಾಗಿಯೇ ಇದನ್ನು ರಕ್ಷಿಸಬೇಕಾಗಿದೆ. ಇಲ್ಲಿ ಅನಗತ್ಯವಾಗಿ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ. ಯಾವುದೇ ಕಟ್ಟಡ ಅಥವಾ ಆಟಿಕೆಗಳ ನಿರ್ಮಾಣ ಬೇಡ’ ಎಂದರು.

‘ಬಿಬಿಎಂಪಿ ದಕ್ಷಿಣ ವಲಯ ವಿಶೇಷ ಆಯುಕ್ತ ಮತ್ತು ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ಅವರು ಕ್ರಮ ಕೈಗೊಂಡು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದಾರೆ. ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಡಾ. ಉದಯ್ ಬಿ. ಗರುಡಾಚಾರ್ ಕಾಮಗಾರಿಯನ್ನೇ ರದ್ದುಪಡಿಸುವ ಆಶ್ವಾಸನೆ ನೀಡಿದ್ದಾರೆ’ ಎಂದು ನರಸಿಂಹ ತಿಳಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹ

ಬೆಂಗಳೂರು: ‘ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಯಲ್ಲಿ (ಕೆಎಸ್‌ಡಿಎಲ್) ಕಾಯಂ ನೌಕರರಿಗೆ ನೀಡುತ್ತಿರುವ ಕನಿಷ್ಠ ವೇತನವನ್ನು ಮಾರುಕಟ್ಟೆ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ನೀಡಬೇಕು’ ಎಂದು ಕೆಎಸ್‌ಡಿಎಲ್ ಮಾರ್ಕೆಟಿಂಗ್ ಸ್ಟಾಫ್ ಆ್ಯಂಡ್ ವರ್ಕರ್ಸ್ ಅಸೋಸಿಯೇಷನ್ ಒತ್ತಾಯಿಸಿದೆ.

‘ಬೆಂಗಳೂರು ಮಾರುಕಟ್ಟೆ ವಿಭಾಗದ ನೌಕರರಿಗೆ 5 ವರ್ಷಗಳಿಂದ ಬೋನಸ್ ನೀಡಿಲ್ಲ. ಇದೇ ವಿಭಾಗದಲ್ಲಿ 25 ವರ್ಷಗಳಿಂದ ಕೆಲಸ ಮಾಡುತ್ತಿರುವ ಎಲ್ಲ ನೌಕರರನ್ನು ಕಾಯಂಗೊಳಿಸಿ, ಆರೋಗ್ಯ ವಿಮೆಯ ಸೌಲಭ್ಯ ವಿಸ್ತರಿಸಬೇಕು. ಇಲ್ಲದಿದ್ದರೆ ಜ.9ರಂದು ಕೆಎಸ್‌ಡಿಎಲ್ ಕಾರ್ಖಾನೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಗುವುದು’ ಎಂದು ಅಸೋಸಿಯೇಷನ್ ಅಧ್ಯಕ್ಷ ಜಿ.ಆರ್. ಶಿವಶಂಕರ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಾರ್ಖಾನೆಯ ಉತ್ಪಾದನೆ ಮತ್ತು ಮಾರುಕಟ್ಟೆ ವಿಭಾಗದಲ್ಲಿ 1800ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರಿಗೆ ಯಾವುದೇ ರೀತಿಯ ಸೌಲಭ್ಯಗಳು ದೊರೆಯುತ್ತಿಲ್ಲ. ಜ. 5ರೊಳಗೆ ಆಡಳಿತ ಮಂಡಳಿಯ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಆಗ್ರಹಿಸಿದರು.

ಚಿತ್ರಾವಳಿ



ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಗುರುವಾರ ನಡೆದ ಪಂಚರತ್ನ ರಥಯಾತ್ರೆ ಸಮಯದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ನಾಣ್ಯದ ಹಾರ ಹಾಕಲಾಯಿತು. ಶಾಸಕ ಡಿ.ಸಿ. ಗೌರಿಶಂಕರ್ ಇತರರು ಇದ್ದಾರೆ



ಹಾವೇರಿಯಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ದೊಡ್ಡರಂಗೇಗೌಡ ಅವರಿಗೆ ಬೆಂಗಳೂರಿನ ನಿವಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಧಿಕೃತ ಆಹ್ವಾನ ನೀಡಿದರು. ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ ಹಾಗೂ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ಇದ್ದಾರೆ.



ಸಂಗೀತ ಸಂಜೆ..

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ(ಬಿಐಸಿ) ಗುರುವಾರ ಆಯೋಜಿಸಿದ್ದ 'ತಾಯೀ' ಕನ್ನಡ ರಂಗಭೂಮಿ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಹಿರಿಯ ರಂಗ ಕಲಾವಿದೆ ಹಾಗೂ ಗಾಯಕಿ ಬಿ.ಜಯಶ್ರೀ ಮತ್ತು ತಂಡದವರು ಗೀತೆಗಳನ್ನು ಪ್ರಸ್ತುತಪಡಿಸಿದರು. ಪ್ರಜಾವಾಣಿ ಚಿತ್ರ

ಮೂಲಸೌಕರ್ಯ ಕೊರತೆ • 200ಕ್ಕೂ ಹೆಚ್ಚು ಅಂಗಡಿಗಳು ಬಂದ್


ರಸೆಲ್ ಮಾರುಕಟ್ಟೆಗೆ ಬೇಕಿದೆ ಕಾಯಕಲ್ಪ

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದ ಪ್ರಮುಖ ಮತ್ತು ಪುರಾತನ ವಾಣಿಜ್ಯ ಕೇಂದ್ರಗಳಲ್ಲಿ ಒಂದಾಗಿರುವ ಶಿವಾಜಿನಗರದ ರಸೆಲ್ ಮಾರುಕಟ್ಟೆ ಮೂಲ ಸೌಲಭ್ಯಗಳ ಕೊರತೆ ಎದುರಿಸುತ್ತಿದ್ದು, 200ಕ್ಕೂ ಹೆಚ್ಚು ಅಂಗಡಿಗಳು ಬಂದಾಗಿವೆ.

ಅತ್ಯಂತ ಜನನಿಬಿಡ ಪ್ರದೇಶ ಆಗಿರುವ ಶಿವಾಜಿನಗರದಲ್ಲಿ ರಸೆಲ್ ಮಾರುಕಟ್ಟೆ ತನ್ನದೇ ಆದ ವಿಶೇಷ ಆಕರ್ಷಣೆಯನ್ನು ಇಂದಿಗೂ ಉಳಿಸಿಕೊಂಡಿದೆ. ಹೂವು, ಹಣ್ಣು, ತರಕಾರಿ, ಮಾಂಸ ಮತ್ತು ಮೀನಿನ ಅಂಗಡಿಗಳನ್ನು ಒಳಗೊಂಡಿದೆ. ಪ್ರವೇಶದ್ವಾರದ ಬಳಿ ಹೂವಿನ ಅಂಗಡಿಗಳಿದ್ದರೆ, ಕೊನೆಯಲ್ಲಿ ಮೀನಿನ ಅಂಗಡಿಗಳಿವೆ. ಒಟ್ಟಾರೆ 475 ಅಂಗಡಿಗಳು ಮಾರುಕಟ್ಟೆಯೊಳಗೆ ವ್ಯಾಪಾರ–ವಹಿವಾಟು ನಡೆಸುತ್ತಿವೆ.

'1857ರಲ್ಲಿ ನಿರ್ಮಾಣವಾದ ಶಿವಾಜಿನಗರ ಮಾರುಕಟ್ಟೆ 1927ರಲ್ಲಿ ವಿಸ್ತರಣೆಗೊಂಡಿತು. ಮೊದಲಿಗೆ ಅರ್ಧ ದಷ್ಟು ಮಾತ್ರ ಇದ್ದ ಮಾರುಕಟ್ಟೆ ಕಟ್ಟಡ 1927ರಲ್ಲಿ ಮುಂಭಾಗದ ಕಟ್ಟಡ ನಿರ್ಮಾಣವಾಯಿತು. ಮೂಲಸೌಕರ್ಯ ಕಲ್ಪಿಸುವ ಕಾಮ ಗಾರಿ ಕಾಲಕಾಲಕ್ಕೆ ನಡೆದಿದ್ದರೂ, 10 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆದಿಲ್ಲ' ಎಂದು ರಸೆಲ್ ಮಾರ್ಕೆಟ್ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇದ್ರೀಸ್ ಚೌಧರಿ ಬೇಸರ ವ್ಯಕ್ತಪಡಿಸಿದರು.



ರಸೆಲ್ ಮಾರುಕಟ್ಟೆಯ ಚಾವಣಿಗೆ ಹಾಕಿದ್ದ ತಗಡಿನ ಶೀಟ್ ಇಲ್ಲದಿರುವುದು. ಪ್ರಜಾವಾಣಿ ಚಿತ್ರ/ರಂಜು ಪಿ.

'1984ರ ನಂತರ ಇದುವರೆಗೂ ಬಿಬಿಎಂಪಿ ರಸೆಲ್ ಮಾರುಕಟ್ಟೆಯನ್ನು ಕಡೆಗಣನೆ ಮಾಡುತ್ತಿದೆ. ಸದ್ಯ ಮಾರುಕಟ್ಟೆಯ ಚಾವಣಿ ಶಿಥಿಲಗೊಂಡಿದ್ದು, ಕೆಲವು ಕಡೆ ತಗಡಿನ ಶೀಟ್‌ಗಳಿಲ್ಲದ ಕಾರಣ ಮಳೆ ಬಂದರೆ ಸೋರುವ ಪರಿಸ್ಥಿತಿ ನಿರ್ಮಾಣವಾಗಿದೆ. ಗಬ್ಬು ನಾರುವ ಕೊಳಚೆ ನೀರು, ಕೊಳೆತ ತರಕಾರಿ, ಹಣ್ಣುಗಳ ತ್ಯಾಜ್ಯ, ಎಲ್ಲೆಂದರಲ್ಲಿ ಬಿದ್ದಿರುವ ಕಸದಿಂದಾಗಿ ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ಇದೆ. ಮಾರುಕಟ್ಟೆಗೆ ಪ್ರವೇಶ ಕಲ್ಪಿಸುವ ಗೇಟ್‌ಗಳು ಮುರಿದ ಬಿದ್ದಿವೆ. ಇದರಿಂದ ಕಳ್ಳರ ಉಪಟಳ ಹೆಚ್ಚಾಗಿದೆ' ಎಂದು ತಿಳಿಸಿದರು.

'ಮೂಲ ಸೌಕರ್ಯ ಮತ್ತು ಸುರಕ್ಷತೆ ಕೊರತೆಯಿಂದ ಇಲ್ಲಿನ 200ಕ್ಕೂ ಹೆಚ್ಚು ಅಂಗಡಿಗಳು ಬಂದಾಗಿದ್ದು, ಇಲ್ಲಿನ ವ್ಯಾಪಾರಿಗಳು ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಮಾರುಕಟ್ಟೆಯ ಒಳಾಂಗಣಕ್ಕೆ ಬಣ್ಣ ಹಚ್ಚುವುದರ ಜೊತೆಗೆ ಸಮರ್ಪಕ ವಿದ್ಯುತ್ ವ್ಯವಸ್ಥೆ ಕಲ್ಪಿಸಬೇಕು. ಪಾರ್ಕಿಂಗ್ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಮಾರುಕಟ್ಟೆಯಲ್ಲಿರುವ ಗಡಿಯಾರ ಗೋಪುರವನ್ನು ದುರಸ್ತಿಗೊಳಿಸಬೇಕು' ಎಂದು ಬೇಡಿಕೆ ಮುಂದಿಟ್ಟರು.

> **ಮಾರುಕಟ್ಟೆಯ ವರ್ತಕರು ಅಂಗಡಿಗಳ ಬಾಕಿ ಇರುವ ಬಾಡಿಗೆ ಪಾವತಿಸಬೇಕು. ಸರ್ಕಾರದ ಅನುದಾನ ಬಳಸಿಕೊಂಡು ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು.**
> **ಸೈಫುದ್ದೀನ್,** ಬಿಬಿಎಂಪಿ ಶಿವಾಜಿನಗರ ವಲಯ ಕಾರ್ಯನಿರ್ವಾಹಕ ಎಂಜಿನಿಯರ್

'ಮಾರುಕಟ್ಟೆ ಬಂದ್ ಮಾಡುವ ಎಚ್ಚರಿಕೆ'

'ಸರ್ಕಾರ ಮತ್ತು ಬಿಬಿಎಂಪಿ ಕೂಡಲೇ ಐತಿಹಾಸಿಕ ರಸೆಲ್ ಮಾರುಕಟ್ಟೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮಾರುಕಟ್ಟೆಯನ್ನು ಸಂಪೂರ್ಣವಾಗಿ ಬಂದ್ ಮಾಡಿ ರಸ್ತೆಯ ಮೇಲೆ ವ್ಯಾಪಾರ ಮಾಡಲಾಗುವುದು' ಎಂದು ಮಹಮ್ಮದ್ ಇದ್ರೀಸ್ ಚೌಧರಿ ಎಚ್ಚರಿಕೆ ನೀಡಿದರು.

'ಜನಪ್ರತಿನಿಧಿಗಳು ಮತ್ತು ಬಿಬಿಎಂಪಿ ಅಧಿಕಾರಿಗಳು ಆಗಾಗ ಇಲ್ಲಿಯ ವರ್ತಕರೊಂದಿಗೆ ಸಭೆ ನಡೆಸುವುದು ಮಾಮೂಲು. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ' ಎಂದು ತಿಳಿಸಿದರು.

ಮಾರುಕಟ್ಟೆಗೆ ಅಗತ್ಯ ಮೂಲಸೌಕರ್ಯ ಒದಗಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಭರವಸೆ ನೀಡಿ ಮರೆಯುತ್ತಾರೆ. ಈ ಮಾರುಕಟ್ಟೆಯನ್ನು ಅನಾಥವಾಗಿ ಬಿಟ್ಟಿರುವುದು ಖಂಡನೀಯ' ಎಂದು ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

ಛಾಯಾಚಿತ್ರ ಸ್ಪರ್ಧೆ

ಕೊಪ್ಪಳ: ಇಲ್ಲಿನ ಪ್ರಸಿದ್ಧ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ.

ಜ. 8ರಿಂದ ಮೂರು ದಿನ ನಡೆಯುವ ಜಾತ್ರೆಯ ಛಾಯಾಚಿತ್ರಗಳನ್ನು ಮಾತ್ರ ತೆಗೆದು ಜ. 18ರ ಒಳಗೆ ಕಳುಹಿಸಬೇಕು. ಪ್ರಥಮ ₹ 10 ಸಾವಿರ, ದ್ವಿತೀಯ ₹ 7,500, ತೃತೀಯ ₹ 5,000 ಹಾಗೂ ಎರಡು ಸಮಾಧಾನಕರ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾಹಿತಿಗಾಗಿ ಸತೀಶ್ ಮುರಾಳ–99163 32447 ಅಥವಾ ನಾಭಿರಾಜ ದಸ್ತೇನವರ–94486 95067 ಅವರನ್ನು ಸಂಪರ್ಕಿಸಬಹುದು.

'ಅವರೆಬೇಳೆ ಮೇಳ' ಜ.5ರಿಂದ

ಬೆಂಗಳೂರು: ವಾಸವಿ ಕಾಂಡಿಮೆಂಟ್ಸ್ ಜ.5ರಿಂದ 9ರವರೆಗೆ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ 23ನೇ ವರ್ಷದ 'ಅವರೆಬೇಳೆ ಮೇಳ' ಆಯೋ ಜಿಸಿದೆ. 'ಅಪ್ಪು ಸ್ಪೆಷಲ್ ಪಾಯಸ' ವಿಶೇಷ ಖಾದ್ಯವಾಗಿದೆ.

ಗುರುವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಕಾಂಡಿಮೆಂಟ್ಸ್‌ನ ಮಾಲೀಕರಾದ ಗೀತಾ ಶಿವಕುಮಾರ್, 'ಕಳೆದ ವರ್ಷ ಕೊರೊನಾ ಕಾರಣದಿಂದ ಅವರೆಬೇಳೆ ಮೇಳವನ್ನು ಸರಳವಾಗಿ ಆಚರಣೆ ಮಾಡಲಾಗಿತ್ತು. ಈ ಬಾರಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ದೊಡ್ಡ ಮಟ್ಟದಲ್ಲಿ ಮೇಳ ನಡೆಯಲಿದೆ. ಅವರೇಕಾಯಿ ಬೆಳೆದ ರೈತರನ್ನು ಗುರುತಿಸಿ, ಸನ್ಮಾನಿಸಲಾಗುವುದು' ಎಂದರು.

ಸುಮಂಗಲಿ ಪೂಜೆ

ಬೆಂಗಳೂರು: ವೈಕುಂಠ ಏಕಾದಶಿ ಅಂಗವಾಗಿ ಪಾಂಡುರಂಗ ವಿಷ್ಣು ಸಹಸ್ರನಾಮ ಮಂಡಳಿಯಿಂದ ಜ. 1ರಂದು 'ಸುಮಂಗಲಿ ಪೂಜೆ, ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಮಹಾಯಜ್ಞ ಹಾಗೂ ಉಚಿತ ಆರೋಗ್ಯ ಶಿಬಿರ'ವನ್ನು ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿ ಅಧ್ಯಕ್ಷ ಜಯಕುಮಾರ್ ಎ.ಪಿ., 'ಮಲ್ಲೇಶ್ವರ ಆಟದ ಮೈದಾನ ಎದುರು ಜ.1ರಂದು (ಭಾನುವಾರ) ಸಂಜೆ 5ಕ್ಕೆ ಸುಮಂಗಲಿ ಪೂಜೆ ನಡೆಯಲಿದೆ. ಜ.2ರಂದು (ಸೋಮವಾರ) ಬೆಳಿಗ್ಗೆ 8 ಗಂಟೆಯಿಂದ 27 ಗಂಟೆಗಳ ಕಾಲ ನಿರಂತರ ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಮಹಾಯಜ್ಞ ನಡೆಯಲಿದೆ' ಎಂದರು.

'ಉಚಿತ ಆರೋಗ್ಯ ಶಿಬಿರದಲ್ಲಿ ನೇತ್ರ ತಪಾಸಣೆ, ಉಚಿತ ಕನ್ನಡಕ ವಿತರಣೆ, ಮಧುಮೇಹ ತಪಾಸಣೆ ಹಮ್ಮಿಕೊಳ್ಳಲಾಗಿದೆ' ಎಂದರು.

ಎಲೆಕ್ಟ್ರಿಕ್ ಬಸ್: ಶನಿವಾರದಿಂದ ಪರೀಕ್ಷಾರ್ಥ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಮಾತ್ರ ಇರುವ ಪರಿಸರಸ್ನೇಹಿ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಕೆಲವೇ ದಿನಗಳಲ್ಲಿ ಅಕ್ಕ–ಪಕ್ಕದ ನಗರಗಳಿಗೂ ವಿಸ್ತರಣೆ ಆಗುವ ಕಾಲ ಹತ್ತಿರವಾಗುತ್ತಿದೆ. ಕೆಎಸ್‌ಆರ್‌ಟಿಸಿಗೆ ಮೊದಲ ಎಲೆಕ್ಟ್ರಿಕ್ ಶನಿವಾರ ಬರಲಿದ್ದು, ಪರೀಕ್ಷಾರ್ಥ ಸಂಚಾರ ಆರಂಭವಾಗಲಿದೆ.

ಗುತ್ತಿಗೆ (ಜಿಸಿಸಿ) ಆಧಾರದಲ್ಲಿ 50 ಬಸ್‌ಗಳನ್ನು ಒದಗಿಸುವ ಹೊಣೆಯನ್ನು ಹೈದರಾಬಾದ್‌ನ ಇವಿ ಟ್ರಾನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ವಹಿಸಿಕೊಂಡಿದೆ. ವಿನ್ಯಾಸ ಸಿದ್ಧವಾಗಿದ್ದು, ಬಸ್ ಹೈದರಾಬಾದ್‌ನಿಂದ ಬೆಂಗಳೂರಿನತ್ತ ಹೊರಟಿದೆ.

'20 ದಿನಗಳ ಕಾಲ ಪರೀಕ್ಷಾರ್ಥ ಕಾರ್ಯಾಚರಣೆ ನಡೆಸಿ ಯಶಸ್ವಿಯಾದರೆ ಬಾಕಿ ಬಸ್‌ಗಳನ್ನು ತರಿಸಲಾಗುವುದು' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬಸ್‌ಗಳ ನಿರ್ವಹಣೆ, ಚಾರ್ಜಿಂಗ್ ವ್ಯವಸ್ಥೆ ಎಲ್ಲವನ್ನೂ ಗುತ್ತಿಗೆ ಪಡೆದಿರುವ ಕಂಪನಿಯೇ ನೋಡಿಕೊಳ್ಳಲಿದೆ. ಚಾಲಕರನ್ನು ಕಂಪನಿ ಒದಗಿಸಲಿದ್ದು, ಕೆಎಸ್‌ಆರ್‌ಟಿಸಿಯಿಂದ ನಿರ್ವಾಹಕರನ್ನು ನಿಯೋಜಿಸಲಾಗುತ್ತದೆ. ಬೆಂಗಳೂರಿನಿಂದ ಮೈಸೂರು, ಹಾಸನ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಸೇರಿ ಸುತ್ತಮುತ್ತಲ ನಗರಗಳಿಗೆ ಬಸ್ ನಿಯೋಜಿಸುವ ಚಿಂತನೆ ಇದೆ.

ಬಸ್‌ಗಳಿಗೆ ಹೆಸರು ಸೂಚಿಸಲು ಕೇಳಿದ್ದು, 20 ಸಾವಿರ ಮಂದಿ ಪ್ರತಿಕ್ರಿಯಿಸಿದ್ದಾರೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ವರ್ಷಾಚರಣೆ: ಪಾನಮತ್ತ ಕಿಡಿಗೇಡಿಗಳ ಸ್ಥಳಾಂತರಕ್ಕೆ ಆಂಬುಲೆನ್ಸ್ ● 1.70 ಲಕ್ಷ ಕ್ಯಾಮೆರಾ ಕಣ್ಗಾವಲು

ಕ್ಯಾಮೆರಾದಲ್ಲಿ ಮುಖಚಹರೆ ಸೆರೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆಗೆ ದಿನಗಣನೆ ಶುರುವಾಗಿದ್ದು, ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಕೈಗೊಳ್ಳಲು ಬೆಂಗಳೂರು ಕಮಿಷನರೇಟ್ ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ. ಸ್ಫೋಟ ಹಾಗೂ ಇತರೆ ಅವಘಡಗಳಿಗೆ ಆಸ್ಪದ ನೀಡದಂತೆ ಕ್ರಮ ಕೈಗೊಂಡಿರುವ ಪೊಲೀಸರು, ಸಾರ್ವಜನಿಕ ಸ್ಥಳಗಳಲ್ಲಿ ಸಂಭ್ರಮದಲ್ಲಿ ಪಾಲ್ಗೊಳ್ಳುವವರ ಮುಖಚಹರೆ ಸೆರೆ ಹಿಡಿಯುವುದನ್ನು ಕಡ್ಡಾಯಗೊಳಿಸಿದ್ದಾರೆ.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, 'ಎರಡು ವರ್ಷಗಳ ಬಳಿಕ ನಗರದಲ್ಲಿ ಹೊಸ ವರ್ಷವನ್ನು ಸಾರ್ವಜನಿಕವಾಗಿ ಆಚರಿಸಲಾಗುತ್ತಿದೆ. ಪೊಲೀಸ್ ಇಲಾಖೆಯ ಹಾಗೂ ಖಾಸಗಿಯವರ 1.70 ಲಕ್ಷ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಭದ್ರತೆಗಾಗಿ ಬಳಸಿಕೊಳ್ಳಲಾಗುತ್ತಿದೆ. 20 ಡ್ರೋನ್ ಕ್ಯಾಮೆರಾಗಳು ಹಾರಾಡಲಿವೆ. ಬ್ರಿಗೇಡ್ ರಸ್ತೆ, ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವ್ಯಕ್ತಿಯ ಮುಖಚಹರೆ ಸೆರೆ ಕಡ್ಡಾಯಗೊಳಿಸಲಾಗಿದೆ' ಎಂದರು.

'ಪ್ರವೇಶ ದ್ವಾರದಲ್ಲೇ ಕ್ಯಾಮೆರಾ ಇರಲಿದೆ. ಸಾರ್ವಜನಿಕರು ಮಾಸ್ಕ್ ತೆಗೆದು ಕ್ಯಾಮೆರಾಕ್ಕೆ ಮುಖ ತೋರಿಸಿ ಪ್ರವೇಶಿಸಬೇಕು. ಇದರ ನಿರ್ವಹಣೆ ಹೊಣೆಯನ್ನು ಪೊಲೀಸರು ಹಾಗೂ ವ್ಯಾಪಾರ ಸ್ಥಳಗಳ ಮಾಲೀಕರಿಗೆ ವಹಿಸಲಾಗಿದೆ. ಇದರಲ್ಲಿ ಲೋಪವಾದರೆ, ಅವರನ್ನೇ ಹೊಣೆಯನ್ನಾಗಿ ಮಾಡಲಾಗುವುದು' ಎಂದು ಅವರು ಎಚ್ಚರಿಸಿದರು.

'ಬ್ರಿಗೇಡ್ ರಸ್ತೆ, ಎಂ.ಜಿ.ರಸ್ತೆ, ಕೋರಮಂಗಲ, ಇಂದಿರಾನಗರ, ವೈಟ್‌ಫೀಲ್ಡ್ ಪ್ರದೇಶಗಳಲ್ಲಿ ಹೆಚ್ಚು ನಿಗಾ ವಹಿಸಲಾಗಿದೆ. ಭದ್ರತೆಗೆ 10 ಸಾವಿರ ಸಿಬ್ಬಂದಿ ನಿಯೋಜಿಸಲಾಗಿದೆ. ವಿಶೇಷ ಗೋಪುರಗಳಲ್ಲಿ ಸಿಬ್ಬಂದಿ ಕಾವಲು ಕಾಯಲಿದ್ದಾರೆ. ಜನರ ಜೊತೆಯಲ್ಲಿ ಮಫ್ತಿಯಲ್ಲಿಯೂ ಸಿಬ್ಬಂದಿ ಇರಲಿದ್ದಾರೆ. ಶ್ವಾನ ದಳ, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ನಗರದ ಪ್ರಮುಖ ಸ್ಥಳಗಳಲ್ಲಿ ಡಿ. 31ರಂದು ಬೆಳಿಗ್ಗೆಯಿಂದ ಪರಿಶೀಲನೆ ನಡೆಸಲಿದ್ದಾರೆ' ಎಂದು ಹೇಳಿದರು.

ಪಾನಮತ್ತ ಕಿಡಿಗೇಡಿಗಳ ಸ್ಥಳಾಂತರಕ್ಕೆ ಆಂಬುಲೆನ್ಸ್ ಬಳಕೆ: 'ಪಾನಮತ್ತರಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಕಿಡಿಗೇಡಿಗಳನ್ನು ಠಾಣೆಗೆ ಕರೆದೊಯ್ಯಲು ಸಾಧ್ಯವಿಲ್ಲ. ಹೀಗಾಗಿ, ಅಂಥವರನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸ್ಥಳಾಂತರಿಸಲು ಯೋಚಿಸಲಾಗಿದೆ. ಕೆಲ ಆಸ್ಪತ್ರೆಗಳಲ್ಲಿ ಈಗಾಗಲೇ ಪ್ರತ್ಯೇಕ ಆಸನಗಳನ್ನು ಕಾಯ್ದಿರಿಸಲಾಗಿದೆ' ಎಂದು ಪ್ರತಾಪ್ ರೆಡ್ಡಿ ಹೇಳಿದರು.

29 ದಿನಗಳಲ್ಲಿ 637 ಮಂದಿ ಬಂಧನ: 'ಹೊಸ ವರ್ಷಾಚರಣೆಗೆ ಡ್ರಗ್ಸ್ ಹಾವಳಿಯೂ ಇದೆ. ಇದರ ನಿಯಂತ್ರಣಕ್ಕೆ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದು, ಡಿ. 1ರಿಂದ 29ರವರೆಗೆ 547 ಪ್ರಕರಣ ದಾಖಲಿಸಿಕೊಂಡಿದ್ದಾರೆ. 637 ಮಂದಿಯನ್ನು ಬಂಧಿಸಿ, 344 ಕೆ.ಜಿ ಡ್ರಗ್ಸ್ ಜಪ್ತಿ ಮಾಡಿದ್ದಾರೆ' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಮಾತನಾಡಿದರು. ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ, ಹೆಚ್ಚುವರಿ ಕಮಿಷನರ್ ಸಂದೀಪ್ ಪಾಟೀಲ, ಜಂಟಿ ಕಮಿಷನರ್ (ಸಂಚಾರ) ಎಂ.ಎನ್. ಅನುಚೇತ್ ಇದ್ದರು – ಪ್ರಜಾವಾಣಿ ಚಿತ್ರ

ಭದ್ರತೆಗೆ ನಿಯೋಜನೆಗೊಂಡ ನಗರದ ಪೊಲೀಸರು	
ಹೆಚ್ಚುವರಿ ಕಮಿಷನರ್	2
ಜಂಟಿ ಕಮಿಷನರ್	2
ಡಿಸಿಪಿ	15
ಎಸಿಪಿ	45
ಇನ್‌ಸ್ಪೆಕ್ಟರ್	160
ಪಿಎಸ್‌ಐ	600
ಎಎಸ್‌ಐ	800
ಹೆಡ್ ಕಾನ್‌ಸ್ಟೆಬಲ್	1,800
ಕಾನ್‌ಸ್ಟೆಬಲ್	5200

ಭದ್ರತೆಗೆ ಬಳಸಿಕೊಳ್ಳುತ್ತಿರುವ ಹೊರ ಜಿಲ್ಲೆಗಳ ಪೊಲೀಸರು	
ಎಸಿಪಿಗಳು	20
ಇನ್‌ಸ್ಪೆಕ್ಟರ್	50
ಪಿಎಸ್‌ಐ	50
ಎಎಸ್‌ಐ, ಹೆಡ್‌ಕಾನ್‌ಸ್ಟೆಬಲ್, ಕಾನ್‌ಸ್ಟೆಬಲ್	1,300
ಕೆಎಸ್‌ಆರ್‌ಪಿ ತುಕಡಿ	52
ಸಿಎಆರ್ ತುಕಡಿ	25

ಪೊಲೀಸ್ ಸಹಾಯವಾಣಿ – 112

(ಯಾವುದೇ ಕಾನೂನು ಬಾಹಿರ ಚಟುವಟಿಕೆ, ಅನುಮಾನಾಸ್ಪದ ವಸ್ತು, ಡ್ರಗ್ಸ್ ಮಾರಾಟ ಕಂಡುಬಂದರೆ ಹಾಗೂ ತುರ್ತು ಸಹಾಯ ಬೇಕಾದರೆ ಸಾರ್ವಜನಿಕರು ಈ ಸಂಖ್ಯೆಗೆ ಮಾಡಬಹುದು)



ಹೊಸ ವರ್ಷಾಚರಣೆಗೆ ಹೆಚ್ಚು ಜನ ಸೇರುವ ಬ್ರಿಗೇಡ್ ರಸ್ತೆಯಲ್ಲಿ ಗುರುವಾರ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಸಿಬ್ಬಂದಿ ಅಳವಡಿಸಿದರು – ಪ್ರಜಾವಾಣಿ ಚಿತ್ರ

'ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆಯಲ್ಲಿ 3,000 ಸಿಬ್ಬಂದಿ'

'ಕೇಂದ್ರ ವಿಭಾಗದ ವ್ಯಾಪ್ತಿಯಲ್ಲಿರುವ ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಹೆಚ್ಚು ಜನರು ಸೇರುತ್ತಾರೆ. ಈ ಸ್ಥಳಗಳಲ್ಲಿ ಭದ್ರತೆಗೆ 3,000 ಸಿಬ್ಬಂದಿ ನಿಯೋಜಿಸಲಾಗಿದೆ' ಎಂದು ಪ್ರತಾಪ್ ರೆಡ್ಡಿ ಹೇಳಿದರು.

'ನಾಲ್ವರು ಡಿಸಿಪಿ, 10 ಎಸಿಪಿ, 30 ಇನ್‌ಸ್ಪೆಕ್ಟರ್ ಭದ್ರತೆಯಲ್ಲಿರಲಿದ್ದಾರೆ. ಮಹಿಳೆಯರ ಸುರಕ್ಷತೆಗಾಗಿ ಮಹಿಳಾ ಸುರಕ್ಷತಾ ಸ್ಥಳಗಳನ್ನು ತೆರೆಯಲಾಗಿದೆ. ಮಹಿಳೆಯರ ಸಮಸ್ಯೆಗಳಿಗೆ ಮಹಿಳಾ ಸಿಬ್ಬಂದಿ ತ್ವರಿತವಾಗಿ ಸ್ಪಂದಿಸಲಿದ್ದಾರೆ' ಎಂದರು.

'ಡಿ. 31ರಂದು ಈ ರಸ್ತೆಗಳಲ್ಲಿ ವಾಹನಗಳ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಎಂ.ಜಿ.ರಸ್ತೆ ಮೂಲಕ ಬ್ರಿಗೇಡ್ ರಸ್ತೆ ಪ್ರವೇಶಿಸುವವರು, ಅಪೇರಾ ಜಂಕ್ಷನ್ ಮೂಲಕ ಹೊರಹೋಗಲು ಅವಕಾಶವಿದೆ.

'ವರ್ಷಾಚರಣೆ ಬಳಿಕ ಅಂಕಿ– ಅಂಶ ಬಿಡುಗಡೆ'

'ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ 2022ರಲ್ಲಿ ನಡೆದಿರುವ ಅಪರಾಧಗಳ ಅಂಕಿ–ಅಂಶಗಳನ್ನು ಜನವರಿ ಮೊದಲ ವಾರದಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ಮೇಲ್ಸೇತುವೆಯಲ್ಲಿ ನಿರ್ಬಂಧ; ಪಾನಮತ್ತ ಚಾಲಕರ ಪತ್ತೆಗೆ ಒತ್ತು'

'ಹೊಸ ವರ್ಷಾಚರಣೆ ಸಂಭ್ರಮದಲ್ಲೂ ಕೆಲವರು ಪಾನಮತ್ತರಾಗಿ ವಾಹನ ಚಲಾಯಿಸಿ ಅಪಘಾತವನ್ನುಂಟು ಮಾಡುವ ಸಾಧ್ಯತೆ ಇರುತ್ತದೆ. ಹೀಗಾಗಿ, ಪ್ರತಿಯೊಂದು ಸ್ಥಳಗಳಲ್ಲಿ ಪಾನಮತ್ತ ಚಾಲಕರ ಪತ್ತೆಗೆ ನಿತ್ಯವೂ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಡಿ. 32ರಂದು ರಾತ್ರಿ 9 ಗಂಟೆಯಿಂದ ಜ. 1ರ ಬೆಳಿಗ್ಗೆ 6 ಗಂಟೆಯವರೆಗೆ ನಗರದ ಮೇಲ್ಸೇತುವೆಗಳಲ್ಲಿ ಎಲ್ಲ ಬಗೆಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಆದರೆ, ಬಳ್ಳಾರಿ ರಸ್ತೆಯ ಮೇಲ್ಸೇತುವೆ ಹಾಗೂ ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳ ಸಂಚಾರವನ್ನು ಮಾತ್ರ ನಿಷೇಧಿಸಲಾಗಿದೆ' ಎಂದರು.

ವಾಹನಗಳ ಸಂಚಾರ, ನಿಲುಗಡೆ ನಿರ್ಬಂಧ

ಡಿಸೆಂಬರ್ 31ರಂದು ರಾತ್ರಿ 8 ಗಂಟೆಯಿಂದ ತಡರಾತ್ರಿ 1 ಗಂಟೆಯವರೆಗೆ ಈ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ರಾತ್ರಿ 4 ಗಂಟೆಯಿಂದ ಜ. 1ರ ನಸುಕಿನ 3 ಗಂಟೆಯವರೆಗೆ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

- ಎಂ.ಜಿ.ರಸ್ತೆಯಿಂದ ಅನಿಲ್ ಕುಂಬ್ಳೆ ವೃತ್ತ, ರೆಸಿಡೆನ್ಸಿ ರಸ್ತೆ ಜಂಕ್ಷನ್
- ಬ್ರಿಗೇಡ್ ರಸ್ತೆಯ ಕಾವೇರಿ ಎಂಪೋರಿಯಂದ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್
- ಚರ್ಚ್ ಸ್ಟ್ರೀಟ್‌ನಿಂದ ಮ್ಯೂಸಿಯಂ ರಸ್ತೆ ಜಂಕ್ಷನ್

ಧ್ವನಿವರ್ಧಕ: ಬಳಕೆಗೆ ಪರವಾನಗಿ ಕಡ್ಡಾಯ

'ರಾತ್ರಿ 1 ಗಂಟೆಯವರೆಗೆ ವ್ಯಾಪಾರ–ವಹಿವಾಟಿಗೆ ಅವಕಾಶ ನೀಡಲಾಗಿದೆ. ಧ್ವನಿವರ್ಧಕ ಬಳಕೆಗೆ ರಾತ್ರಿ 12 ಗಂಟೆವರೆಗೆ ಅವಕಾಶವಿದೆ. ಆದರೆ, ಪರವಾನಗಿ ಕಡ್ಡಾಯ. ಅಕ್ರಮವಾಗಿ ಧ್ವನಿವರ್ಧಕ ಬಳಸಿದರೆ, ಕಾನೂನು ಕ್ರಮ ಜರುಗಿಸಲು ಎಸಿಪಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ' ಎಂದು ಪ್ರತಾಪ್ ರೆಡ್ಡಿ ಹೇಳಿದರು.

50 ಹೆಚ್ಚುವರಿ ಬಸ್

ಬೆಂಗಳೂರು: ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳುವ ಜನರ ಅನುಕೂಲಕ್ಕಾಗಿ ಎಂ.ಜಿ. ರಸ್ತೆ ಮತ್ತು ಬ್ರಿಗೇಡ್ ರಸ್ತೆಯಿಂದ ಹೆಚ್ಚುವರಿ 50 ಬಸ್‌ಗಳ ಕಾರ್ಯಾಚರಣೆಗೆ ಬಿಎಂಟಿಸಿ ವ್ಯವಸ್ಥೆ ಮಾಡಿದೆ.

ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ, ಕೆಂಗೇರಿ, ಚನ್ನಸಂದ್ರ, ಹೊಸಕೋಟೆ, ಬನಶಂಕರಿ, ಕಾಡುಗೋಡಿ ಸೇರಿ ಹಲವೆಡೆಗೆ ಈ ಬಸ್‌ಗಳು ಸಂಚರಿಸಲಿವೆ. ಈ ಬಸ್‌ಗಳ ಕಾರ್ಯಾಚರಣೆ ಉಸ್ತುವಾರಿಗೆ 11 ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.

ರಾತ್ರಿ 2 ಗಂಟೆ ತನಕ ಮೆಟ್ರೊ ರೈಲು

ಬೆಂಗಳೂರು: ಹೊಸ ವರ್ಷದ ಸಂಭ್ರಮಾಚರಣೆಗೆ ಅನುಕೂಲ ಆಗುವಂತೆ ಮೆಟ್ರೊ ರೈಲು ಸೇವೆಯನ್ನು ರಾತ್ರಿ 2 ಗಂಟೆ ತನಕ ವಿಸ್ತರಿಸಲಾಗಿದೆ.

ರಾತ್ರಿ 11.30ಕ್ಕೆ ಇದ್ದ ಕೊನೆಯ ರೈಲು ಸೇವೆಯನ್ನು ಡಿ.31ರಂದು ಬೆಳಗಿನ ಜಾವ 2 ಗಂಟೆ ತನಕ ವಿಸ್ತರಿಸಲಾಗಿದೆ. ಈ ಸಂದರ್ಭದಲ್ಲಿ ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಬೈಯಪ್ಪನಹಳ್ಳಿಯಿಂದ 1.35 ಗಂಟೆಗೆ, ಕೆಂಗೇರಿಯಿಂದ 1.25ಕ್ಕೆ, ನಾಗಸಂದ್ರದಿಂದ 1.30ಕ್ಕೆ ಮತ್ತು ರೇಷ್ಮೆ ಸಂಸ್ಥೆಯಿಂದ 1.25ಕ್ಕೆ ಕೊನೆಯ ರೈಲು ಹೊರಡಲಿದೆ. ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ನಾಲ್ಕೂ ಕಡೆಗೆ ಕೊನೆಯ ರೈಲುಗಳು ರಾತ್ರಿ 2 ಗಂಟೆಗೆ ಹೊರಡಲಿವೆ.

ಅಂದು ರಾತ್ರಿ 11.30ರ ನಂತರ ಎಂ.ಜಿ. ರಸ್ತೆ, ಟ್ರಿನಿಟಿ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳಿಂದ ಪ್ರಯಾಣಿಸುವವರಿಗೆ ₹50 ಮೊತ್ತದ ಕಾಗದದ ಟಿಕೆಟ್ ವಿತರಿಸಲಾಗುವುದು. ಆ ಸಂದರ್ಭದಲ್ಲಿ ಈ ನಿಲ್ದಾಣಗಳಲ್ಲಿ ಟೋಕನ್ ವಿವರಣೆ ಇರುವುದಿಲ್ಲ. ಕಾಗದದ ಟಿಕೆಟ್‌ಗಳನ್ನು ಅಂದು ರಾತ್ರಿ 8 ಗಂಟೆಯಿಂದಲೇ ಎಲ್ಲಾ ಮೆಟ್ರೊ ನಿಲ್ದಾಣಗಳಲ್ಲಿ ಮುಂಚಿತವಾಗಿ ಖರೀದಿಸಲು ಅವಕಾಶ ಇದೆ.

ಸ್ಮಾರ್ಟ್ ಕಾರ್ಡ್ ಮತ್ತು ಕ್ಯೂಆರ್ ಕೋಡ್ ಟಿಕೆಟ್ ಹೊಂದಿರುವ ಪ್ರಯಾಣಿಕರು ಎಂದಿನಂತೆ ರಿಯಾಯಿತಿ ದರದಲ್ಲಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.



ಪ್ರತಿಭಟನೆ ಎನ್‌ಪಿಎಸ್ (ಹೊಸ ಪಿಂಚಣಿ ಯೋಜನೆ) ರದ್ದುಗೊಳಿಸಿ ಒಪಿಎಸ್ (ಹಳೆಯ ಪಿಂಚಣಿ ಯೋಜನೆ) ಜಾರಿಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ನೇತೃತ್ವದಲ್ಲಿ ನೌಕರರು ನಡೆಸುತ್ತಿರುವ ಪ್ರತಿಭಟನೆ ಸ್ಥಳಕ್ಕೆ ಜೆಡಿಎಸ್ ವರಿಷ್ಠ ಎಚ್.ಡಿ ದೇವೇಗೌಡ ಅವರು ಗುರುವಾರ ಭೇಟಿ ನೀಡಿ ಬೆಂಬಲ ಸೂಚಿಸಿದರು -ಪ್ರಜಾವಾಣಿ ಚಿತ್ರ/ ರಂಜು ಪಿ.

ದೆಹಲಿ: ಬೆಂಗಳೂರು ಪೊಲೀಸರ ವಿರುದ್ಧ ಎಫ್‌ಐಆರ್

ನವದೆಹಲಿ: ವ್ಯಾಪಾರಿಯೊಬ್ಬರಿಂದ ಹಣ ವಸೂಲಿ ಮಾಡಿದ ಆರೋಪದಲ್ಲಿ ಬೆಂಗಳೂರಿನ ವಿವಿ ಪುರ ಠಾಣೆಯ ಪಿಎಸ್‌ಐ ಸೇರಿದಂತೆ ಮೂವರು ಪೊಲೀಸರ ವಿರುದ್ಧ ನವದೆಹಲಿಯ ಸೀಮಾಪುರಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರಕರಣವೊಂದಕ್ಕೆ ಸಂಬಂಧಿಸಿ ವ್ಯಾಪಾರಿ ಪಂಕಜ್ ಜೈನ್ ಎಂಬುವರಿಗೆ ನೋಟಿಸ್ ನೀಡಲು ಪೊಲೀಸರು ಬಂದಿದ್ದರು. ಈ ವೇಳೆ, ಅವರು ವ್ಯಾಪಾರಿಯಿಂದ ₹25 ಲಕ್ಷ ಹಣ ವಸೂಲಿ ಮಾಡಿದ್ದರು ಎಂದು ಆರೋಪಿಸಲಾಗಿದೆ.

'ನಾನು ಜಿಲ್‌ಮಿಲ್ ಕೈಗಾರಿಕಾ ಪ್ರದೇಶದಲ್ಲಿ ಸಿಸಿಟಿವಿ ಕ್ಯಾಮೆರಾ ತಯಾರಿಸುವ ಫ್ಯಾಕ್ಟರಿ ಹೊಂದಿದ್ದೇನೆ. ಇದೇ 23ರಂದು ಪೊಲೀಸರಾದ ಸತೀಶ್, ಮುತ್ತುರಾಜ್ ಹಾಗೂ ಬಸವರಾಜ ಪಾಟೀಲ ಎಂಬವರು ನನ್ನ ಬಳಿಗೆ ಬಂದು ಬೆದರಿಕೆ ಹಾಕಿದರು. ನಿಮ್ಮ ವಿರುದ್ಧ ಅರೆಸ್ಟ್ ವಾರೆಂಟ್ ಇದೆ. ನಾವು ಕೇಳಿದಷ್ಟು ಹಣ ನೀಡಿದರೆ ತೊಂದರೆ ಕೊಡುವುದಿಲ್ಲ. ಇಲ್ಲದಿದ್ದರೆ ನಿಮ್ಮ ಫ್ಯಾಕ್ಟರಿ ಬಂದ್ ಮಾಡಿಸುತ್ತೇವೆ ಎಂದು ಬೆದರಿಕೆ ಹಾಕಿದರು. ಹೀಗಾಗಿ, ₹7 ಲಕ್ಷ ನಗದು ಹಾಗೂ ₹13 ಲಕ್ಷವನ್ನು ಚೆಕ್ ಮೂಲಕ ಮಧ್ಯವರ್ತಿ ಮೂಲಕ ನೀಡುವಂತೆ ಒತ್ತಡ ಹೇರಿದರು. ಸುಳ್ಳು ಆರೋಪ ಹೊರಿಸಿ ಕಿರುಕುಳ ನೀಡಿರುವ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪಂಕಜ್ ಜೈನ್ ದೂರಿನಲ್ಲಿ ತಿಳಿಸಿದ್ದಾರೆ. ಸೀಮಾಪುರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ: ಚಾಲಕರ ಬಂಧನ, ಬಿಡುಗಡೆ

ಬೈಕ್ ಟ್ಯಾಕ್ಸಿ ವಿರುದ್ಧ ಆಟೊ ಚಾಲಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತ ಬೈಕ್ ಟ್ಯಾಕ್ಸಿ ಸಂಚಾರಕ್ಕೆ ಕಡಿವಾಣ ಹಾಕಬೇಕು ಮತ್ತು ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗೆ ನೀಡಿರುವ ಅನುಮತಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಆಟೊ ಚಾಲಕರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು. ವಿಧಾನಸೌಧ ಚಲೊ ನಡೆಸಲು ಮುಂದಾದ ನೂರಾರು ಚಾಲಕರನ್ನು ಪೊಲೀಸರು ಬಂಧಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಜಮಾಯಿಸಿದ ಸಾವಿರಾರು ಆಟೊ ಚಾಲಕರು ಸರ್ಕಾರದ ವಿರುದ್ಧ ಆಕ್ರೋಶ ಮೊಳಗಿಸಿದರು. ಸ್ವಾತಂತ್ರ್ಯ ಉದ್ಯಾನ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಎಲ್ಲೆಲ್ಲೂ ಖಾಕಿದಾರಿ ಆಟೊ ಚಾಲಕರ ದಂಡೇ ನೆರೆದಿತ್ತು. 21 ಆಟೊ ಸಂಘಟನೆಗಳು ಒಟ್ಟಾಗಿ ಹೋರಾಟ ನಡೆಸಿದರು. ಆಟೊ ರಿಕ್ಷಾಗಳಲ್ಲೇ ಬಂದಿದ್ದರಿಂದ ಕೆಲಕಾಲ ವಾಹನ ದಟ್ಟಣೆ ಉಂಟಾಗಿತ್ತು.

'ಈಗಾಗಲೇ ಅನಧಿಕೃತವಾಗಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಮಾಡುತ್ತಿವೆ. ಅದರ ಜತೆಗೆ ಬೈಕ್ ಟ್ಯಾಕ್ಸಿ ಸೇವೆ ಅಧಿಕೃತಗೊಳಿಸಲು ಸರ್ಕಾರ ಮುಂದಾದೆ. ಆ ಮೂಲಕ ಆಟೊ ಚಾಲಕರ ಹೊಟ್ಟೆ ಮೇಲೆ ಹೊಡೆಯುವ ಕೆಲಸವನ್ನು ಸರ್ಕಾರವೇ ಮಾಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಗರದಲ್ಲಿ 10 ಲಕ್ಷಕ್ಕೂ ಹೆಚ್ಚು ಜನ ಆಟೊರಿಕ್ಷಾ ಚಾಲನೆ ಮಾಡಿ ಜೀವನ ನಡೆಸುತ್ತಿದ್ದಾರೆ. ಟ್ಯಾಕ್ಸಿ ಸೇವೆಗೆ ಅನುಮತಿ ನೀಡುವ ಬದಲು ಆಟೊ ಚಾಲಕರಿಗೆ ಅನುಕೂಲ ಆಗುವಂತೆ ಎಲೆಕ್ಟ್ರಿಕ್ ಆಟೊರಿಕ್ಷಾಗಳಿಗೆ ಶೇ 50ರಷ್ಟು ಸಹಾಯಧನ ನೀಡಬೇಕು' ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಹೇಮಂತಕುಮಾರ್ ಬಂದು ಮನವಿ ಸ್ವೀಕರಿಸಿದರು. 'ಚಾಲಕರ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಲಾಗುವುದು' ಎಂದು ತಿಳಿಸಿದರು.

ಈ ಉತ್ತರಕ್ಕೆ ತೃಪ್ತರಾಗದ ಚಾಲಕರು, ವಿಧಾನಸೌಧ ಚಲೊ ನಡೆಸಲು ಮುಂದಾದರು. ಈ ಸಂದರ್ಭದಲ್ಲಿ ನೂರಾರು ಚಾಲಕರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದರು.



ಬೈಕ್ ಟ್ಯಾಕ್ಸಿ ಅನುಮತಿ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಆಟೊ ಚಾಲಕರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸರ್ಕಾರಕ್ಕೆ ಏಳು ದಿನ ಗಡುವು

'ವಿಧಾನಸೌಧ ಚಲೊ ನಡೆಸಲು ಮುಂದಾದ ಚಾಲಕರನ್ನು ಬಂಧಿಸಿರುವ ಸರ್ಕಾರಕ್ಕೆ ನಮ್ಮ ಬೇಡಿಕೆ ಈಡೇರಿಸಲು ಏಳು ದಿನಗಳ ಗಡುವು ನೀಡಲಾಗಿದೆ' ಎಂದು ಬೆಂಗಳೂರು ಆಟೊ ಚಾಲಕರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಮಂಜುನಾಥ್ ಹೇಳಿದರು.

'ಸರ್ಕಾರ ನಮ್ಮ ಬೇಡಿಕೆಗಳನ್ನು ನಿರ್ಲಕ್ಷ್ಯ ಮಾಡಿ ಬೈಕ್ ಟ್ಯಾಕ್ಸಿ ಸೇವೆ ಅಧಿಕೃತಗೊಳಿಸಿದರೆ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು. ಅಲ್ಲದೇ, ಬೈಕ್ ಟ್ಯಾಕ್ಸಿಗಳನ್ನು ರಸ್ತೆಯಲ್ಲೇ ಸುಟ್ಟು ಪ್ರತಿಭಟನೆ ನಡೆಸಲಾಗುತ್ತದೆ' ಎಂದು ಎಚ್ಚರಿಸಿದರು.

ಎಲ್ಲೆಲ್ಲೂ ಆಟೋರಿಕ್ಷಾ

ಅರಮನೆ ರಸ್ತೆ, ರಾಮಚಂದ್ರ ರಸ್ತೆಯಲ್ಲಿ ಸಾವಿರಾರು ಆಟೋರಿಕ್ಷಾಗಳನ್ನು ನಿಲ್ಲಿಸಿ ಪ್ರತಿಭಟನಾ ಸ್ಥಳಕ್ಕೆ ಬರಲು ಪೊಲೀಸರು ವ್ಯವಸ್ಥೆ ಮಾಡಿದರು. ಪ್ರತಿಭಟನೆಗೆ ಬರುವ ರಿಕ್ಷಾಗಳನ್ನು ಮೈಸೂರು ಬ್ಯಾಂಕ್ ವೃತ್ತ, ಕಾರ್ಪೊರೇಷನ್ ವೃತ್ತ ಸೇರಿ ಹಲವೆಡೆ ತಡೆದು ನಿಲ್ಲಿಸಿದರು.

ರಿಕ್ಷಾ ನಿಲ್ಲಿಸಿ ನಡೆದುಕೊಂಡು ಹೋಗಲು ಸೂಚಿಸಿದರು. ಇನ್ನೊಂದೆಡೆ ಪ್ರತಿಭಟನೆಯಲ್ಲಿ ಭಾಗವಹಿಸದೆ ಆಟೊ ಸೇವೆ ಒದಗಿಸುತ್ತಿದ್ದವರನ್ನು ಕೆಲ ಚಾಲಕರು ತಡೆದು ನಿಲ್ಲಿಸಿದ ಪ್ರಸಂಗಗಳೂ ನಡೆದವು.



ಅರಮನೆ ರಸ್ತೆಯಲ್ಲಿ ಆಟೋರಿಕ್ಷಾಗಳು ಸಾಲಗಟ್ಟಿ ನಿಂತಿರುವುದು

ಗೋಡೆ ಕುಸಿತ: ಕಾರ್ಮಿಕರ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತಿನಗರ ಠಾಣೆ ವ್ಯಾಪ್ತಿಯ ಎಂಇಜಿ ಆಫೀಸರ್ಸ್ ಕಾಲೊನಿ ಕಾಂಪೌಂಡ್ ಕುಸಿದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

'ಚಳ್ಳಕೆರೆ ತಾಲ್ಲೂಕಿನ ಆಶಮ್ಮ (21) ಹಾಗೂ ಪಶ್ಚಿಮ ಬಂಗಾಳದ ಅಕ್ಬರ್ ಉಲ್ ಹಕ್ (22) ಮೃತರು. ಗುರುವಾರ ಸಂಜೆ ಈ ಅವಘಡ ಸಂಭವಿಸಿದೆ. ಕಾಂಪೌಂಡ್ ದುರಸ್ತಿ ಹಾಗೂ ಬಣ್ಣ ಬಳಿಯುವ ಕೆಲಸದ ಜವಾಬ್ದಾರಿ ವಹಿಸಿಕೊಂಡಿದ್ದ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಶಮ್ಮ ಅವರು ಸುನೀಲ್ ಕುಮಾರ್ ಎಂಬುವರನ್ನು ಎರಡು ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ದಂಪತಿ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಇಬ್ಬರೂ ಒಟ್ಟಿಗೆ ಕಾಂಪೌಂಡ್ ಗೋಡೆ ದುರಸ್ತಿ ಹಾಗೂ ಬಣ್ಣ ಬಳಿಯುವ ಕೆಲಸಕ್ಕೆ ಸೇರಿದ್ದರು. ಇನ್ನೊಬ್ಬ ಕಾರ್ಮಿಕ ಅಕ್ಬರ್ ಸಹ ಕೆಲಸ ಅರಸಿ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ವೈಯಕ್ತಿಕ ಕಾರಣಕ್ಕಾಗಿ ಸುನೀಲ್‌ಕುಮಾರ್ ಗುರುವಾರ ಕೆಲಸಕ್ಕೆ ಬಂದಿರಲಿಲ್ಲ. ಪತ್ನಿ ಆಶಮ್ಮ ಮಾತ್ರ ಕೆಲಸಕ್ಕೆ ಹಾಜರಾಗಿದ್ದರು. ಸಂಜೆ 6.30ರ ಸುಮಾರಿಗೆ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕಾಂಪೌಂಡ್ ಕುಸಿದು ಆಶಮ್ಮ ಹಾಗೂ ಅಕ್ಬರ್ ಮೇಲೆ ಬಿದ್ದಿತ್ತು. ರಕ್ಷಣೆಗೆ ಹೋಗಿದ್ದ ಇತರೆ ಕಾರ್ಮಿಕರು, ಅವಶೇಷಗಳನ್ನು ತೆರವುಗೊಳಿಸಿ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆ ಆಶಮ್ಮ ಮೃತಪಟ್ಟರು. ಆಸ್ಪತ್ರೆಯಲ್ಲಿ ಅಕ್ಬರ್ ಅಸುನೀಗಿದರು. ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಶಿಥಿಲಗೊಂಡಿದ್ದ 6 ಅಡಿ ಎತ್ತರದ ಗೋಡೆ: 'ಎಂಇಜಿ ಆಫೀಸರ್ಸ್ ಕಾಲೊನಿಯ ಕಾಂಪೌಂಡ್ ಗೋಡೆ ಹಳೆಯದಾಗಿದ್ದು, ಅದರ ಪ್ಲ್ಯಾಸ್ಟರಿಂಗ್ ಹಾಗೂ ಬಣ್ಣ ಬಳಿಯುವ ಕೆಲಸವನ್ನು ಇತ್ತೀಚೆಗೆ ಆರಂಭಿಸಲಾಗಿತ್ತು. ಹಲವು ತಂಡಗಳಾಗಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು.'

'ಸದ್ಯ ಕುಸಿದು ಬಿದ್ದಿರುವ 6 ಅಡಿ ಎತ್ತರದ ಗೋಡೆ ಪಕ್ಕದಲ್ಲಿರುವ ಆಲದ ಮರ ಕೆಲದಿನಗಳಿಂದ ಗೋಡೆಗೆ ವಾಲಿತ್ತು. ಇದರಿಂದ ಗೋಡೆ ಶಿಥಿಲಗೊಂಡಿತ್ತು. ಆಶಮ್ಮ, ಅಕ್ಬರ್ ಗೋಡೆಗೆ ಪ್ಲ್ಯಾಸ್ಟರಿಂಗ್ ಮಾಡುವ ಕೆಲಸದಲ್ಲಿ ನಿರತರಾಗಿದ್ದಾಗ ಗೋಡೆ ಕುಸಿದಿದೆ. ಗುತ್ತಿಗೆದಾರರ ನಿರ್ಲಕ್ಷ್ಯವೇ ಅವಘಡಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೆಲಸದ ಗುತ್ತಿಗೆ ಸಂಬಂಧ ಎಂಇಜಿ ಆಡಳಿತ ಮಂಡಳಿಯಿಂದ ಮಾಹಿತಿ ಪಡೆಯಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅಪಘಾತದಲ್ಲಿ ಪತಿಗೆ ಗಾಯ'

'ಆಶಮ್ಮ ಸಾವಿನ ಸುದ್ದಿ ತಿಳಿದು ಪತಿ ಸುನೀಲ್‌ಕುಮಾರ್ ಆಘಾತಗೊಂಡಿದ್ದರು. ಮೃತದೇಹ ನೋಡುವ ಅವಸರದಲ್ಲಿ ದ್ವಿಚಕ್ರ ವಾಹನ ಅತಿ ವೇಗವಾಗಿ ಚಲಾಯಿಸಿದ್ದರು. ಮಾರ್ಗಮಧ್ಯೆ ದ್ವಿಚಕ್ರ ವಾಹನ ಉರುಳಿಬಿದ್ದು, ಅಪಘಾತ ಉಂಟಾಗಿತ್ತು. ಗಾಯಗೊಂಡ ಸುನೀಲ್‌ಕುಮಾರ್, ಚಿಕಿತ್ಸೆ ಪಡೆದು ಮೃತದೇಹ ನೋಡಲು ವಿಕ್ಟೋರಿಯಾ ಆಸ್ಪತ್ರೆಗೆ ಬಂದಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಪಾರ ಖೋಟಾ ನೋಟು ಜಪ್ತಿ

ಬೆಂಗಳೂರು: ತಮಿಳುನಾಡಿನಿಂದ ನಗರಕ್ಕೆ ಖೋಟಾ ನೋಟುಗಳನ್ನು ತಂದು ಜನರನ್ನು ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ₹ 1.25 ಕೋಟಿ ಮೊತ್ತದ ಖೋಟಾ ನೋಟುಗಳನ್ನು ಜಪ್ತಿ ಮಾಡಿದ್ದಾರೆ.

'ತಮಿಳುನಾಡಿನ ನಿವಾಸಿ ಪಿಚ್ಚಿಮುತ್ತು ಎಂಬಾತ, ಬ್ಯಾಗ್‌ನಲ್ಲಿ ಖೋಟಾ ನೋಟು ತುಂಬಿಕೊಂಡು ಡಿ. 28ರಂದು ಲಾಲ್‌ಬಾಗ್ ಉದ್ಯಾನದ ಬಳಿ ಬಂದಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ. 'ಆರೋಪಿ ಬಳಿ ಪರಿಶೀಲಿಸಿದಾಗ, ₹ 1.25 ಕೋಟಿ ಮೊತ್ತದ 6,377 ಖೋಟಾ ನೋಟುಗಳು (₹ 2000 ಹಾಗೂ ₹ 500 ಮುಖಬೆಲೆ) ಪತ್ತೆಯಾದವು. ಅವುಗಳನ್ನು ಜಪ್ತಿ ಮಾಡಿ ಆರೋಪಿ ವಿರುದ್ಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ತಿಳಿಸಿವೆ.

ಪ್ರಮುಖ ಆರೋಪಿಗಾಗಿ ಶೋಧ: 'ತಮಿಳುನಾಡಿನಲ್ಲಿರುವ ಪ್ರಮುಖ ಆರೋಪಿ ನಲ್ಲಕಣಿ ಹಾಗೂ ಇತರರ ಬಳಿ ಕೆಲಸ ಮಾಡುತ್ತಿರುವುದಾಗಿ ಬಂಧಿತ ಪಿಚ್ಚಿಮುತ್ತು ಹೇಳುತ್ತಿದ್ದಾನೆ. ನಲ್ಲಕಣಿ ನೀಡಿದ್ದ ಖೋಟಾ ನೋಟುಗಳನ್ನು ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ನೀಡಲು ಬಂದಿದ್ದಾಗಿ ತಿಳಿಸುತ್ತಿದ್ದಾನೆ. ನಲ್ಲಕಣಿ ಪತ್ತೆಗಾಗಿ ಶೋಧ ನಡೆದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಬಿಎ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಯಲ್ಲಿ ಬಹುಮಹಡಿ ಕಟ್ಟಡದ 3ನೇ ಮಹಡಿಯಿಂದ ಜಿಗಿದು ಪವನ್ (20) ಎಂಬುವವರು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಹೆಗ್ಗನಹಳ್ಳಿ ನಿವಾಸಿ ಪವನ್, ಮಾಗಡಿ ರಸ್ತೆಯ ಕಾಲೇಜೊಂದರಲ್ಲಿ ಬಿಬಿಎ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮನೆ–ಕಾಲೇಜಿನಿಂದ ದೂರವಿರುವ ಮಿಲ್ಕ್ ಕಾಲೊನಿಗೆ ಬುಧವಾರ ಸಂಜೆ ಬಂದಿದ್ದ ಇವರು, ಕಟ್ಟಡದಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇತ್ತೀಚಿನ ದಿನಗಳಲ್ಲಿ ಪವನ್ ಮಾನಸಿಕವಾಗಿ ನೊಂದಿದ್ದರು. ಸ್ನೇಹಿತರ ಜೊತೆಯೂ ಹೆಚ್ಚು ಮಾತನಾಡುತ್ತಿರಲಿಲ್ಲವೆಂದು ಗೊತ್ತಾಗಿದೆ. ಆದರೆ, ಮಿಲ್ಕ್ ಕಾಲೊನಿಗೆ ಬಂದು ಆತ್ಮಹತ್ಯೆ ಮಾಡಿಕೊಂಡಿದ್ದು ಏಕೆ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಸ್ನೇಹಿತರು ಹಾಗೂ ಪೋಷಕರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಶಿವಮೊಗ್ಗಕ್ಕೆ ಇಂದು ಮೋಹನ್ ಭಾಗವತ್

ಶಿವಮೊಗ್ಗ: ಇಲ್ಲಿನ ಪೇಸ್ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ದಕ್ಷಿಣ ಪ್ರಾಂತ್ಯದ ಆರ್‌ಎಸ್‌ಎಸ್ ಸಂಚಾಲಕರ ಸಭೆ ನಡೆಯಲಿದೆ. ಸಭೆಯಲ್ಲಿ ಸರಸಂಘ ಚಾಲಕ ಮೋಹನ್ ಭಾಗವತ್ ಪಾಲ್ಗೊಳ್ಳಲಿದ್ದಾರೆ.

ಮೂರು ದಿನ ನಗರದಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ಇಬ್ಬರು ವಿದ್ಯಾರ್ಥಿಗಳು ನೀರುಪಾಲು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಚನ್ನರಾಯಪಟ್ಟಣ ಹೋಬಳಿ ದೇವನಾಯಕನಹಳ್ಳಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಶಾಲಾ ಹಿಂಭಾಗದಲ್ಲಿರುವ ದಕ್ಷಿಣ ಪಿನಾಕಿನಿ ಕಾಲುವೆಯ ಹೊಂಡದಲ್ಲಿ ಈಜಲು ಹೋಗಿ ನೀರು ಪಾಲಾಗಿದ್ದಾರೆ. ಅಸ್ವಸ್ಥಗೊಂಡಿದ್ದ ಮೂವರು ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಬುಧವಾರ ಸಂಜೆ 8ನೇ ತರಗತಿಯ ಜಾವೀದ್ ಬಾಷಾ (15) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದ. ರಾತ್ರಿ ಇಡೀ ಹುಡುಕಾಟದ ನಂತರ ಗುರುವಾರ ಬೆಳಿಗ್ಗೆ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿಯ ಹುಲಿಗೆರೆಪುರ ಗ್ರಾಮದ 8ನೇ ತರಗತಿ ವಿದ್ಯಾರ್ಥಿ ಸಂತೋಷ್ (14) ಮೃತದೇಹ ಸಿಕ್ಕಿದೆ.

ಜಾವೀದ್ ಮೃತದೇಹ ಸಿಕ್ಕಿದ ನಂತರ ಎಚ್ಚೆತ್ತುಕೊಂಡ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ಶಾಲಾ ಹಾಜರಾತಿ ಪರಿಶೀಲಿಸಿದಾಗ ಮತ್ತಷ್ಟು ವಿದ್ಯಾರ್ಥಿಗಳು ನಾಪತ್ತೆಯಾಗಿರುವ ವಿಚಾರ ತಿಳಿದುಬಂದಿದೆ.

ಘಟನೆಗೆ ಕಾರಣವೇನು?: ವಿದ್ಯಾರ್ಥಿಗಳು ಪ್ರವಾಸಕ್ಕೆ ತೆರಳಿದ್ದರಿಂದ ವಸತಿ ಶಾಲೆಯಲ್ಲಿದ್ದ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಮೇಲ್ವಿಚಾರಕರನ್ನು ನೇಮಿಸಲಾಗಿತ್ತು. ಇದೇ ಸಮಯದಲ್ಲಿ ಸುತ್ತಲಿನ ಪರಿಸರ ನೋಡಲು ವಿದ್ಯಾರ್ಥಿಗಳ ಸಮೇತರಾಗಿ ಮೇಲ್ವಿಚಾರಕರು ತೆರಳಿದ್ದು, ದಾರಿ ಮಧ್ಯೆಯಲ್ಲಿರುವ ದಕ್ಷಿಣ ಪಿನಾಕಿನಿ ಕಾಲುವೆಯ ಹೊಂಡದಲ್ಲಿ ಈಜಲು ತೆರಳಿದಾಗ ಈ ದುರ್ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ.

ಪ್ರಾಂಶುಪಾಲ ಬಂಧನ

ಈ ದುರ್ಘಟನೆ ಸಂಬಂಧ ವಸತಿ ಶಾಲೆಯ ಪ್ರಾಂಶುಪಾಲ ಶಿವಮೂರ್ತಿ, ವಾಚ್‌ಮನ್ ಪ್ರಸನ್ನ, ಸಿಬ್ಬಂದಿಯಾದ ರಶ್ಮಿ, ವೀಣಾ ಎಂಬುವರನ್ನು ಚನ್ನರಾಯಪಟ್ಟಣ ಪೊಲೀಸರು ಬಂಧಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಡಿವೈಎಸ್‌ಪಿ ನಾಗರಾಜ್, 'ಈ ಪ್ರಕರಣದಲ್ಲಿ ತೀವ್ರತರವಾದ ನಿರ್ಲಕ್ಷತನದಿಂದ ಸಾವು ಸಂಭವಿಸಿರುವುದು ಕಂಡುಬಂದಿದೆ' ಎಂದರು.

ಅಧಿವೇಶನ ಮುಂದಕ್ಕೆ

ಬೆಳಗಾವಿ: ಸುವರ್ಣ ವಿಧಾನಸೌಧದಲ್ಲಿ ಡಿ. 19ರಂದು ಆರಂಭವಾದ ಚಳಿಗಾಲದ ವಿಧಾನಮಂಡಲ ಅಧಿವೇಶನವನ್ನು ಕಾಂಗ್ರೆಸ್– ಜೆಡಿಎಸ್ ಸದಸ್ಯರ ಗದ್ದಲ, ಗಲಾಟೆ ನಡುವೆಯೇ ಗುರುವಾರ (ಡಿ.29) ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ರೈತರ ಸಂಕಷ್ಟ, ಮಳೆ-ಬೆಳೆಹಾನಿ ಸಮಸ್ಯೆಗಳ ಕುರಿತು ನಡೆದ ಚರ್ಚೆಗೆ ಸರ್ಕಾರ ಸಮರ್ಪಕ ಉತ್ತರ ನೀಡಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ನಡೆಸಿದರೆ, ಹೊಸ ಪಿಂಚಣಿ ಯೋಜನೆಯನ್ನು ವಿರೋಧಿಸಿ ನೌಕರರು ನಡೆಸುತ್ತಿರುವ ಹೋರಾಟದ ಬಗ್ಗೆ ಚರ್ಚೆಗೆ ಅವಕಾಶ ನೀಡಲಿಲ್ಲ ಎಂದು ಜೆಡಿಎಸ್ ಸದಸ್ಯರು ಗದ್ದಲ ಎಬ್ಬಿಸಿದರು.

ಮತ್ತೆ ತಮ್ಮ ಶಾಸಕರ ಜತೆ ಸದನಕ್ಕೆ ಬಂದ ಸಿದ್ದರಾಮಯ್ಯ, 'ಕಬ್ಬು, ರಾಗಿ, ಭತ್ತ, ಅಡಿಕೆ, ತೊಗರಿ ಬೆಳೆ ಬಗ್ಗೆ ನಾವು ಮಾತನಾಡಿದ್ದೇವೆ. ರೈತರು ತೊಂದರೆಯಲ್ಲಿದ್ದಾರೆ. ಇದು ಯಾವುದನ್ನೂ ಪರಿಗಣಿಸದೆ, ಸರ್ಕಾರ ಲಿಖಿತ ಉತ್ತರ ನೀಡಿದೆ. ನಾವು ಹೇಳಿದಂತೆ ಪರಿಹಾರದ ಬಗ್ಗೆ ಹೇಳಿಲ್ಲ' ಎಂದು ಕಿಡಿಕಾರಿದರು.

'ಸರ್ಕಾರದ ಈ ನಡೆಯನ್ನು ನಾವು ವಿರೋಧಿಸಬೇಕಾಗುತ್ತದೆ. ಧಿಕ್ಕಾರ ಕೂಗಬೇಕಾಗುತ್ತದೆ. ತೊಗರಿ ಬೆಳೆಯುವವರು, ಕಬ್ಬು ಬೆಳೆಗಾರರು, ಭತ್ತ ಬೆಳೆಯುವವರು ಉತ್ತರ ಕರ್ನಾಟಕದವರು. ಆದರೆ, ಅವರ ಸಮಸ್ಯೆಗಳಿಗೆ ಸರ್ಕಾರ ಉತ್ತರ ನೀಡಿಲ್ಲ. ಸರ್ಕಾರದ ಈ ರೈತ ವಿರೋಧಿ ಧೋರಣೆ ಖಂಡಿಸಿ ಸಭಾತ್ಯಾಗ ಮಾಡುತ್ತಿದ್ದೇವೆ' ಎಂದರು.

ಸದನದಲ್ಲಿ ಗದ್ದಲ ಹೆಚ್ಚುತ್ತಿದ್ದಂತೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಮುಖ್ಯಮಂತ್ರಿ ಭರವಸೆ • ₹8,001 ಕೋಟಿ ಪೂರಕ ಅಂದಾಜಿಗೆ ಉಭಯ ಸದನಗಳ ಒಪ್ಪಿಗೆ

ಪರಿಶಿಷ್ಟರ ಮೀಸಲು ಹಣ ಅನ್ಯ ಉದ್ದೇಶಕ್ಕಿಲ್ಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಗೆ (ಎಸ್‌ಸಿಎಸ್‌ಪಿ-ಟಿಎಸ್‌ಪಿ) ಮೀಸಲಾಗಿರಿಸಿದ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸುವುದನ್ನು ತಡೆಯಲು ನಿಯಮದಲ್ಲಿರುವ ಸೆಕ್ಷನ್ 7 ಡಿ ಅನ್ನು ರದ್ದುಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಯಾವ ಯಾವ ಸರ್ಕಾರಗಳ ಅವಧಿಯಲ್ಲಿ ಅನ್ಯ ಉದ್ದೇಶಗಳಿಗೆ ಹಣ ಬಳಕೆ ಮಾಡಲಾಗಿದೆ ಎಂಬ ಬಗ್ಗೆ ಶ್ವೇತ ಪತ್ರವನ್ನು ಹೊರಡಿಸುವುದಾಗಿಯೂ ಅವರು ಪ್ರಕಟಿಸಿದರು.

ಪೂರಕ ಅಂದಾಜಿನ ಎರಡನೇ ಕಂತಿನ ಬೇಡಿಕೆಗಳ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಉತ್ತರ ನೀಡಿದ ಅವರು, ಅನ್ಯ ಉದ್ದೇಶಕ್ಕೆ ಬಳಸುವುದಕ್ಕೆ ಸೆಕ್ಷನ್ 7 ಡಿ ಅವಕಾಶ ನೀಡುತ್ತಿದೆ. ಅದನ್ನು ಕೈಬಿಡುವುದಕ್ಕೆ ಸಂಬಂಧಿಸಿದಂತೆ ಮುಂದಿನ ವಾರ ಸಭೆಯೊಂದನ್ನು ಕರೆಯುವುದಾಗಿಯೂ ಅವರು ಹೇಳಿದರು.

ಕಳೆದ ಎರಡು ವರ್ಷಗಳ ಕಾಲ ಕೋವಿಡ್ ಮತ್ತು ಅತಿವೃಷ್ಟಿಯಿಂದಾಗಿ ತೆರಿಗೆ ಸಂಗ್ರಹ ಕುಸಿದು ಹೋಗಿ, ರಾಜ್ಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಸಾಮಾನ್ಯ ವರ್ಷವಾಗಿದ್ದರೆ ಎಸ್‌ಸಿಎಸ್‌ಪಿ-ಟಿಎಸ್‌ಪಿಗೆ ಹೆಚ್ಚು ಅನುದಾನ ನೀಡಲು ಸಾಧ್ಯವಾಗುತ್ತಿತ್ತು. ಈಗ ತೆರಿಗೆ ಸಂಗ್ರಹ ಉತ್ತಮವಾಗಿದ್ದು, ಮುಂದೆ ಅನುದಾನ ಪ್ರಮಾಣ ಹೆಚ್ಚಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.



ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ವೇಳೆ ಸಚಿವ ಮಾಧುಸ್ವಾಮಿ ಮಾತನಾಡಿದರು. ಸಚಿವರಾದ ಸಿ.ಸಿ.ಪಾಟೀಲ್, ಗೋವಿಂದ ಕಾರಜೋಳ ಇದ್ದಾರೆ
–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ನಮ್ಮ ಮೇಲೆ ಬರೆ ಹಾಕಿ ಕಡಿಮೆ ಆದಾಯ ನೀಡುವ ರಾಜ್ಯಗಳಿಗೆ ಅಧಿಕ ಅನುದಾನ ನೀಡುವುದು ಸರಿಯಲ್ಲ. ಅನುದಾನ ಕೊಡಬೇಡಿ ಎನ್ನುವುದಿಲ್ಲ, ವಿವೇಚನೆಯಿರಲಿ

ಸಿದ್ದರಾಮಯ್ಯ
ವಿರೋಧಪಕ್ಷದ ನಾಯಕ

ರೈತರ ಹಿತದೃಷ್ಟಿಯಿಂದ ಪೂರಕ ಅಂದಾಜಿನಲ್ಲಿ ರೈತರಿಗೆ ₹5,000 ಕೋಟಿ ಇಡಿ. ಪ್ರತಿ ಎಕರೆಗೆ ₹25 ಸಾವಿರದಿಂದ ₹50 ಸಾವಿರ ನಿಗದಿ ಮಾಡಬೇಕು

ಬಂಡೆಪ್ಪ ಕಾಶೆಂಪೂರ
ಜೆಡಿಎಸ್ ಉಪನಾಯಕ

ರಾಜ್ಯ ಆರ್ಥಿಕ ಸ್ಥಿತಿ ಸುಧಾರಣೆಯಾಗಿದ್ದು, 2021–22 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ₹62 ಸಾವಿರ ಕೋಟಿಗೆ ಸೀಮಿತವಾಗಿ ಸಾಲವನ್ನು ಪಡೆಯಲಾಗಿದೆ. ವಿರೋಧಪಕ್ಷದ ನಾಯಕರು ಹೇಳಿದಂತೆ ₹71 ಸಾವಿರ ಕೋಟಿ ಸಾಲ ಮಾಡಿಲ್ಲ. 2022–23 ರಲ್ಲಿ ವಿತ್ತೀಯ ಕೊರತೆಯನ್ನು ನಿಯಂತ್ರಿಸಲು ಯಶಸ್ವಿಯಾಗಿದ್ದೇವೆ. ಮುಂದಿನ ಸಾಲಿನಲ್ಲೂ ಸಾಲ ತೆಗೆದುಕೊಳ್ಳುವ ಪ್ರಮಾಣ ₹62 ಸಾವಿರ ಕೋಟಿ ಮೀರುವುದಿಲ್ಲ. ಇದರ ಅರ್ಥ ಸಾಲ ತೆಗೆದುಕೊಳ್ಳುವ ಪ್ರಮಾಣ ಕಡಿಮೆ ಆಗಲಿದೆ. ವಿತ್ತೀಯ ಶಿಸ್ತು ಕಾಪಾಡಿದ್ದೇವೆ ಎಂದು ವಿವರಿಸಿದರು.

ಒಟ್ಟು ಸಾಲದ ಮೊತ್ತ: ರಾಜ್ಯದ ಸಾಲ ಮತ್ತು ಹೊಣೆಗಾರಿಕೆಯ ಮೊತ್ತ ₹5,18,366 ಕೋಟಿ ಇದೆ. ಮುಂಬರುವ ಬಜೆಟ್ ಮಿಗತೆಯ ಬಜೆಟ್ ಆಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

₹8,001.13 ಕೋಟಿ ಮೊತ್ತದ ಪೂರಕ ಅಂದಾಜಿಗೆ ಉಭಯ ಸದನಗಳು ಒಪ್ಪಿಗೆ ನೀಡಿದವು.

ರಾಜ್ಯದ ಸಾಲ ₹5.40 ಲಕ್ಷ ಕೋಟಿ: ಕೃಷ್ಣ ಬೈರೇಗೌಡ

ರಾಜ್ಯ ಸರ್ಕಾರ ಸಾಲ ತೆಗೆದುಕೊಳ್ಳುವ ಪ್ರಮಾಣ ತೀವ್ರವಾಗಿ ಏರಿಕೆ ಆಗಿದೆ. ಹಣಕಾಸು ಸ್ಥಿತಿ ಬಿಗಡಾಯಿಸುತ್ತಿದ್ದು, ರಾಜ್ಯದ ಒಟ್ಟು ಸಾಲ ಪ್ರಮಾಣ ₹5.40 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಹೇಳಿದರು.

ಚರ್ಚೆಯ ಮೇಲೆ ಭಾಗವಹಿಸಿ ಮಾತನಾಡಿದ ಅವರು, ಆರ್‌ಬಿಐ ತನ್ನ ವರದಿಯಲ್ಲಿ ವಿವಿಧ ರಾಜ್ಯಗಳ ಆರ್ಥಿಕ ಸ್ಥಿತಿಯ ಬಗ್ಗೆ ಉಲ್ಲೇಖಿಸುತ್ತಲೇ ಕರ್ನಾಟಕದ ಸಾಲದ ಪ್ರಮಾಣವನ್ನು ಪ್ರಸ್ತಾಪಿಸಿದೆ. ವರ್ಷದಿಂದ ವರ್ಷಕ್ಕೆ ರಾಜ್ಯದ ಅಸಲು ಮತ್ತು ಬಡ್ಡಿ ಪಾವತಿ ಮಾಡುವ ಪ್ರಮಾಣ ಹೆಚ್ಚಾಗುತ್ತಿದೆ ಎಂದರು.

ಈ ವರ್ಷ ₹14,178 ಕೋಟಿ ಅಸಲು, ₹29,397 ಕೋಟಿ ಬಡ್ಡಿ ಸೇರಿ ₹43,575 ಕೋಟಿ ಪಾವತಿಸಬೇಕು. ಅಲ್ಲದೇ, ಮುಂಬರುವ ವರ್ಷಗಳಲ್ಲಿ ಕ್ರಮವಾಗಿ ₹35,091 ಕೋಟಿ,₹38,629 ಕೋಟಿ, ₹42,789 ಕೋಟಿ ಬಡ್ಡಿ ಪಾವತಿಸಬೇಕಾಗಿದೆ ಎಂದು ಹೇಳಿದರು. 'ರಾಜ್ಯದಿಂದ ಅತಿ ಹೆಚ್ಚು ತೆರಿಗೆ ಕೇಂದ್ರಕ್ಕೆ ಹೋಗುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ. ನಮ್ಮ ಪ್ರಾಮಾಣಿಕತೆಗೆ ಶಿಕ್ಷೆ ನೀಡುವುದು ಒಪ್ಪುವ ಮಾತಲ್ಲ' ಎಂದು ಕೃಷ್ಣಬೈರೇಗೌಡ ಅವರು ತಿಳಿಸಿದರು.

'ಅನುದಾನ ತಾರತಮ್ಯದ ಬಗ್ಗೆ ಧ್ವನಿ'

'60 ರ ದಶಕದಿಂದಲೂ ಕೇಂದ್ರ ಸರ್ಕಾರ 'ಬಿಮಾರು' ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶ ರಾಜ್ಯ ಸೇರಿ ಬಡ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುತ್ತಿದೆ. ಆದರೆ, ಹೆಚ್ಚು ಆದಾಯ ನೀಡುವ ಕರ್ನಾಟಕ ಸೇರಿ ಹಲವು ರಾಜ್ಯಗಳಿಗೆ ಅನುದಾನ ಕಡಿಮೆ ಮಾಡುತ್ತಿರುವ ಬಗ್ಗೆ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಹಲವು ಆಕ್ಷೇಪ ವ್ಯಕ್ತಪಡಿಸಿದ್ದೇನೆ' ಎಂದು ಬೊಮ್ಮಾಯಿ ಹೇಳಿದರು.

'ನಾವು ಹೆಚ್ಚು ಆದಾಯ ನೀಡುವ ಕಾರಣಕ್ಕೆ ನಮ್ಮ ಮೇಲೆ ದಂಡ ಹಾಕಿ ಶಿಕ್ಷಿಸಬೇಡಿ ಎಂಬುದಾಗಿ ಅಧಿಕ ಆದಾಯ ನೀಡುವ ರಾಜ್ಯಗಳು ಸಭೆಯಲ್ಲಿ ಹೇಳಿವೆ. ದೇಶಕ್ಕೆ ಹೆಚ್ಚು ಕೊಡುಗೆ ನೀಡಿದರೂ ಏನು ಸಿಗುತ್ತಿಲ್ಲ' ಎಂದರು.

ಸುದ್ದಿ 2 ನಿಮಿಷ

'18,618 ಶಾಲಾ ಕೊಠಡಿಗಳ ದುರಸ್ತಿ'

ಬೆಳಗಾವಿ: ರಾಜ್ಯದಲ್ಲಿ 18,618 ಶಾಲಾ ಕೊಠಡಿಗಳ ದುರಸ್ತಿ ಮತ್ತು 8,100 ಹೊಸ ಕಟ್ಟಡಗಳ ನಿರ್ಮಾಣ ಕಾಮಗಾರಿ ನಡೆಸಲಾಗುವುದು ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಅವರ ಪ್ರಶ್ನೆಗೆ ಉತ್ತರಿಸಿ, 2013 ರಿಂದ ಆಡಳಿತ ನಡೆಸಿದ ಸರ್ಕಾರ 2018 ರವರೆಗೆ ಶಾಲಾ ಕೊಠಡಿ ದುರಸ್ತಿ ಮಾಡಲಿಲ್ಲ. ಇವೆಲ್ಲ ಕಾರಣಗಳಿಂದ ದೊಡ್ಡ ಪ್ರಮಾಣದಲ್ಲಿ ಕೊಠಡಿಗಳ ದುರಸ್ತಿ ಕಾರ್ಯ ಬಾಕಿಯಾಗಿದೆ. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ 3,617 ಹೊಸ ಕಟ್ಟಡ ನಿರ್ಮಿಸಿ, 5,731 ಕೊಠಡಿ ದುರಸ್ತಿ ಮಾಡಲಾಗಿದೆ ಎಂದರು.



ರಾಜ್ಯದಲ್ಲಿ ಒಟ್ಟು 42,239 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 13,107 ಕೊಠಡಿಗಳ ಸಣ್ಣ ದುರಸ್ತಿ ಮತ್ತು 14,373 ಕೊಠಡಿಗಳ ದೊಡ್ಡ ಮಟ್ಟದ ದುರಸ್ತಿ ಆಗಬೇಕಾಗಿದೆ. ಅದೇ ರೀತಿ 4,819 ಪ್ರೌಢಶಾಲೆಗಳ 1,365 ಕೊಠಡಿಗಳಿಗೆ ಸಣ್ಣ ಮಟ್ಟದ ದುರಸ್ತಿ ಆಗಬೇಕು, 1,059 ಪ್ರೌಢ ಶಾಲಾ ಕೊಠಡಿಗಳಿಗೆ ದೊಡ್ಡ ಪ್ರಮಾಣದ ದುರಸ್ತಿ ಆಗಬೇಕಾಗಿದೆ ಎಂದರು.

ಪಠ್ಯಪುಸ್ತಕ ಬದಲಿಸುವುದು, ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಯುವುದನ್ನು ಬಿಟ್ಟು ಕೊಠಡಿ ದುರಸ್ತಿಗೆ ಆದ್ಯತೆ ನೀಡಬೇಕಿತ್ತು ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಸಿಬಿಎಸ್‌ಇ: ಫೆ.15ರಿಂದ 10, 12ನೇ ತರಗತಿ ಪರೀಕ್ಷೆ ಆರಂಭ

ನವದೆಹಲಿ (ಪಿಟಿಐ): ಫೆ.15 ರಿಂದ 10 ಮತ್ತು 12 ನೇ ತರಗತಿ ಪರೀಕ್ಷೆಗಳು ಪ್ರಾರಂಭವಾಗಲಿವೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಗುರುವಾರ ಪ್ರಕಟಿಸಿದೆ. ಎರಡು ವಿಷಯಗಳ ನಡುವೆ ಸಾಕಷ್ಟು ಅಂತರ ನೀಡಲಾಗಿದೆ ಮತ್ತು ದಿನಾಂಕಗಳನ್ನು ನಿರ್ಧರಿಸುವಲ್ಲಿ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಂತಹ ಇತರ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಪರೀಕ್ಷೆ ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿದೆ.

ಮಸೂದೆಯ ತರಾತುರಿಗೆ ಬಿಜೆಪಿ, ಕಾಂಗ್ರೆಸ್ ಸದಸ್ಯರ ಆಕ್ಷೇಪ

ಆರು ಖಾಸಗಿ ವಿ.ವಿ ಮಸೂದೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಒಂದೇ ವಿಷಯಕ್ಕೆ ಸಚಿವ ಸಂಪುಟ ಸಭೆ ಕರೆದು ಒಪ್ಪಿಗೆ ಪಡೆದು, ತರಾತುರಿಯಲ್ಲಿ ಮಸೂದೆ ಮಂಡಿಸುವ ಅಗತ್ಯವೇನಿತ್ತು?' ಎಂದು ವಿಧಾನಸಭೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಆರು ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮಂಡಿಸಿದ ಮಸೂದೆಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯಿತು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು, ಜಿ.ಎಂ. ವಿಶ್ವವಿದ್ಯಾಲಯ, ಆಚಾರ್ಯ ವಿಶ್ವವಿದ್ಯಾಲಯ, ಕಿಷ್ಕಿಂದ ವಿಶ್ವವಿದ್ಯಾಲಯ, ಟಿ. ಜಾನ್ ವಿಶ್ವವಿದ್ಯಾಲಯ, ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ಸ್ಥಾಪನೆಗೆ ಮಸೂದೆ ಮಂಡಿಸಿದರು.

ಮಸೂದೆ ಮಂಡನೆಗೆ ಸಚಿವರು ಮುಂದಾಗುತ್ತಿದ್ದಂತೆ ಮಾತನಾಡಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ವಿಧಾನ ಪರಿಷತ್‌ನಲ್ಲಿ ಈ ಮಸೂದೆಗಳು ಇಂದೇ ಅಂಗೀಕಾರಗೊಳ್ಳುವುದಾರೆ ಇಲ್ಲೂ ಮಂಡಿಸುವುದರಲ್ಲಿ ನನ್ನ ಅಭ್ಯಂತರ ಇಲ್ಲ' ಎಂದರು.

ವಿಶೇಷ ಸಚಿವ ಸಂಪುಟ ಸಭೆ!

'ಈ ಮಸೂದೆಗಳಿಗೆ ಒಪ್ಪಿಗೆ ಪಡೆಯಲೆಂದೇ ವಿಶೇಷ ಸಚಿವ ಸಂಪುಟ ಕರೆಯುತ್ತಾರೆ. ಏನಿದು? ಜಿಲ್ಲೆಗೊಂದು, ಮುಂದೆ ತಾಲ್ಲೂಕುಗಳಿಗೊಂದು ವಿಶ್ವವಿದ್ಯಾಲಯಗಳನ್ನು ಮಾಡುತ್ತೀರಾ? ಕುಲಪತಿ ಹುದ್ದೆಗೆ ಲಾಬಿ ನಡೆಯುತ್ತದೆ. ನೇಮಕಕ್ಕೆ ಜಾತಿ ರಾಜಕೀಯ ಬೇರೆ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ್ ಕುಟುಕಿದರು.

'ಸ್ವಾಭಿಮಾನ, ಪ್ರತಿಷ್ಠೆಗೆ ಬಿದ್ದು ಮಸೂದೆಗಳನ್ನು ಪಾಸ್ ಮಾಡಬೇಡಿ. ತಕ್ಷಣ ವಾಪಸ್ ಪಡೆಯಿರಿ. ಮುಂದಿನ ಅಧಿವೇಶನದಲ್ಲಿ ಮಂಡಿಸಿ ಸುದೀರ್ಘ ಚರ್ಚೆಗೆ ಅವಕಾಶ ಕೊಡಿ' ಎಂದು ಆಗ್ರಹಿಸಿದರು.

ಆದರೆ, ತರಾತುರಿಯಲ್ಲಿ ಮಸೂದೆ ಮಂಡನೆಗೆ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ಎಚ್.ಕೆ. ಪಾಟೀಲ, ಬಿಜೆಪಿಯ ಅರವಿಂದ ಲಿಂಬಾವಳಿ, ವೀರಣ್ಣ ಚರಂತಿಮಠ, ಬಸನಗೌಡ ಪಾಟೀಲ ಯತ್ನಾಳ್ ತೀವ್ರ ವಿರೋಧ ವ್ಯಕ್ತಪಡಿಸಿದರು. 'ಆರೂ ಮಸೂದೆಗಳ ಕುರಿತು ಚರ್ಚೆ ನಡೆಯಬೇಕು. ಹೀಗಾಗಿ ಸರ್ಕಾರ ವಾಪಸು ಪಡೆಯಬೇಕು' ಎಂದು ಪಟ್ಟು ಹಿಡಿದರು. ಸಭಾಧ್ಯಕ್ಷರು ಕೂಡಾ ಮಸೂದೆಯ ಕುರಿತು ಚರ್ಚೆ ನಡೆಸಬೇಕಾದ ಅಗತ್ಯವಿದೆ ಎಂದು ಸಲಹೆ ನೀಡಿದರು. ಕೊನೆಗೆ ಒಲ್ಲದ ಮನಸ್ಸಿನಿಂದ ಅಶ್ವತ್ಥನಾರಾಯಣ ಅವರು ಮಸೂದೆಯನ್ನು ವಾಪಸು ಪಡೆಯುವುದಾಗಿ ಪ್ರಕಟಿಸಿದರು.

'ಕೇವಲ 10 ನಿಮಿಷದಲ್ಲಿ ಆರು ಮಸೂದೆಗಳಿಗೆ ಅಂಗೀಕಾರ ನೀಡಿದರೆ ಸದನದ ಘನತೆ ಎಲ್ಲಿ ಉಳಿಯಿತು? ಅಷ್ಟೊಂದು ಅಗತ್ಯವಿದ್ದರೆ ಸುಗ್ರೀವಾಜ್ಞೆ ಹೊರಡಿಸಿ, ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡಿಸಿ' ಎಂದು ಎಚ್.ಕೆ. ಪಾಟೀಲ ಸಲಹೆ ನೀಡಿದರು.

ಅಲಯನ್ಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಹತ್ಯೆಯನ್ನು ಪ್ರಸ್ತಾಪಿಸಿದ ಅರವಿಂದ ಲಿಂಬಾವಳಿ, 'ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ಸರ್ಕಾರದ ನಿಯಂತ್ರಣ ಇರಬೇಕು' ಎಂದು ಪ್ರತಿಪಾದಿಸಿದರು. ಅದಕ್ಕೆ ಧ್ವನಿಗೂಡಿಸಿದ ವೀರಣ್ಣ ಚರಂತಿಮಠ, 'ಸದ್ಯಕ್ಕೆ ಈ ಮಸೂದೆಗಳನ್ನು ಸರ್ಕಾರ ವಾಪಸ್ ಪಡೆಯಬೇಕು. ಖಾಸಗಿ ವಿ.ವಿಗಳಲ್ಲಿ ಪ್ರವೇಶಮಿತಿ ಹೇರಬೇಕು' ಎಂದರು.

'ನಿಮ್ಮ ಅಧಿಕಾರ ಬಳಸಿ ಮಸೂದೆಗಳನ್ನು ವಾಪಸ್ ಪಡೆಯಲು ಸೂಚಿಸಬೇಕು' ಎಂದು ಎಚ್.ಕೆ. ಪಾಟೀಲ ಅವರು ಸಭಾಧ್ಯಕ್ಷರಿಗೆ ಮನವಿ ಮಾಡಿದರು. ಅದಕ್ಕೆ ಸಭಾಧ್ಯಕ್ಷರು, 'ಸದನದಲ್ಲಿ ಸಂಖ್ಯೆಗೆ ಬಲ' ಎಂದಾಗ, ಪಾಟೀಲರು, 'ನಿಮ್ಮ ಆತ್ಮಸಾಕ್ಷಿ, ಆತ್ಮ ಪ್ರಜ್ಞೆ ಬಳಸಿ' ಎಂದರು. ಅದಕ್ಕೆ 'ನಿಯಮದಲ್ಲಿ ಅವಕಾಶ ಇಲ್ಲ' ಎಂದು ಸಭಾಧ್ಯಕ್ಷರು ತಿಳಿಸಿದಾಗ, 'ಪೀಠದ ಹಿಂದಿರುವ ಗಾಂಧಿ, ಬಸವಣ್ಣನ ಭಾವಚಿತ್ರವನ್ನೊಮ್ಮೆ ನೋಡಿ' ಎಂದರು.

ಈ ವೇಳೆ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಜೊತೆ ಚರ್ಚೆ ನಡೆಸಿದ ಅಶ್ವತ್ಥನಾರಾಯಣ, ಮಸೂದೆ ವಾಪಸು ಪಡೆಯುವುದಾಗಿ ತಿಳಿಸಿದರು.

ಪ್ರಬಲರಿಗೆ ಹೊಸ 'ಪ್ರವರ್ಗ'

ಒಂದನೇ ಪುಟದಿಂದ...

ಆದರೆ, ಪಂಚಮಸಾಲಿ ಮತ್ತು ಇತರ ವೀರಶೈವ– ಲಿಂಗಾಯತ ಸಮುದಾಯವನ್ನು 3ಬಿ ಯಿಂದ ಹೊಸದಾಗಿ ಸೃಷ್ಟಿಸಿರುವ '2 ಡಿ'ಗೆ ಸೇರಿಸಿ ಮೀಸಲಾತಿ ಕಲ್ಪಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಈ ಸಮುದಾಯಗಳಿಗೆ (ಪ್ರವರ್ಗ 2ಸಿ ಮತ್ತು 2ಡಿ) ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಕೇಂದ್ರ ಸರ್ಕಾರ ಘೋಷಿಸಿದ ಶೇ 10 ಮೀಸಲಾತಿಯನ್ನು ವಿಭಜಿಸಿ ಹಂಚಿಕೆ ಮಾಡಲಾಗುವುದು ಎಂದು ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರವರ್ಗ 2ಸಿ ಮತ್ತು 2ಡಿ ರಚಿಸಿರುವುದರಿಂದ, ಪ್ರವರ್ಗ 3 ಎ ಮತ್ತು 3ಬಿ ಪ್ರವರ್ಗವನ್ನು ತೆಗೆದುಹಾಕಲಾಗುವುದು ಎಂದು ಅವರು ವಿವರಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯ ಆಧಾರದಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಪ್ರವರ್ಗ 2 ಎ ಮತ್ತು 2 ಬಿಯಲ್ಲಿರುವ ಜಾತಿಗಳ ಮೀಸಲಾತಿಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಆ ವರ್ಗಗಳಿಗೆ ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿ ಈಗಿರುವ ರೀತಿಯಲ್ಲೇ ಮುಂದುವರಿಯಲಿದೆ. ಆದರೆ, 2 ಸಿ ಮತ್ತು 2 ಡಿ ಅಡಿ ಬರುವ ಒಕ್ಕಲಿಗ ಮತ್ತು ಪಂಚಮಸಾಲಿ ಲಿಂಗಾಯತರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಗಲಿದೆ. ಆದರೆ, ರಾಜಕೀಯ ಮೀಸಲಾತಿ ಹಿಂದೆ ಯಾವ ಪ್ರವರ್ಗದಲ್ಲಿ ಪಡೆಯುತ್ತಿದ್ದರೋ ಅದೇ ಮುಂದುವರಿಯಲಿದೆ ಎಂದು ಮಾಧುಸ್ವಾಮಿ ವಿವರಿಸಿದರು.

ಇಡಬ್ಲ್ಯುಎಸ್ ಹಂಚಿಕೆ ಮೊದಲು ಅಧ್ಯಯನ

'ಇಡಬ್ಲ್ಯುಎಸ್ ವರ್ಗದ ಶೇ 10 ಮೀಸಲಾತಿಯನ್ನು ವಿಭಜಿಸಿ ಹಂಚಿಕೆ ಮಾಡುವುದಕ್ಕೂ ಮೊದಲು ಯಾವುದೇ ಮೀಸಲಾತಿ ವರ್ಗದಲ್ಲಿ ಇಲ್ಲದ ಬ್ರಾಹ್ಮಣ, ವೈಶ್ಯ, ಜೈನ, ನಾಯರ್, ಮೊದಲಿಯಾರ್ ವರ್ಗದ ಜನಸಂಖ್ಯೆಯಲ್ಲಿ ಮೀಸಲಾತಿಗೆ ಅರ್ಹರಿರುವ ಸಂಖ್ಯೆಯ ಅಧ್ಯಯನ ನಡೆಸಲಾಗುವುದು. ಎರಡು ತಿಂಗಳಲ್ಲಿ ವರದಿ ಪಡೆದು ಹಂಚಿಕೆಯನ್ನು ನಿರ್ಧರಿಸಲಾಗುವುದು' ಎಂದು ಸಚಿವ ಮಾಧುಸ್ವಾಮಿ ವಿವರಿಸಿದರು.

'ಇಡಬ್ಲ್ಯುಎಸ್ ವರ್ಗದ ಶೇ 10 ಮೀಸಲಾತಿಯನ್ನು ವಿಭಜಿಸಿ ಶೇ 4ನ್ನು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ, ಶೇ 3 ನ್ನು ಒಕ್ಕಲಿಗ ಸಮುದಾಯಕ್ಕೆ ಮತ್ತು ಉಳಿದ ಶೇ 3ರನ್ನು ಕೇಂದ್ರದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಜಾತಿ ಪಟ್ಟಿಯಲ್ಲಿ ಇಲ್ಲದ ಆರ್ಥಿಕವಾಗಿ ದುರ್ಬಲ ವರ್ಗದ ಸಮುದಾಯಕ್ಕೆ ನೀಡಲು ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದು ಹಿರಿಯ ಸಚಿವರೊಬ್ಬರು ತಿಳಿಸಿದರು.

ಮೀಸಲಾತಿ ಹೆಚ್ಚಿಸಬೇಕೆಂಬ ಒಕ್ಕಲಿಗ ಸಮುದಾಯದ ಬೇಡಿಕೆಗೆ ಮುಖ್ಯಮಂತ್ರಿ ಸ್ಪಂದಿಸಿದ್ದಾರೆ. ಪ್ರವರ್ಗ 2 ಸಿ ಗೆ ತಂದಿರುವುದರಿಂದ ಮೀಸಲು ಹೆಚ್ಚಾಗುತ್ತದೆ

ಆರ್.ಅಶೋಕ
ಕಂದಾಯ ಸಚಿವ

ಸರ್ಕಾರದ ನಿರ್ಧಾರದಿಂದ ಸಮುದಾಯದ ಎಲ್ಲ ಸ್ವಾಮೀಜಿಗಳಿಗೂ ಮತ್ತು ಜನರಿಗೂ ಸಂತಸ ತಂದಿದೆ. ಬಹಳ ದಿನಗಳ ಬೇಡಿಕೆ ಈಡೇರಿದೆ

ಮುರುಗೇಶ ನಿರಾಣಿ
ಕೈಗಾರಿಕಾ ಸಚಿವ

ಒಕ್ಕಲಿಗ ಉಪ ಪಂಗಡಗಳನ್ನು ಒಳಗೊಂಡ 'ಪ್ರವರ್ಗ–3ಎ'ಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಶೇ 4 ರಿಂದ ಶೇ 12ಕ್ಕೆ ಹೆಚ್ಚಿಸಬೇಕೆಂದು ಒಕ್ಕಲಿಗ ಸಮುದಾಯ ಪಟ್ಟು ಹಿಡಿದಿತ್ತು. ಈ ಪ್ರವರ್ಗವನ್ನು 'ಪ್ರವರ್ಗ 2ಸಿ' ಎಂದು ಬದಲಿಸಿ, ಇಡಬ್ಲ್ಯುಎಸ್ ಮೀಸಲಾತಿಯಿಂದ ಶೇ 3ನ್ನು ಮರುಹಂಚಿಕೆ ಮಾಡಿದರೆ, ಈ ಹೊಸ ಪ್ರವರ್ಗಕ್ಕೆ ಮೀಸಲಾತಿ ಪ್ರಮಾಣ ಶೇ 7 ಹೆಚ್ಚಲಿದೆ.

'ಪ್ರವರ್ಗ–3ಬಿ'ಯಲ್ಲಿರುವ ಲಿಂಗಾಯತ ಪಂಚಮಸಾಲಿ ಸಮುದಾಯವು 'ಪ್ರವರ್ಗ 2ಎ'ಗೆ ಸೇರಿಸಬೇಕೆಂದು ಪಟ್ಟು ಹಿಡಿದಿತ್ತು. ಪ್ರವರ್ಗ 3ಬಿಗೆ ಸದ್ಯ ಶೇ 5ರಷ್ಟು ಮೀಸಲಾತಿಯಿದೆ. 'ಪ್ರವರ್ಗ 2 ಡಿ'ಗೆ ಇಡಬ್ಲ್ಯುಎಸ್ ಮೀಸಲಾತಿಯಿಂದ ಶೇ 4ನ್ನು ಮರುಹಂಚಿಕೆ ಮಾಡಿದರೆ ಮೀಸಲಾತಿ ಪ್ರಮಾಣ ಶೇ 9 ರಷ್ಟಾಗಲಿದೆ.

'ಪೂರ್ಣ ವರದಿ ನೋಡಿಕೊಂಡು ಮುಂದಿನ ಹೆಜ್ಜೆ'

ಒಂದನೇ ಪುಟದಿಂದ...

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಒಕ್ಕಲಿಗ ಸಮುದಾಯಕ್ಕೆ 2ಸಿ, ವೀರಶೈವ ಲಿಂಗಾಯತರಿಗೆ 2ಡಿ ಮೀಸಲಾತಿ ನೀಡುವುದಾಗಿ ಕಾನೂನು ಸಚಿವರು ತಿಳಿಸಿದ್ದಾರೆ. ಪಂಚಮಸಾಲಿ ಸಮುದಾಯ ಎಂಬ ಪದ ಬಳಕೆ ಇಲ್ಲ. ನಮ್ಮ ಸಮುದಾಯಕ್ಕೆ ಎಷ್ಟು ಸಿಗುತ್ತದೆ ಎಂಬುದು ಸ್ಪಷ್ಟವಿಲ್ಲ. ಸಮುದಾಯದ ಜನ ಸದ್ಯಕ್ಕೆ ಸಂಭ್ರಮಿಸಬಾರದು. ಸಂಕಟವನ್ನೂ ಪಡಬಾರದು' ಎಂದು ಹೇಳಿದರು.

'ನಾವು 2ಎ ಮೀಸಲಾತಿಗೆ ಹೋರಾಡಿದ್ದೇವೆ. ಸರ್ಕಾರ ರಚಿಸಿದ ಹೊಸ ಪ್ರವರ್ಗಗಳಲ್ಲಿ ಇದೇ ಪ್ರಮಾಣದ ಮೀಸಲಾತಿ ಇದೆಯೇ ಎಂದು ಪರಿಶೀಲಿಸುತ್ತೇವೆ. ನಮ್ಮ ಉದ್ದೇಶ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಸಿಗಬೇಕು ಎಂಬುದು ಮಾತ್ರ' ಎಂದು ಹೇಳಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಅವರು, '2ಎ ಮೀಸಲಾತಿ ಸಿಕ್ಕಿಲ್ಲ ಎಂದು ಯಾರೂ ದುಡುಕಬೇಡಿ, ಯಾವುದೋ ಒಂದು ಸಿಕ್ಕಿದೆ ಎಂದು ತೃಪ್ತಿಪಡಬೇಡಿ. ಇನ್ನೂ ಮೂರು ದಿನ ನೋಡೋಣ' ಎಂದು ಹೇಳಿದರು.

ಐದು ಮೆಗಾ ಹಾಸ್ಟೆಲ್‌ಗಳ ನಿರ್ಮಾಣ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದ ಐದು ಸ್ಥಳಗಳಲ್ಲಿ ಮೆಗಾ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ 2022–23ನೇ ಸಾಲಿನ ಪೂರಕ ಅಂದಾಜಿನ ಎರಡನೇ ಕಂತಿನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, 'ಪ್ರಥಮ ಬಾರಿ ಮೆಗಾ ಹಾಸ್ಟೆಲ್ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇವೆ. ಮಂಗಳೂರು, ಧಾರವಾಡ, ಮೈಸೂರು, ಕಲಬುರಗಿ ಮತ್ತು ಬೆಂಗಳೂರಿನಲ್ಲಿ ಈ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು' ಎಂದು ತಿಳಿಸಿದರು.

'ಅಗತ್ಯವಿದ್ದರೆ ಇತರ ಶೈಕ್ಷಣಿಕ ಕೇಂದ್ರಗಳಲ್ಲಿ ಮೆಗಾ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು. ಈ ಯೋಜನೆಯಿಂದ ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಹೇಳಿದರು.

'ಉನ್ನತ ಶಿಕ್ಷಣದಲ್ಲಿ ಪ್ರಾಧ್ಯಾಪಕರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಪ್ರಯೋಜನದ ಬಗ್ಗೆಯೂ ಮೌಲ್ಯಮಾಪನ ಮಾಡಬೇಕಾಗಿದೆ. ಒಟ್ಟಾರೆ ಮುಂದಿನ ಐದು ವರ್ಷಗಳಲ್ಲಿ ಈ ಬದಲಾವಣೆಗಳನ್ನು ತರಲಾಗುವುದು' ಎಂದು ವಿವರಿಸಿದರು.

ಸಾಲದ ಹೊರೆ ಹೆಚ್ಚಾಗುತ್ತಿದೆ. ಬಡ್ಡಿ ಪಾವತಿಸುವುದು ಹೆಚ್ಚಾಗುತ್ತಿದೆ. ನಿವೃತ್ತ ಐಎಎಸ್ ಅಧಿಕಾರಿ ಗುರುಚರಣ್ ನೇತೃತ್ವದ ಸಮಿತಿ ಶಿಫಾರಸುಗಳನ್ನು ಒಪ್ಪಿಕೊಳ್ಳಬೇಕು

ಕೆ.ಎ. ತಿಪ್ಪೇಸ್ವಾಮಿ
ವಿಧಾನ ಪರಿಷತ್ ಸದಸ್ಯ

ಪ್ರತಿ ದಿನ ಯೋಜನೆಗಳು ಘೋಷಣೆಯಾಗುತ್ತಿದ್ದರೂ ಅನುದಾನ ಮಾತ್ರ ಇಲ್ಲ. ಪಠ್ಯಪುಸ್ತಕಗಳು ಸಹ ವಿದ್ಯಾರ್ಥಿಗಳಿಗೆ ದೊರೆತಿಲ್ಲ

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್
ವಿರೋಧ ಪಕ್ಷದ ನಾಯಕ

‘ಸಾಹಿತ್ಯ ಸಮ್ಮೇಳನ: 13 ಮುಸ್ಲಿಮರಿಗೆ ಅವಕಾಶ’

ಪ್ರಜಾವಾಣಿ ವಾರ್ತೆ

ಹಾವೇರಿ: ‘86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಸ್ಲಿಂ ಸಮುದಾಯದ 13 ಪ್ರತಿಭೆಗಳಿಗೆ ಅವಕಾಶ ನೀಡಲಾಗಿದೆ. ಹಿಂದಿನ 7 ಸಮ್ಮೇಳನಗಳಿಗಿಂತ ಈ ಬಾರಿಗೆ ಅತಿ ಹೆಚ್ಚು ಪ್ರಾಧಾನ್ಯ ನೀಡಿದ್ದೇವೆ. ಮುಸ್ಲಿಂ ಸಮುದಾಯವನ್ನು ಕಡೆಗಣಿಸಿದ್ದಾರೆ ಎಂಬ ಆರೋಪ ಪೂರ್ವನಿಯೋಜಿತ ಕುತಂತ್ರ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರತಿಕ್ರಿಯಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಅಮುಕ್ತ ಪತ್ರಿಕೆಯ ಮುಖಪುಟದಲ್ಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರಾದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಭಾವಚಿತ್ರ ಪ್ರಕಟಿಸಿದ್ದೇವೆ. ಪ್ರಧಾನ ವೇದಿಕೆಗೆ ಶಿಶುನಾಳ ಷರೀಫರ ಹೆಸರಿಟ್ಟಿದ್ದೇವೆ. ‘ಕನ್ನಡ ರಥ’ ತಯಾರಿಸಿದವರು ಷಹಾಜಹಾನ್ ಮುದಕವಿ ಮತ್ತು ರಾಜ್ಯದಾದ್ಯಂತ ರಥವನ್ನು ಮುನ್ನಡೆಸುತ್ತಿರುವವರು ನಸೀಮ್ ಕುಷ್ಟಗಿ. ಇದರಲ್ಲಿ ಮುಸ್ಲಿಮರಿಲ್ಲವೇ?’ ಎಂದು ಪ್ರಶ್ನಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಲೀಂ ಅಹಮದ್, ಕವಿಗೋಷ್ಠಿ ನಿರ್ವಹಣೆಗೆ ಮೆಹಬೂಬ್ ಹುಸೇನ್, ಸ್ವಾಗತ ಪರಿಚಯ ಗೋಷ್ಠಿಯಲ್ಲಿ ಮಹಮ್ಮದ್ ರಫಿ ಪಾಷಾ ಇದ್ದಾರೆ. ನಿರ್ವಹಣೆ, ನಿರೂಪಣೆ, ಸ್ವಾಗತ, ವಂದನಾರ್ಪಣೆಗಳಲ್ಲಿ ಮಹಬೂಬ್ ಹುಸೇನ್, ಹಾಸಿಂಪೀರ್ ವಾಲೀಕಾರ್, ರಂಜಾನ್ ಕಿಲ್ಲೇದಾರ, ನದೀಂಸಾಬ್ ಕುಷ್ಟಗಿ, ಎಂ.ಹಾಸಿಂ ಮುಂತಾದವರು ಇದ್ದಾರೆ’ ಎಂದರು.

ಪೂರ್ವಗ್ರಹ ಪೀಡಿತರು: ‘ಪುರುಷೋತ್ತಮ ಬಿಳಿಮಲೆ, ಬಿ.ಎಂ. ಹನೀಫ್, ಆರ್.ಜಿ.ಹಳ್ಳಿ ನಾಗರಾಜ್ ‘ಜನಸಾಹಿತ್ಯ ಸಮ್ಮೇಳನ’ದ ಮುಂದಾಳತ್ವ ವಹಿಸಿದ್ದಾರೆ. ಪೂರ್ವಗ್ರಹ ಪೀಡಿತರಾಗಿ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಮನೋರೋಗದಿಂದ ನರಳುತ್ತಿರುವ ಪ್ರಗತಿಪರ ಚಿಂತಕರು ಅದರಿಂದ ಹೊರಬರಬೇಕು’ ಎಂದರು.

‘ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗಿದೆ ಎಂಬ ಕಪೋಲಕಲ್ಪಿತ ಸಂಗತಿ ಹರಡಿ, ಸಮಾಜದಲ್ಲಿ ದ್ವೇಷ ಹುಟ್ಟುವ ಕೃತ್ಯ ನಡೆಯುತ್ತಿದೆ. ಸಾಹಿತ್ಯ ಸಮ್ಮೇಳನ ಜಾತಿ ಮತ್ತು ಧರ್ಮಗಳನ್ನು ಮೀರಿದ್ದು, ಕನ್ನಡವೇ ಇಲ್ಲಿ ಮಾನದಂಡ’ ಎಂದರು.

‘ನಾನು ಗುರುಗೋವಿಂದ ಭಟ್ಟರ ಮರಿಮೊಮ್ಮಗ. ನನಗಿಂತ ಜಾತ್ಯತೀತ ವ್ಯಕ್ತಿ ಬೇಕಾ? ಕನ್ನಡದ ಅಸ್ಮಿತೆಯನ್ನು ಧ್ವಂಸ ಮಾಡುವವರನ್ನು ಕನ್ನಡಿಗರು ದೂರವಿಡಬೇಕು’ ಎಂದು ಜೋಶಿ ಮನವಿ ಮಾಡಿದರು.

‘ಶಾಮಿಯಾನ ಆರ್ಡರ್ ಕೊಡದಿದ್ದಕ್ಕೆ ಆರೋಪ’

‘ಲೇಖಕ ಪುರುಷೋತ್ತಮ ಬಿಳಿಮಲೆ ಅವರು ದೂರವಾಣಿ ಕರೆ ಮಾಡಿ, ‘ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಶಾಮಿಯಾನ ಪೆಂಡಾಲ್ ಹಾಕಲು ಪರಿಚಿತರಾದ ಮುಸ್ಲಿಂ ವ್ಯಾಪಾರಿಯೊಬ್ಬರಿಗೆ ಕೊಡಿಸಿ’ ಎಂದು ಕೇಳಿದ್ದರು. ಅದಕ್ಕೆ ‘ಇದು ಜಿಲ್ಲಾಡಳಿತದ ವ್ಯಾಪ್ತಿಗೆ ಬರುತ್ತದೆ. ನನ್ನ ಕ್ಷೇತ್ರವಲ್ಲ’ ಎಂದಿದ್ದೆ. ಇದನ್ನೇ ನೆಪವಾಗಿಟ್ಟುಕೊಂಡು ಈಗ ನನ್ನ ವಿರುದ್ಧ ಟೀಕೆ ಮಾಡುತ್ತಿದ್ದಾರೆ’ ಎಂದು ಮಹೇಶ ಜೋಶಿ ಆರೋಪಿಸಿದರು.

‘ಹಾವೇರಿ ಸಮ್ಮೇಳನಕ್ಕೆ ಬರುತ್ತೇನೆ ಎಂದು ಒಪ್ಪಿಕೊಂಡಿದ್ದ ಬಿಳಿಮಲೆ ಅವರು ಕೊನೇ ಕ್ಷಣದಲ್ಲಿ ಅನಾರೋಗ್ಯದ ಕಾರಣ ನೀಡಿ ಬರಲು ಸಾಧ್ಯವಾಗುತ್ತಿಲ್ಲ ಎಂದು ಸಂದೇಶ ಕಳುಹಿಸಿದ್ದಾರೆ. ಜ. 8ರಂದು ಜನಸಾಹಿತ್ಯ ಸಮ್ಮೇಳನ ನಡೆಸಲು ತೊಂದರೆ ಇಲ್ವಾ? ಸ್ವಂತಲಾಭ, ಸ್ವಹಿತಕ್ಕಾಗಿ ಆರೋಪ ಮಾಡಿದ್ದಾರೆ. ಬಿಳಿಮಲೆಯವರು ನನ್ನ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದರೂ ಎದುರಿಸಲು ಸಿದ್ಧವಿದ್ದೇನೆ’ ಎಂದು ಹೇಳಿದರು.

ಅಸಾಮಾನ್ಯ ಬದುಕಿನ ಶಿಲ್ಪಿ ಕಾಮರೂಪಿ


● ಪ್ರಸನ್ನ

ನೆನ್ನೆ (ಗುರುವಾರ), ಕಾಮರೂಪಿ, ಎಂ.ಎಸ್. ಪ್ರಭಾಕರ ನಿಧನರಾದರು. ತನ್ನ ಕಡೆಗಾಲದಲ್ಲಿ ತುಂಬಾ ಪ್ರೀತಿಯಿಂದ ತವರು ಕೋಲಾರದ ಮನೆಗೆ ಹಿಂದಿರುಗಿದ ಅವರು, ಐದು ದಶಕಗಳಷ್ಟು ಕಾಲ ಬದಲಾಗಿ ಹೋಗಿದ್ದ ಕನ್ನಡ ನಾಡು ನುಡಿಗಳನ್ನು ಸಂಭಾಳಿಸಲಾಗದೆ ಸೋತುಹೋದರು. ಒಂಟಿಯಾದರು. ಸಾವಿಗಾಗಿ ಕಾಯುತ್ತಾ, ಅದು ಬರುತ್ತಿಲ್ಲವೆಂದು ಕನಲುತ್ತಾ, ಅಕ್ಷರಗಳೊಡನೆ ಕೆಲವೇ ಸ್ನೇಹಿತರ ಮೇಲೆ ಹರಿಹಾಯುತ್ತಾ, ಕಡೆಗಾಲದ ಕೆಲವು ವರ್ಷಗಳನ್ನು ಕಳೆದರು ಪ್ರಭಾಕರ.

ಅವರನ್ನು ಹತ್ತಿರದಿಂದ ಬಲ್ಲವರೂ, ಅಪಾರವಾಗಿ ಗೌರವಿಸುತ್ತಿದ್ದವರೂ ಆದ ನಮಗೆಲ್ಲಾ, ಕಳೆದ ಕೆಲವು ವರ್ಷಗಳು ಮುಜುಗರದ ಸಂಗತಿಯಾಗಿತ್ತು. ಅವರನ್ನು ಭೇಟಿಯಾಗುವ ಮೊದಲು ಅಥವಾ ಅವರಿಗೆ ಫೋನು ಮಾಡುವ ಮೊದಲು, ನಾನು ಮನಸ್ಸು ಗಟ್ಟಿ ಮಾಡಿಕೊಳ್ಳುತ್ತಿದ್ದೆ. ಅಕಾರಣವಾಗಿ, ದ್ವೇಷ ಸಿಟ್ಟು ಮಾಡುತ್ತಿದ್ದರು, ಸಿಡಿ ಸಿಡಿ ಹಾಯುತ್ತಿದ್ದರು. ಆದರೆ ನಿಜದ ಪ್ರಭಾಕರ ಅಂತಹವರಾಗಿರಲಿಲ್ಲ. ಜೀವ ಸ್ಫುರಿಸುತ್ತಿದ್ದವರು, ಕನ್ನಡ ಕಂಡಿರುವ ಅತ್ಯಂತ ವರ್ಣರಂಜಿತ ವ್ಯಕ್ತಿತ್ವವಾಗಿತ್ತು ಅವರದ್ದು.

ಅವರ ದುಗುಡ, ಏಕಾಂತತೆ ಹಾಗೂ ಪರಕೀಯ ಭಾವನೆಗಳು ಅಷ್ಟು ಗಾಢವಾಗಿ ಅವರನ್ನು ಕಾಡಿತ್ತು ಕಡೆಗಾಲದಲ್ಲಿ. ಪ್ರಭಾಕರ ಅವರನ್ನು ಹೇಗೆಂದು ವರ್ಣಿಸಲಿ, ಎಲ್ಲಿಂದ ಆರಂಭಿಸಲಿ ಹೇಳಿ? ಕನ್ನಡ ಸಾಹಿತ್ಯದಲ್ಲಿ ಮಿಲಿಟೆಂಟ್ ಆಧುನಿಕತೆಯ ಆರಂಭಿಕ ದಿನಗಳವು. ನಿರಾಶವಾದ, ಏಕಾಂತ, ಪರಕೀಯ ಪ್ರಜ್ಞೆಗಳನ್ನು ಹೆಪ್ಪುಗಟ್ಟಿಸಿ, ಹರಳು ಹರಳಾಗಿಸಿ ಕಾಗದಕ್ಕಿಳಿಸಲು ಹಟ ಹಿಡಿದಿದ್ದ ಕೆಲ ಲೇಖಕರು. ಅಡಿಗ, ರಾಘವ, ಅನಂತಮೂರ್ತಿ, ಲಂಕೇಶ್ ಆನಂತರದವರು. ‘ನಾಲ್ಕನೇ ಆಯಾಮ’ ಎಂಬ ಹೆಸರಿನ ಕಿರು ಕಾದಂಬರಿ ಬರೆದ ಕುಸುಮಾಕರ ದೇವರಗೆಣ್ಣೂರ, ‘ಮುಕ್ತಿ’ ಬರೆದ ಶಾಂತಿನಾಥ ದೇಸಾಯಿ, ‘ಹಳದಿ ಮೀನು’ ಬರೆದ ಅಥವಾ ಅನುವಾದಿಸಿದ ಅನ್ನಿ, ಎ.ಕೆ. ರಾಮಾನುಜನ್ ಅವರ ಸಾಲಿನಲ್ಲಿ ಬರುತ್ತಾರೆ ಒಂದು ತೊಲ ಪುನುಗು ಮತ್ತು ಇತರ ಕತೆಗಳನ್ನು ಬರೆದ ಪ್ರಭಾಕರ.

ರಾಜೀವ ತಾರಾನಾಥರ ಸಮಕಾಲೀನ ಗೆಳೆಯರು, ಸುಮತೀಂದ್ರ ನಾಡಿಗರ ಸಹಪಾಠಿ, ಲಂಕೇಶ್, ಅನಂತಮೂರ್ತಿ, ಗಿರೀಶ್ ಇತ್ಯಾದಿ ಲೇಖಕರಿಂದ ಮುದ್ದಿಸಿಕೊಂಡವರು. ದೂರದ ಅಸ್ಸಾಮಿನ ಗುವಾಹಟಿಯಲ್ಲಿ ಯೂನಿವರ್ಸಿಟಿ ಇಂಗ್ಲಿಷ್ ಅಧ್ಯಾಪಕರಾದರು. ಅಸ್ಸಾಂ ಗಣ ಪರಿಷತ್ತಿನ ಮೊದಲ ಅಧ್ಯಕ್ಷ ಹಾಗೂ ಮೊದಲ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ ಮೊಹಂತ ಇವರ ಶಿಷ್ಯವರ್ಗದ ಒಬ್ಬರು. ಈಗಲೂ ಪೂರ್ವೋತ್ತರ ರಾಜ್ಯಗಳ ಚಿಂತಕರು ಪ್ರಭಾಕರರನ್ನು ತಮ್ಮ ಪ್ರದೇಶದ ಬಗ್ಗೆ ನಿಖರ ಜ್ಞಾನಿ ಎಂದೇ ತಿಳಿಯುತ್ತಾರೆ, ಗೌರವಿಸುತ್ತಾರೆ.



ನುಡಿ ನಮನ

ನಂತರ ಪತ್ರಿಕೋದ್ಯಮಿಯಾದರು. ಸಿಲೋನಿನಲ್ಲಿ ರಾಜಕೀಯ ಕ್ರಾಂತಿ ಕಂಡರು. ದಕ್ಷಿಣ ಆಫ್ರಿಕಾದಲ್ಲಿ ಅಪಾರ್ಥೈಡ್ ಕಾಲ ಮುಗಿದಾಗ ಅಲ್ಲಿದ್ದರು. ಕರಿಯರ ಮೊದಲ ಅಧ್ಯಕ್ಷ ನೆಲ್ಸನ್ ಮಂಡೇಲ ಆ ದೇಶದ ಅಧಿಕಾರ ಸ್ವೀಕರಿಸಿದ ನಂತರ ಮೊತ್ತ ಮೊದಲ ಸಂದರ್ಶನ ನೀಡಲಿಕ್ಕೆ ಆಯ್ದುಕೊಂಡ ಪತ್ರಕರ್ತ ಪ್ರಭಾಕರ ಆಗಿದ್ದರು. ಅದಕ್ಕೂ ಮೊದಲು ಮುಂಬಯಿಯಲ್ಲಿ ಹೆಸರಾಂತ ಆರ್ಥಿಕ ಹಾಗೂ ರಾಜಕೀಯ ಪತ್ರಿಕೆ ‘ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ’ಯಲ್ಲಿ ಸಂಪಾದಕ ಮಂಡಳಿಯಲ್ಲಿದ್ದರು. ಇತ್ಯಾದಿ, ಇತ್ಯಾದಿ.

ಮುಂಬೈಯಲ್ಲಿ ಹಲವು ವಾರಗಳ ಕಾಲ, ಹಲವು ಬಾರಿ, ನಾನು ಚೌಪಾಟಿ ಬೀಚಿನ ಹತ್ತಿರದಲ್ಲಿದ್ದ ಅವರ ಬಂಗಲೆಯಲ್ಲಿ-ಸ್ನೇಹಿತನ ಮನೆಯಾಗಿತ್ತು ಅದು, ಅವರೊಂದಿಗೆ ನಾನು ಕಾಲ ಕಳೆದಿದ್ದೇನೆ. ಭಾನುವಾರ ಬಂತೆಂದರೆ ಚೌಪಾಟಿ ಸಮುದ್ರ ತೀರದ ಹಳೆಯ ಪುಸ್ತಕದಂಗಡಿ-ಹಂಗಾಮಿ ಅಂಗಡಿಯ ಹತ್ತಿರ ಹಾಜರಾಗುತ್ತಿದ್ದರು. ಅವರ ಬಗಲಲ್ಲಿ ಚದುರಂಗದ ಹಾಸಿರುತ್ತಿತ್ತು. ಹಂಗಾಮಿ ಅಂಗಡಿ ಮಾಲೀಕ, ಪೋಲಿ ಪುಸ್ತಕದಿಂದ ಹಿಡಿದು ಶೇಕ್ಸ್‌ಪಿಯರನವರೆಗೆ, ಪತ್ತೇದಾರಿ ಕಾದಂಬರಿಯಿಂದ ಹಿಡಿದು ಪುರಾತನ ಅಟ್ಲಾಸುಗಳ ವರೆಗೆ ಸಕಲ ಸಂಗತಿಗಳನ್ನೂ ಮಾರುತ್ತಿದ್ದ ಅನಕ್ಷರಸ್ಥ ವ್ಯಾಪಾರಿ ಇವರ ಹಲವು ಸ್ನೇಹಿತರಲ್ಲಿ ಒಬ್ಬ.

ಅಲ್ಲಿ ಹಾದಿ ಬದಿಯ ಪಾವಟಿಗೆಯ ಮೇಲೆ ಹಾಸು ಹಾಸಿ ಚದುರಂಗದ ಕಾಯಿ ಜೋಡಿಸಿಕೊಂಡು ಇಬ್ಬರು ಆಡುತ್ತಿದ್ದರು. ಅವನಿಂದ ಹಾಗೂ ಅವನಂತಹ ಅನೇಕರಿಂದ ಪ್ರವೇಶ ಪಡೆಯುತ್ತಿದ್ದರು. ಪ್ರಭಾಕರ ಸಾಮಾನ್ಯ ಜನಗಳ ಅಸಾಮಾನ್ಯ ಜಗತ್ತಿನೊಳಗೆ ಪ್ರಭಾಕರ ಮಾರ್ಕ್ಸ್‌ವಾದಿ, ಕಡೆಕಡೆಗೆ ಅವರಿಗೆ ನಾನೂ ಮಾರ್ಕ್ಸ್‌ವಾದಿಯಾಗಿ ಮೈಲಿಗೆಯಾದ ಎಂದೇ ಅನ್ನಿಸಿತ್ತು. ಹಾಗಂತ ಪ್ರಭಾಕರ ಶುಷ್ಕ ಎಡಪಂಥೀಯ ಖಂಡಿತ ಆಗಿರಲಿಲ್ಲ.

ಒಮ್ಮೆ ಅದೆಲ್ಲಿಂದಲೊ ಫೋನ್, ಇನ್ನೆಲ್ಲೊ ಇದ್ದ ನನಗೆ ಫೋನಿನಲ್ಲೇ, ತಾವು ಕಲಿಯುತ್ತಿದ್ದ ಸಂಗೀತ ಕೇಳಿಸಿದ್ದರು. ಅದು, ಬಿ.ವಿ. ಕಾರಂತರು ನಿರ್ದೇಶಿಸಿದ್ದ ‘ಸತ್ತವರ ನೆರಳು’ ನಾಟಕದಲ್ಲಿ ಕಾರಂತರು ಸಂಯೋಜಿಸಿದ್ದ ದಾಸರ ಪದಗಳಾಗಿದ್ದವು. ‘ಅಹಾ, ಆಹಾ!... ಎಷ್ಟು ಚೆನ್ನಾಗಿದೆ..ರಿ!’ ಎಂದು ಖುಷಿಪಟ್ಟಿದ್ದರು ಅವರು.

ಪತ್ತೇದಾರಿ ಕಾದಂಬರಿಯಲ್ಲಿ ಹಲವು ವಿಧಗಳಿವೆ. ಇಂಗ್ಲಿಷ್ ಕಾದಂಬರಿಗಳದ್ದೊಂದು ರೀತಿಯಾದರೆ, ಅಮೆರಿಕದ ಕಾದಂಬರಿಕಾರರದ್ದೊಂದು ರೀತಿ. ಅಮೆರಿಕದ ಆರಂಭಿಕ ಪತ್ತೇದಾರಿ ಕಾದಂಬರಿಕಾರರು ಹೆಚ್ಚು ನಿಷ್ಠುರವಾದಿಗಳಾಗಿದ್ದರು. ಹಾರ್ಡ್‌ಬಾಯಿಲ್ಡ್ ಎಂಬ ರಾಚನಿಕ ಶೈಲಿಯೊಂದನ್ನು ರೂಪಿಸಿದರು. ಡೇಶಿಯಲ್ ಹ್ಯಾಮೆಟ್‌ನ ಕಾದಂಬರಿಗಳೆಂದರೆ ಅವರಿಗೆ ಅಪಾರ ಪ್ರೀತಿ. ಆತನ ಅತ್ಯಂತ ಜನಪ್ರಿಯ ಕಾದಂಬರಿ-ನಂತರ ಜನಪ್ರಿಯ ಹಾಲಿವುಡ್ ಸಿನೆಮಾ ಆದದ್ದು, ಮಾಲ್ಟೆಸ್ಸಾ ಫಾಲ್ಕನ್ ಬಗ್ಗೆ ನನಗೆ ಮೊದಲು ಹೇಳಿದ್ದು ಅವರೇ.

ಇಂಗ್ಲಿಷ್ ಕಾದಂಬರಿಕಾರರಲ್ಲಿ ಎರಿಕ್ ಆ್ಯಂಬ್ಲರ್ ಅವರ ಪ್ರೀತಿಗೆ ಪಾತ್ರನಾಗಿದ್ದ, ಇರಲಿ ನಮ್ಮ ಕನ್ನಡದ ಮಹಾನ್ ಸಿನಿಕ, ಬುದ್ಧಿವಂತ, ನಾಟಕೀಯ ಸ್ವಭಾವದ ವ್ಯಕ್ತಿ, ಎಂ.ಎಸ್. ಪ್ರಭಾಕರರಿಗೆ ನಾನು ಸಲ್ಲಿಸಬಹುದಾದ ಸಣ್ಣ ನುಡಿನಮನ.

(ಲೇಖಕರು: ರಂಗಕರ್ಮಿ)

ಸಾಹಿತಿ, ಪತ್ರಕರ್ತ ಎಂ.ಎಸ್. ಪ್ರಭಾಕರ ನಿಧನ

ಕೋಲಾರ: ‘ಕಾಮರೂಪಿ’ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಸಾಹಿತಿ, ಪತ್ರಕರ್ತ ಎಂ.ಎಸ್. ಪ್ರಭಾಕರ (87) ಗುರುವಾರ ಇಲ್ಲಿನ ಸ್ವಗೃಹದಲ್ಲಿ ನಿಧನರಾದರು.

ನಗರದ ಕಠಾರಿಪಾಳ್ಯ ನಿವಾಸಿ ಆಗಿದ್ದ ಇವರು ಅವಿವಾಹಿತರಾಗಿದ್ದರು. ಅವರ ಇಚ್ಛೆಯಂತೆ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದೇಹದಾನ ಮಾಡಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿಕ್ಷಕರಾಗಿದ್ದ ತಂದೆ ಎಂ.ಎಸ್. ಸೂರಪ್ಪ ಹಾಗೂ ತಾಯಿ ಸುಬ್ಬಮ್ಮ ಅವರ 11 ಮಕ್ಕಳಲ್ಲಿ ಕಾಮರೂಪಿ ಕೊನೆಯವರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಅವರು ಧಾರವಾಡದ ಕರ್ನಾಟಕ ವಿವಿಯಲ್ಲಿ ಪಿಎಚ್.ಡಿ ಪದವಿ ಪಡೆದಿದ್ದರು. ಬೆಂಗಳೂರು ಹಾಗೂ ಧಾರವಾಡದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದರು.

ಬಹುಕಾಲ ಗುವಾಹಟಿಯಲ್ಲಿ ವಾಸವಿದ್ದ ಅವರು ಅಲ್ಲಿನ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಅಸ್ಸಾಂ ಪ್ರದೇಶದ ಕಾಮರೂಪಿ ಹೆಸರನ್ನೇ ತಮ್ಮ ಕಾವ್ಯನಾಮವಾಗಿಸಿಕೊಂಡರು. 1975ರಲ್ಲಿ ಉಪನ್ಯಾಸಕ ವೃತ್ತಿ ತೊರೆದ ಬಳಿಕ ಮುಂಬೈನಲ್ಲಿ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಹಾಗೂ ಗುವಾಹಟಿಯಲ್ಲಿ ದಿ ಹಿಂದೂ ಪತ್ರಿಕೆಯ ವರದಿಗಾರರಾಗಿ ಕಾರ್ಯ ನಿರ್ವಹಿಸಿದ್ದರು. 2002ರಿಂದಲೂ ಕಠಾರಿಪಾಳ್ಯದ ನಿವಾಸದಲ್ಲಿ ಒಂಟಿಯಾಗಿ ಜೀವನ ನಡೆಸುತ್ತಿದ್ದ ಅವರು ‘ಕಾಮರೂಪಿ’ ಬ್ಲಾಗ್ ಮೂಲಕವೂ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರು. ದೇಶ, ವಿದೇಶಗಳ ಇಂಗ್ಲಿಷ್ ವೆಬ್‌ಸೈಟ್‌ಗಳಿಗೆ ಅಂಕಣ ಬರೆಯುತ್ತಿದ್ದರು. ‘ಕುದುರೆ ಮೊಟ್ಟೆ’, ‘ಒಂದು ತೊಲ ಪುನುಗು ಮತ್ತು ಇತರ ಕಥೆಗಳು’, ‘ಅಂಜಿಕಿನ್ಯಾತಕಯ್ಯ’ ಅವರ ಪ್ರಮುಖ ಕೃತಿಗಳು. ‘ಸಮಗ್ರ ಕಾಮರೂಪಿ’ ಕೃತಿಯು ಅವರ ಲೇಖನಗಳ ಗುಚ್ಛ. 2018ರಲ್ಲಿ ಸಾಹಿತ್ಯ ವಿಭಾಗದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು.

ಅತಿಥಿ ಉಪನ್ಯಾಸಕರು ಅತಂತ್ರ

ಒಂದನೇ ಪುಟದಿಂದ

ಇದರಿಂದ ಸ್ನಾತಕೋತ್ತರ ಪದವೀಧರರಾದ 6 ಸಾವಿರ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡರು. ಅವರಲ್ಲಿ ಬಹುತೇಕರು ಇಂದು ಜೀವನ ನಿರ್ವಹಣೆಗಾಗಿ ಬೇರೆಬೇರೆ ಕೆಲಸ ಮಾಡುತ್ತಿದ್ದಾರೆ. ಇರುವ ಅತಿಥಿ ಉಪನ್ಯಾಸಕರಿಗೆ ಸೇವಾ ಅವಧಿ, ಶೈಕ್ಷಣಿಕ ಅರ್ಹತೆ ಆಧಾರದ ಮೇಲೆ ₹ 26 ಸಾವಿರದಿಂದ ₹ 32 ಸಾವಿರ ಗೌರವಧನ ನೀಡಲಾಗುತ್ತಿದೆ.

2021-22ರ ಶೈಕ್ಷಣಿಕ ಅವಧಿ ಮುಕ್ತಾಯವಾಗದ್ದು, ಅತಿಥಿ ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಎಲ್ಲ ಕಾಲೇಜುಗಳಿಗೂ ಸೂಚಿಸಲಾಗಿದೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಏರುಪೇರಾದ ಶೈಕ್ಷಣಿಕ ಅವಧಿ: ಪದವಿ ಕಾಲೇಜು ತರಗತಿಗಳು ಪ್ರತಿವರ್ಷ ಜುಲೈನಿಂದ ಆರಂಭವಾಗುತ್ತಿದ್ದವು. ಏಪ್ರಿಲ್-ಮೇಗೆ ಮುಕ್ತಾಯವಾಗುತ್ತಿದ್ದವು. ಉನ್ನತ ಶಿಕ್ಷಣ ಇಲಾಖೆ ಸೂಕ್ತ ಸಿದ್ಧತೆ ಮಾಡಿಕೊಳ್ಳದೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅವಸರದಲ್ಲಿ ಜಾರಿಗೆ ತಂದ ಪರಿಣಾಮ ಶೈಕ್ಷಣಿಕ ಅವಧಿಗಳು ಏರುಪೇರಾಗಿವೆ.

‘ಎನ್‌ಇಪಿ ಜಾರಿ ನಂತರ ಮೊದಲ ಬಾರಿಗೆ ಸೆಪ್ಟೆಂಬರ್ ಅಂತ್ಯದಲ್ಲಿ ಪ್ರಥಮ ವರ್ಷದ ತರಗತಿಗಳು ಆರಂಭವಾಗಿದ್ದು, ಜನವರಿ ಅಂತ್ಯಕ್ಕೆ ಮುಕ್ತಾಯವಾಗಲಿವೆ.

ಅಂಕಿ-ಅಂಶ

430 ರಾಜ್ಯದ ಪದವಿ ಕಾಲೇಜುಗಳು

3.5ಲಕ್ಷ ಪದವಿ ಕಾಲೇಜು ವಿದ್ಯಾರ್ಥಿಗಳು

6,500 ಪ್ರಸ್ತುತ ಇರುವ ಕಾಯಂ ಅಧ್ಯಾಪಕರು

9,461 ಅತಿಥಿ ಉಪನ್ಯಾಸಕರು

ತೃತೀಯ ಹಾಗೂ ಐದನೇ ಸೆಮಿಸ್ಟರ್‌ಗಳು ಈಗಷ್ಟೇ ಆರಂಭವಾಗಿವೆ. ಶೇ 80ರಷ್ಟು ತರಗತಿಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿವೆ. ಸುತ್ತೋಲೆಯಿಂದ ವಿದ್ಯಾರ್ಥಿಗಳ ಕಲಿಕೆಗೂ ಹಿನ್ನಡೆಯಾಗಲಿದೆ’ ಎನ್ನುತ್ತಾರೆ ಅತಿಥಿ ಉಪನ್ಯಾಸಕ ಎಸ್.ಕೆ.ರಮೇಶ್.

ಪರೀಕ್ಷಾ ಕೆಲಸ ಐದು ದಿನಕ್ಕೆ ಸೀಮಿತ: ಅತಿಥಿ ಉಪನ್ಯಾಸಕರಿಗೆ ಪ್ರತಿ ಸೆಮಿಸ್ಟರ್‌ಗೆ ಐದು ದಿನಗಳು ಪರೀಕ್ಷಾ ಕೆಲಸಕ್ಕೆ ಹಾಜರಾಗಲು ಅವಕಾಶ ನೀಡಲಾಗಿದೆ. ಒಂದು ಸೆಮಿಸ್ಟರ್‌ನ ಪರೀಕ್ಷಾ ಕೆಲಸ, ಮೌಲ್ಯಮಾಪನಕ್ಕೆ ಹೋದರೆ ಇನ್ನೊಂದು ಸೆಮಿಸ್ಟರ್‌ನ ತರಗತಿಗಳಿಗೆ ಅಡ್ಡಿಯಾಗುತ್ತಿದೆ ಎನ್ನುವುದು ವಿದ್ಯಾರ್ಥಿಗಳ ಅಳಲು.

ಅನಂತ್–ರಾಧಿಕಾ ನಿಶ್ಚಿತಾರ್ಥ



ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ (ಪಿಟಿಐ ಚಿತ್ರ)

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರ ಕಿರಿಯ ಪುತ್ರ ಅನಂತ್ ಅಂಬಾನಿ ಮತ್ತು ಉದ್ಯಮಿ ವಿರೇನ್ ಮರ್ಚೆಂಟ್ ಅವರ ಪುತ್ರಿ ರಾಧಿಕಾ ಮರ್ಚೆಂಟ್ ನಿಶ್ಚಿತಾರ್ಥ ಗುರುವಾರ ನಡೆಯಿತು.

ರಾಧಿಕಾ ಮತ್ತು ಅನಂತ್ ಅವರ ನಿಶ್ಚಿತಾರ್ಥವು ರಾಜಸ್ಥಾನದ ನಾಥದ್ವಾರದ ಶ್ರೀನಾಥಜಿ ದೇವಸ್ಥಾನದಲ್ಲಿ ನಡೆದಿದೆ. ಕುಟುಂಬದ ಸದಸ್ಯರು ಮತ್ತು ಸ್ನೇಹಿತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮದುವೆ ಯಾವಾಗ ಎಂಬುದನ್ನು ಕುಟುಂಬಗಳು ತಿಳಿಸಿಲ್ಲ.

ಚುನಾವಣಾ ಟ್ರಸ್ಟ್‌ನಿಂದ ದೇಣಿಗೆ ಎಎಪಿಗಿಂತ ಕಾಂಗ್ರೆಸ್‌ಗೆ ಕಡಿಮೆ

ನವದೆಹಲಿ (ಪಿಟಿಐ): ಚುನಾವಣಾ ಟ್ರಸ್ಟ್‌ಗಳ ಮೂಲಕ 2021–22ನೇ ಸಾಲಿನಲ್ಲಿ ರಾಜಕೀಯ ಪಕ್ಷಗಳಿಗೆ ನೀಡಲಾದ ದೇಣಿಗೆಯಲ್ಲಿ ಬಿಜೆಪಿಗೆ ಸಿಂಹಪಾಲು ದೊರೆತಿದೆ. ಇದೇ ಅವಧಿಯಲ್ಲಿ ಟಿಆರ್‌ಎಸ್, ಎಸ್‌ಪಿ, ಎಎಪಿ ಮತ್ತು ವೈಎಸ್‌ಆರ್ ಕಾಂಗ್ರೆಸ್‌ಗೆ ಚುನಾವಣಾ ಟ್ರಸ್ಟ್‌ಗಳ ಮೂಲಕ ದೊರೆತ ದೇಣಿಗೆಗಿಂತ ಕಡಿಮೆ ದೇಣಿಗೆ ಕಾಂಗ್ರೆಸ್‌ಗೆ ದೊರೆತಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಬಿಡುಗಡೆ ಮಾಡಿರುವ ರಾಜಕೀಯ ಪಕ್ಷಗಳ ದೇಣಿಗೆ ವರದಿಯಲ್ಲಿ ಈ ಮಾಹಿತಿ ಇದೆ. ಕಾರ್ಪೊರೇಟ್ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ದೇಣಿಗೆ ಪಡೆದು ರಾಜಕೀಯ ಪಕ್ಷಗಳಿಗೆ ನೀಡುವ ವ್ಯವಸ್ಥೆಯೇ ಚುನಾವಣಾ ಟ್ರಸ್ಟ್. 2021–22ರಲ್ಲಿ ಚುನಾವಣಾ ಟ್ರಸ್ಟ್ ಮೂಲಕ ಒಟ್ಟು ₹ 487.09 ಕೋಟಿ ದೇಣಿಗೆ ಸಂಗ್ರಹವಾಗಿದೆ. ಇದರಲ್ಲಿ ಬಿಜೆಪಿಗೆ ₹351.50 ಕೋಟಿ (ಶೇ72.17) ದೇಣಿಗೆ ಸಂದಾಯವಾಗಿದೆ.

ಟಿಆರ್‌ಎಸ್‌ಗೆ ₹ 40 ಕೋಟಿ, ಎಸ್‌ಪಿಗೆ ₹27 ಕೋಟಿ, ಎಎಪಿಗೆ ₹21.12 ಕೋಟಿ ಮತ್ತು ವೈಎಸ್‌ಆರ್ ಕಾಂಗ್ರೆಸ್‌ಗೆ ₹20 ಕೋಟಿ ದೇಣಿಗೆ ದೊರೆತಿದೆ. ಕಾಂಗ್ರೆಸ್‌ಗೆ ₹18.44 ಕೋಟಿ ದೇಣಿಗೆ ದೊರೆತಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಒಪಿಎಸ್ ಮರು ಜಾರಿ ಇಲ್ಲ'

ಬೆಳಗಾವಿ: ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೊಳಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಬಿಜೆಪಿಯ ಸಾಬಣ್ಣ ತಳವಾರ, ಪ್ರತಾಪಸಿಂಹ ನಾಯಕ, ಶಶೀಲ್ ಜಿ. ನಮೋಶಿ ಮತ್ತು ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಗುರುವಾರ ಮುಖ್ಯಮಂತ್ರಿಯವರ ಪರವಾಗಿ ಉತ್ತರ ನೀಡಿದ ಅವರು, 'ಪುನಃ ಒಪಿಎಸ್ ಜಾರಿಗೊಳಿಸುವ ಯಾವ ಯೋಜನೆಯೂ ಇಲ್ಲ. ಆದರೆ, ನೌಕರರ ಬೇಡಿಕೆ ಕುರಿತು ಸರ್ಕಾರದ ಆರ್ಥಿಕ ಪರಿಸ್ಥಿತಿ ಆಧಾರದಲ್ಲಿ ತೀರ್ಮಾನಕ್ಕೆ ಬರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಅದನ್ನಷ್ಟೇ ಈಗ ಹೇಳಬಹುದು' ಎಂದರು.

ನೌಕರರ ಬೇಡಿಕೆಯನ್ನು ಬೆಂಬಲಿಸಿ ಮಾತನಾಡಿದ ಬಿಜೆಪಿಯ ಸಾಬಣ್ಣ ತಳವಾರ, ಎಸ್.ವಿ. ಸಂಕನೂರ, ಆಯನೂರು ಮಂಜುನಾಥ, ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ, ಮಂಜುನಾಥ ಭಂಡಾರಿ, ಜೆಡಿಎಸ್‌ನ ಮರಿತಿಬ್ಬೇಗೌಡ ಸೇರಿದಂತೆ ಹಲವರು, ಪುನಃ ಒಪಿಎಸ್ ಜಾರಿಗೊಳಿಸುವಂತೆ ಆಗ್ರಹಿಸಿದರು.

'2010ರಲ್ಲಿ ಹೊಸ ಪಿಂಚಣಿ ಯೋಜನೆಜಾರಿಗೆಬಂತು.ಆದರೆ,2006 ರಿಂದಲೇ ಪೂರ್ವಾನ್ವಯಗೊಳಿಸಿ ಜಾರಿಗೊಳಿಸಲಾಗಿದೆ. ಇದರಿಂದ ನೌಕರರಿಗೆ ಅನ್ಯಾಯವಾಗಿದೆ' ಎಂದು ಆಯನೂರು ಮಂಜುನಾಥ ದೂರಿದರು.

ಇದನ್ನು ಒಪ್ಪದ ಮಾಧುಸ್ವಾಮಿ, 'ಸರ್ಕಾರಿ ನೌಕರರ ವೇತನ ಪಾವತಿಗೆ ವರ್ಷಕ್ಕೆ ₹ 80,000 ಕೋಟಿ ವೆಚ್ಚವಾಗುತ್ತಿದೆ. ₹ 24,000 ಕೋಟಿ ಪಿಂಚಣಿ ಪಾವತಿಗೆ ಬೇಕಿದೆ. ನೌಕರರು ನೇಮಕಾತಿ ಪತ್ರವನ್ನು ಒಪ್ಪಿ ಉದ್ಯೋಗಕ್ಕೆ ಬಂದಿರುತ್ತಾರೆ. ನಂತರ ಷರತ್ತು ವಿಧಿಸುವುದು ಸರಿಯಲ್ಲ' ಎಂದರು.

ಆಯನೂರು ಮಂಜುನಾಥ, ಎಸ್.ವಿ. ಸಂಕನೂರ ಮತ್ತು ಮರಿತಿಬ್ಬೇಗೌಡ ಸರ್ಕಾರದ ಉತ್ತರವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು.

ಬಿಜೆಪಿಗೆ ಸೇರುತ್ತಾರಾ ಸಂಸದೆ ಸುಮಲತಾ? • ಚರ್ಚೆಗೆ ಗ್ರಾಸವಾದ ಬೆಳವಣಿಗೆ

ಬಿಜೆಪಿ ಫ್ಲೆಕ್ಸ್‌ಗಳಲ್ಲಿ ಪಕ್ಷೇತರ ಸಂಸದೆ ಚಿತ್ರ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಮಂಡ್ಯಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಕೇಸರಿ ಬಾವುಟ, ಫ್ಲೆಕ್ಸ್, ರಾರಾಜಿಸುತ್ತಿವೆ. ಫ್ಲೆಕ್ಸ್‌ಗಳಲ್ಲಿ ಪಕ್ಷೇತರ ಸಂಸದೆ ಸುಮಲತಾ ಭಾವಚಿತ್ರವಿದ್ದು, ಅವರು ಬಿಜೆಪಿ ಸೇರುತ್ತಾರೆ ಎಂಬ ಚರ್ಚೆಗೆ ಗ್ರಾಸವಾಗಿದೆ.

ಅಮಿತ್ ಶಾ ಅವರು ಶುಕ್ರವಾರ (ಡಿ.30) ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಆವರಣದಲ್ಲಿ ಮೆಗಾ ಡೇರಿಗೆ ಚಾಲನೆ ನೀಡುವರು. ನಂತರ ನಗರದಲ್ಲಿ ಬಿಜೆಪಿ ಜನಸಂಪರ್ಕ ಯಾತ್ರೆಯಲ್ಲಿ ಭಾಗವಹಿಸುವರು. ಹೀಗಾಗಿ, ಫ್ಲೆಕ್ಸ್ ಅಳವಡಿಸಲಾಗಿದೆ.

ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಮುಖಂಡ ಸಚ್ಚಿದಾನಂದ ಅವರು ಅಳವಡಿಸಿರುವ ಬಹುತೇಕ ಫ್ಲೆಕ್ಸ್‌ಗಳಲ್ಲಿ ಸುಮಲತಾ ಭಾವಚಿತ್ರಗಳಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಲ್ಲಿದ್ದ ಸಚ್ಚಿದಾನಂದ ಸುಮಲತಾ ಪರ ಕೆಲಸ ಮಾಡಿದ್ದರು. ಅದೇ ಕಾರಣಕ್ಕಾಗಿ ಅವರನ್ನು ಕೆಪಿಸಿಸಿ ಪಕ್ಷದಿಂದ ಉಚ್ಚಾಟಿಸಿತ್ತು. ನಂತರ ಅವರು ಬಿಜೆಪಿಗೆ ಸೇರಿದ್ದರು.

'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಚ್ಚಿದಾನಂದ ಯಾವುದೇ ಪಕ್ಷದಿಂದ ಸ್ಪರ್ಧಿಸಿದರೂ ಬೆಂಬಲಿಸುವೆ' ಎಂದು ಸುಮಲತಾ ಘೋಷಿಸಿದ್ದರು. ಈ ಕಾರಣಕ್ಕೆ ಅಮಿತ್ ಶಾ ಅವರಿಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳಲ್ಲಿ ಸುಮಲತಾ ಭಾವಚಿತ್ರ ಹಾಕಿಸಿದ್ದಾರೆ. ಈ ಬಗ್ಗೆ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಿಸಿದ್ದಾರೆ. ಅವರು ಬಿಜೆಪಿ ಸೇರುತ್ತಾರೆ ಎಂಬ ಸುದ್ದಿಗಳೂ ಹರಿದಾಡುತ್ತಿವೆ.

'ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಹಾಕದೇ ಸುಮಲತಾ ಅವರನ್ನು ಬಿಜೆಪಿ ಬೆಂಬಲಿಸಿತ್ತು. ಪ್ರಧಾನಿ ಕೂಡ ಅವರ ಪರ ಮತ ಕೇಳಿದ್ದರು. ಅವರ ಮೇಲಿನ ಅಭಿಮಾನಕ್ಕಾಗಿ ಫ್ಲೆಕ್ಸ್‌ಗಳಲ್ಲಿ ಭಾವಚಿತ್ರ ಹಾಕಿಸಿದ್ದೇನೆ' ಎಂದು ಸಚ್ಚಿದಾನಂದ ಹೇಳಿದರು. ಸಂಸದೆ ಸುಮಲತಾ ಅವರು ಈ ಕುರಿತ ಸಂಪರ್ಕಕ್ಕೆ ಸಿಗಲಿಲ್ಲ.



ಅಮಿತ್ ಶಾ ಅವರಿಗೆ ಸ್ವಾಗತಿಸುವ ಫ್ಲೆಕ್ಸ್‌ಗಳಲ್ಲಿ ಸಂಸದೆ ಅವರ ಭಾವಚಿತ್ರ ಇರುವುದು

ಸಂಸದೆ ಸುಮಲತಾ ಬಿಜೆಪಿ ಸೇರುವುದು ಅವರ ವೈಯಕ್ತಿಕ ವಿಚಾರ. ಸೇರ್ಪಡೆ ವಿಷಯವಾಗಿ ನಮ್ಮೊಂದಿಗೆ ಮಾತುಕತೆ ನಡೆದಿಲ್ಲ.
ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಅಮಿತ್ ಶಾ ಮಂಡ್ಯಕ್ಕೆ ಬಂದು ಏನು ಮಾಡುತ್ತಾರೆ? ಯಾವ ಬಾಂಬ್ ಇಟ್ಟುಕೊಂಡು ಬಂದು 'ಭದ್ರಕೋಟೆ' ಛಿದ್ರ ಮಾಡುತ್ತಾರೆ ಎಂದು ಕಾದು ನೋಡಬೇಕಿದೆ.
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಿಪಿಕೆಗೆ ದ.ರಾ.ಬೇಂದ್ರೆ ಕಾವ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘದಿಂದ ನೀಡುವ 'ದ.ರಾ. ಬೇಂದ್ರೆ ಕಾವ್ಯ ಪ್ರಶಸ್ತಿ'ಗೆ ಸಾಹಿತಿ, ಮೈಸೂರಿನ ಡಾ.ಸಿ.ಪಿ. ಕೃಷ್ಣಕುಮಾರ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 25,000 ನಗದು ಹಾಗೂ ಫಲಕ ಒಳಗೊಂಡಿದೆ.

ಕಾವ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ದ್ವೈವಾರ್ಷಿಕವಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಡಿ.31ರಂದು ಪ್ರಶಸ್ತಿ ಪ್ರದಾನ ಸಮಾರಂಭ ಮಾಡಲಾಗುವುದು ಎಂದು ಕರ್ನಾಟಕ ಸಂಘದ ಅಧ್ಯಕ್ಷ ಎಂ.ಎನ್. ಸುಂದರರಾಜ್ ಗುರುವಾರ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪುನರ್ವಸತಿ ಕಲ್ಪಿತ ಸ್ತ್ರೀಯರ ಮಕ್ಕಳ ಮದುವೆ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಕುವೆಂಪು ಜನ್ಮದಿನ ನಿಮಿತ್ತ ಪಟ್ಟಣದಲ್ಲಿ ಗುರುವಾರ ಸರಳ ಸಾಮೂಹಿಕ ವಿವಾಹದಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿಯರ ನಾಲ್ವರು ಹೆಣ್ಣು ಮಕ್ಕಳು, ಮೂವರು ಗಂಡು ಮಕ್ಕಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು.

ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಮತ್ತು ಜ್ಯೋತಿಬಸು ಸ್ಮಾರಕ ಸಾಮಾಜಿಕ ಶಿಕ್ಷಣ ದತ್ತಿಯಿಂದ ಆರನೇ ವಾರ್ಷಿಕದ ಸಾಮೂಹಿಕ ವಿವಾಹ ಕಾರ್ಯಕ್ರಮ ಇದಾಗಿತ್ತು. ಸಂಡೂರಿನ ಪ್ರಭುಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಯಾವುದೇ ಮಂತ್ರ ಘೋಷವಿಲ್ಲದೆ ಮಾಂಗಲ್ಯ ಧಾರಣೆ ನಡೆಯಿತು. ಅಲ್ಲಿ ಸೇರಿದವರು ವಧು–ವರರಿಗೆ ಪುಷ್ಪವೃಷ್ಟಿ ಮಾಡಿ ಹರಸಿದರು.



ಹಗರಿಬೊಮ್ಮನಹಳ್ಳಿಯಲ್ಲಿ ಗುರುವಾರ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿಯರ ಮಕ್ಕಳು ದಾಂಪತ್ಯ ಬದುಕಿಗೆ ಕಾಲಿಟ್ಟರು

ಸ್ವಾಮೀಜಿ ಮಾತನಾಡಿ, 'ಬಸವಣ್ಣ, ಕುವೆಂಪು ಅವರ ಆಶಯಗಳು ಈಡೇರಲು ಈ ರೀತಿ ಸರಳ ವಿವಾಹಗಳು ನಡೆಯಬೇಕು. ಪುನರ್ವಸತಿ ಕಲ್ಪಿತ ದೇವದಾಸಿಯರ ಬದುಕಿಗೆ ಆತ್ಮವಿಶ್ವಾಸ ತುಂಬುವ ಕಾರ್ಯಕ್ರಮ ಇದಾಗಿದೆ' ಎಂದು ಶ್ಲಾಘಿಸಿದರು.

ದೇವದಾಸಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಮಾಳಮ್ಮ, ಗೌರವ ಅಧ್ಯಕ್ಷ ಯು.ಬಸವರಾಜ, ಸಾಹಿತಿ ಹುರಕಡ್ಲಿ ಶಿವಕುಮಾರ್, ಮುಖಂಡರಾದ ಆರ್.ಎಸ್. ಬಸವರಾಜ, ಎಸ್.ಜಗನ್ನಾಥ್, ಹನ್ಸಿ ದೇವರಾಜ್, ಟಿ.ವೆಂಕೋಬಪ್ಪ, ಚಾಂದ್‌ಬೀ, ಮೈಲಕ್ಕ ಇದ್ದರು.

ಸಾರಿಗೆ ನೌಕರರ ಮುಷ್ಕರ 6 ತಿಂಗಳು ನಿರ್ಬಂಧ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರು ಆರು ತಿಂಗಳು ಮುಷ್ಕರ, ಪ್ರತಿಭಟನೆಗಳನ್ನು ನಡೆಸದಂತೆ ನಿರ್ಬಂಧ ವಿಧಿಸಿ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಕರ್ನಾಟಕ ಅಗತ್ಯ ಸೇವಾ ನಿರ್ವಹಣೆ ಕಾಯ್ದೆ -2013ರ ಅನ್ವಯ ಆದೇಶ ಹೊರಡಿಸಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಜ.1ರಿಂದ ಜೂನ್ 30ರವರೆಗೂ ಪ್ರತಿಭಟನೆಗಳನ್ನು ನಡೆಸದಂತೆ ಸೂಚಿಸಿದೆ.

ರಾಜ್ಯ ಸಾರಿಗೆ ನೌಕರರಿಗೆ ಸಮಾನ ವೇತನ, ವಜಾಗೊಂಡ ನೌಕರರ ಮರುನೇಮಕ, ಪೊಲೀಸ್ ಪ್ರಕರಣ ಹಿಂಪಡೆಯುವುದು, ಅವೈಜ್ಞಾನಿಕ ವೇತನ ಪರಿಷ್ಕರಣಾ ಪದ್ಧತಿ ರದ್ದು ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಬೆಳಗಾವಿಯ ಸುವರ್ಣಸೌಧದ ಮುಂದೆ ಡಿ.19ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಮುಷ್ಕರ ಮುಂದುವರಿದರೆ ಚುನಾವಣೆ ಸಮಯದಲ್ಲಿ ಸರ್ಕಾರಕ್ಕೆ ತಲೆ ಬಿಸಿಯಾಗಬಹುದು ಎಂಬ ಕಾರಣಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ನೌಕರರು ಹಾಗೂ ನೌಕರರ ವಿವಿಧ ಸಂಘಟನೆಗಳ ಮುಖಂಡರು ದೂರಿದ್ದಾರೆ.

ಬಂಧಿತ ತಾಯಿ ನೆನೆದು ಕಣ್ಣೀರು

'ಮುತ್ತು' ಕಟ್ಟಿಸಿಕೊಂಡಿದ್ದ ಯುವತಿಗೆ 'ಸಖಿ' ಸಾಂತ್ವನ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕಾಯಿಲೆ ಗುಣವಾಗಲಿದೆ ಎನ್ನುವ ನಂಬಿಕೆಗೆ ಕಟ್ಟುಬಿದ್ದ ಯುವತಿ ದೇವದಾಸಿ ಪದ್ಧತಿಯ ಭಾಗವಾಗಿ 'ಮುತ್ತು' ಕಟ್ಟಿಸಿಕೊಂಡಿರುವುದಕ್ಕೆ ಪರಿತಪಿಸುತ್ತಿದ್ದು, ಪ್ರಕರಣದಲ್ಲಿ ಬಂಧಿತಳಾಗಿರುವ ತನ್ನ ತಾಯಿಯನ್ನು ನೆನೆದು ಕಣ್ಣೀರು ಹಾಕುತ್ತಿದ್ದಾಳೆ.

ಕೊಪ್ಪಳ ತಾಲ್ಲೂಕಿನ 21 ವರ್ಷದ ಯುವತಿಗೆ ಅನಾರೋಗ್ಯಕ್ಕಾಗಿ ಚಿಕಿತ್ಸೆ ಕೊಡಿಸದೇ ದೇವದಾಸಿ ಪಟ್ಟ ಕಟ್ಟಿದ್ದ ಆರೋಪದಡಿ ಆಕೆಯ ಪೋಷಕರು ಮತ್ತು ಸಹೋದರಿಯನ್ನು ಪೊಲೀಸರು ಬಂಧಿಸಿದ್ದಾರೆ. ಪರಾರಿಯಾಗಿರುವ ತಂಗಿ ಗಂಡನಿಗೆ ಶೋಧ ಮುಂದುವರಿದಿದೆ.

ಯುವತಿಯು ಮೂರು ದಿನಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯ 'ಸಖಿ' ಒನ್ ಸ್ಟಾಪ್ ಕೇಂದ್ರದಲ್ಲಿದ್ದು ಮೊದಲ ದಿನ ಯಾರೊಂದಿಗೂ ಮಾತನಾಡದೇ, ಏನಾಗಿದೆ ಎಂದು ಅರ್ಥ ಮಾಡಿಕೊಳ್ಳಲಾಗದೆ ಆಘಾತಕ್ಕೆ ಒಳಗಾಗಿದ್ದಳು.

ದಾರಿಯುದ್ದಕ್ಕೂ ಹೋಗುವವರು, ಬರುವವರು ನೋಡಿಕೊಂಡು 'ಅಮ್ಮ ಬಂದಳು' ಎಂದು ಕಣ್ಣೀರು ಸುರಿಸುತ್ತಿದ್ದಳು. ಯುವತಿ ಮಾನಸಿಕವಾಗಿ ನೊಂದಿದ್ದು, ಸಹಜ ಸ್ಥಿತಿಗೆ ಬರುವಂತೆ ಮಾಡಲು ಕೇಂದ್ರದ ಸಿಬ್ಬಂದಿ ಪ್ರಯತ್ನ ಮಾಡುತ್ತಿದ್ದಾರೆ. ಇದರ ಭಾಗವಾಗಿ ಆ ಯುವತಿಗೆ ಬುದ್ಧನ ಜೀವನ, ಸಾಧಕರ ಜೀವನಗಾಥೆಗಳನ್ನು ಹೇಳುತ್ತಿದ್ದಾರೆ. ಸಿಬ್ಬಂದಿ, ಮಹಿಳೆಯರ ಜೊತೆ ಬೆರೆತು ಕೆಲಹೊತ್ತು ಮಾತನಾಡುವ ಯುವತಿ, ಒಬ್ಬಳೇ ಇದ್ದಾಗ ಅಮ್ಮನನ್ನು ನೆನೆದು ಕಣ್ಣೀರು ಸುರಿಸುತ್ತಿದ್ದಾಳೆ.

'ಆಘಾತದಿಂದ ಯುವತಿಯನ್ನು ಹೊರತರಲು ಪ್ರಯತ್ನಿಸಲಾಗುತ್ತಿದೆ. ಮೊದಲ ದಿನಕ್ಕೆ ಹೋಲಿಸಿದರೆ ಕೇಂದ್ರದ ಸಿಬ್ಬಂದಿ ಜೊತೆ ನಿಧಾನವಾಗಿ ಬೆರೆಯುತ್ತಿದ್ದಾಳೆ' ಎಂದು ಸಖಿ ಕೇಂದ್ರದ ಅಧಿಕಾರಿ ಯಮುನಾ ಬೆಸ್ತರ 'ಪ್ರಜಾವಾಣಿ'ಗೆ ತಿಳಿಸಿದರು.

ಯುವತಿಗೆ ಆಪ್ತ ಸಮಾಲೋಚನೆ ಮಾಡಲಾಗುತ್ತಿದೆ. ಆಘಾತದಿಂದ ಹೊರಬರಲು ಸಿಬ್ಬಂದಿ ಆಕೆಯ ಜೊತೆಗೆ ಇರುತ್ತಾರೆ.
ಪದ್ಮಾವತಿ. ಜಿ ಉಪನಿರ್ದೇಶಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ



ಶಿವಮೊಗ್ಗ ಜಿಲ್ಲಾಡಳಿತ ಮತ್ತು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನವು ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕುವೆಂಪು 118ನೇ ಜನ್ಮದಿನೋತ್ಸವ ಸಮಾರಂಭದಲ್ಲಿ ತಮಿಳು ಕವಿ ವಿ. ಅಣ್ಣಾಮಲೈ (ಇಮಾಯಮ್) ಅವರಿಗೆ 2022ನೇ ಸಾಲಿನ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಲಾಯಿತು. ಪುರಸ್ಕಾರ ₹ 5 ಲಕ್ಷ ಹಾಗೂ ಬೆಳ್ಳಿ ಫಲಕ ಒಳಗೊಂಡಿದೆ. ಕುವೆಂಪು ವಿ.ವಿ. ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್, ಸಾಹಿತಿಗಳಾದ ಕಮಲಾ ಹಂಪನಾ, ಹಂಪಾ ನಾಗರಾಜಯ್ಯ, ಜಿಲ್ಲಾಧಿಕಾರಿ ಡಾ.ಆರ್.ಸೆಲ್ವಮಣಿ, ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳು ಪ್ರಕಾಶ್ ಇದ್ದರು.

'ಪಠಾಣ್': ಚಿತ್ರ ಮತ್ತು ಹಾಡಿನಲ್ಲಿ ಬದಲಾವಣೆಗೆ ನಿರ್ದೇಶನ

ಮುಂಬೈ(ಪಿಟಿಐ): ಬಾಲಿವುಡ್ ನಟ ಶಾರುಖ್ ಖಾನ್ ಹಾಗೂ ನಟಿ ದೀಪಿಕಾ ಪಡುಕೋಣೆ ಅಭಿನಯದ 'ಪಠಾಣ್' ಚಿತ್ರದ ಹಾಡೊಂದು ಇತ್ತೀಚೆಗಷ್ಟೇ ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಇದರ ಬೆನ್ನಲ್ಲೇ ಸಿನಿಮಾ ಹಾಗೂ ಹಾಡಿನಲ್ಲಿ ಬದಲಾವಣೆಗಳನ್ನು ಮಾಡಲು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಚಿತ್ರತಂಡಕ್ಕೆ ನಿರ್ದೇಶಿಸಿದೆ.

'ಚಿತ್ರಮಂದಿರಗಳಲ್ಲಿ ಬಿಡುಗಡೆಗೆ ಮುನ್ನ, ಮಂಡಳಿಯ ಮಾರ್ಗಸೂಚಿಗಳನ್ನು ಅನುಸರಿಸಿದ 'ಪಠಾಣ್' ಚಿತ್ರದ ಪರಿಷ್ಕೃತ ಪ್ರತಿಯನ್ನು ಸಲ್ಲಿಸಲು ಚಿತ್ರದ ನಿರ್ಮಾಣ ಸಂಸ್ಥೆಯಶ್ ರಾಜ್ ಫಿಲಂಸ್‌ಗೆ ಸಿಬಿಎಫ್‌ಸಿ ಸೂಚಿಸಿದೆ' ಎಂದು ಮಂಡಳಿಯ ಅಧ್ಯಕ್ಷ ಪ್ರಸೂನ್ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಚಿತ್ರತಂಡಕ್ಕೆ ಸೂಚಿಸಿರುವ ಬದಲಾವಣೆಗಳ ಬಗ್ಗೆ ವಿಸ್ತೃತ ಮಾಹಿತಿಯನ್ನು ಅವರು ಇಲ್ಲಿ ಉಲ್ಲೇಖಿಸಿಲ್ಲ. 'ಸಿನಿಮಾ ನಿರ್ಮಾಣ ಮಾಡುವವರ ಸೃಜನಶೀಲತೆ ಮತ್ತು ಪ್ರೇಕ್ಷಕರ ಭಾವನೆಗಳ ನಡುವೆ ಸಮತೋಲನ ಸಾಧಿಸುವುದು ಮತ್ತು ಅದಕ್ಕೆ ಅನುಗುಣವಾಗಿ ಪರಿಹಾರ ಕಂಡುಕೊಳ್ಳುವುದು ಸಿಬಿಎಫ್‌ಸಿ ಗುರಿಯಾಗಿದೆ' ಎಂದಿದ್ದಾರೆ ಜೋಶಿ.



ಪ್ರಸೂನ್

ಡಿ.12ರಂದು ಬಿಡುಗಡೆಯಾಗಿದ್ದ ಚಿತ್ರದ 'ಬೇಷರಮ್ ರಂಗ್' ಹಾಡು ಸಾಕಷ್ಟು ವಿವಾದ ಹುಟ್ಟುಹಾಕಿತ್ತು. ಹಾಡಿನಲ್ಲಿ ಕೇಸರಿ ಬಣ್ಣದ ಒಳಉಡುಪು ಧರಿಸಿದ್ದು ಪ್ರತಿಭಟನೆಗಳಿಗೂ ಕಾರಣವಾಗಿತ್ತು. ಚಿತ್ರವನ್ನು ಬ್ಯಾನ್ ಮಾಡುವ ಕೂಗೂ ಇದೇ ಸಂದರ್ಭದಲ್ಲಿ ಎದ್ದಿತ್ತು. ಸಿನಿಮಾ ಜ.25ರಂದು ಬಿಡುಗಡೆಯಾಗಲಿದೆ.

'ಪರಿಹಾರ: ಅನುದಾನದ ಕೊರತೆಯಿಲ್ಲ'

ಬೆಳಗಾವಿ: ನೀರಾವರಿ ಯೋಜನೆಗಳಿಗೆ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಿಸಲು ಅನುದಾನದ ಕೊರತೆ ಇಲ್ಲ. ಇಲಾಖೆಯ ಅಧೀನದ ಎಲ್ಲ ನಿಗಮಗಳಲ್ಲೂ ಇದಕ್ಕಾಗಿ ವಿಶೇಷ ನಿಧಿ ಕಾಯ್ದಿರಿಸಲಾಗಿದೆ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಸೂರಜ್ ರೇವಣ್ಣ ಪ್ರಶ್ನೆಗೆ ಗುರುವಾರ ಉತ್ತರಿಸಿದ ಅವರು, 'ಎಲ್ಲ ನಿಗಮಗಳಲ್ಲೂ ಭೂಸ್ವಾಧೀನ ಪ್ರಕರಣಗಳ ಪರಿಹಾರ ವಿತರಣೆಗೆ ತಲಾ ₹ 100 ಕೋಟಿ ಅನುದಾನ ಲಭ್ಯವಿದೆ. ಆ ಹಣ ಖಾಲಿಯಾದ ತಕ್ಷಣ ಪುನಃ ₹ 100 ಕೋಟಿ ಒದಗಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ' ಎಂದರು.

ಹಾಸನ ಜಿಲ್ಲೆಯಲ್ಲಿ ಹೇಮಾವತಿ ಯೋಜನೆ ವ್ಯಾಪ್ತಿಯ ಏತ ನೀರಾವರಿ ಯೋಜನೆಗಳ ಕಾಮಗಾರಿ ವಿಳಂಬವಾಗುತ್ತಿದೆ. ಈ ಯೋಜನೆಗೆ ಜಮೀನು ಒದಗಿಸಿರುವ ರೈತರಿಗೆ ಅನುದಾನದ ಕೊರತೆಯ ನೆಪವೊಡ್ಡಿ ಪರಿಹಾರ ವಿತರಣೆ ಮಾಡಿಲ್ಲ ಎಂದು ಸೂರಜ್ ದೂರಿದರು.

ಸಂಕ್ಷಿಪ್ತ ಸುದ್ದಿ

ಸಮಾಧಿ ನಾಶ ವ್ಯಕ್ತಿ ಬಂಧನ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಕೊಂಡನಾಯಕನಹಳ್ಳಿಯಲ್ಲಿ ಮುಸ್ಲಿಂ ಸಮಾಜದ ಖಬರಸ್ತಾನದ ಸಮಾಧಿ ನಾಶಪಡಿಸಿದ ಘಟನೆಗೆ ಸಂಬಂಧಿಸಿ ನಗರದ ನಿವಾಸಿ ಎಸ್.ಪಿ. ಅಮರೇಶ್ವರಯ್ಯ ಪರಮೇಶ್ವರಯ್ಯ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಖಬರಸ್ತಾನಕ್ಕೆ ಅಕ್ರಮವಾಗಿ ಪ್ರವೇಶಿಸಿ, ಕೋಮುಸೌಹಾರ್ದಕ್ಕೆ ಧಕ್ಕೆ ತಂದಿದ್ದಾರೆ' ಎಂಬ ದೂರು ಆಧರಿಸಿ ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಗುರುವಾರ ತಿಳಿಸಿದ್ದಾರೆ.

ಡಿ.25ರಂದು ತಡರಾತ್ರಿ ಜೆಸಿಬಿಯಿಂದ ನೂರಕ್ಕೂ ಹೆಚ್ಚು ಸಮಾಧಿ ನೆಲಸಮಗೊಳಿಸಲಾಗಿದೆ ಎಂದು ಮುಸ್ಲಿಂ ಖಬರಸ್ತಾನ (ಸುನ್ನಿ) ಆಡಿಷನಲ್ ಪ್ರಾಪರ್ಟಿ ಆಫ್ ಮಸೀದಿ–ಇ-ಫಿರ್ದೋಸ್ ಅಧ್ಯಕ್ಷ ಮಹಮ್ಮದ್ ಗೌಸ್ ಗ್ರಾಮೀಣ ಠಾಣೆಗೆ ದೂರು ನೀಡಿದ್ದರು.

ಕಾಡುಕೋಣ ದಾಳಿ ಕೃಷಿಕ ಸಾವು

ಕಳಸ: ತಾಲ್ಲೂಕಿನ ತೋಟದೂರು ಗ್ರಾಮ ವ್ಯಾಪ್ತಿಯ ಕುಳಿಹಿತ್ತಲು ಪ್ರದೇಶದಲ್ಲಿ ಕಾಡುಕೋಣ ದಾಳಿ ಮಾಡಿದ್ದು, ಜಯಪುರ ನಿವಾಸಿ ಕೃಷಿಕ ಸೋಮಶೇಖರ್ (45) ಅವರು ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಅಡಿಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಕಾಡುಕೋಣ ಏಕಾಏಕಿ ದಾಳಿ ಮಾಡಿದೆ. ಸೋಮಶೇಖರ್ ಅವರ ಕಿಬ್ಬೊಟ್ಟೆಗೆ ಕಾಡುಕೋಣ ತಿವಿದಿದ್ದರಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇವರು ಅಪೂರ್ವ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷರಾಗಿದ್ದರು.

ಸಿನಿಮಾ ಪುರವಣಿ



ನಂದನವನ

2022ರಲ್ಲಿ ಗಳಿಕೆ ವಿಚಾರದಲ್ಲಿ ಗೆದ್ದ ಸಿನಿಮಾಗಳ ಸಂಖ್ಯೆ ಬೆರಳೆಣಿಕೆಯಷ್ಟಿದ್ದರೂ, ಇವು ಚಂದನವನಕ್ಕೆ ವರ್ಷಪೂರ್ತಿ ತುಂಬಿದ ಕಾವು ಹಿರಿದು. ಕೋವಿಡ್ ಕಾರ್ಮೋಡದಿಂದ ಹೊರಬಂದ ಚಿತ್ರರಂಗಕ್ಕೆ ಇದು ಚೇತೋಹಾರಿ ವರ್ಷ. ಇದೇ ಲವಲವಿಕೆಯಲ್ಲಿ ಮತ್ತಷ್ಟು ಸಿನಿಮಾ ಘಮಲು ಪಸರಿಸಲು ಹೊಸ ವರ್ಷಕ್ಕೆ ಹೆಜ್ಜೆ ಇಡುತ್ತಿದೆ ಸ್ಯಾಂಡಲ್‌ವುಡ್....

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಅಭಿಲಾಷ್ ಪಿ.ಎಸ್.

ಕಳೆದೆರಡು ವರ್ಷದ ಕೋವಿಡ್ ಕಾರ್ಮೋಡ ಸರಿದು ಚಂದನವನ ನಂದನವನವಾದ ವರ್ಷ 2022. ದೇಶವೇ ಸ್ಯಾಂಡಲ್‌ವುಡ್‌ನತ್ತ ನೋಡಿದ ಅವಧಿ ಇದು ಎಂದರೂ ಅತಿಶಯೋಕ್ತಿಯೇನಲ್ಲ! ದಕ್ಷಿಣ ಭಾರತೀಯ ಸಿನಿಮಾಗಳ ಬಗ್ಗೆ ಇದ್ದ ಒಂದು ಉಡಾಫೆಯ ನೋಟವನ್ನು ಬದಲಾಯಿಸಿದ ಶ್ರೇಯಸ್ಸು ಚಂದನವನದ್ದು. ಅದರಲ್ಲೂ ಪ್ಯಾನ್ ಇಂಡಿಯಾ ಸಿನಿಮಾ ಲೋಕದಲ್ಲೊಂದು ಸ್ಥಾನ ಭದ್ರಪಡಿಸಿಕೊಂಡ ವರ್ಷವಿದು. ನಟ ಪುನೀತ್ ರಾಜ್‌ಕುಮಾರ್ ಅಗಲಿಕೆಯ ನೋವಿನ ನಡುವೆಯೂ ಚಂದನವನ, ಅವರ ನೆನಪಿನಲ್ಲೇ ಹಲವು ಸಂಭ್ರಮಗಳನ್ನು ಆಚರಿಸಿ ನಂದನವನವಾಯ್ತು.

ಈ ವರ್ಷದಲ್ಲಿ ಗೆದ್ದ ಸಿನಿಮಾಗಳ ಸಂಖ್ಯೆ ಬೆರಳೆಣಿಕೆಯಷ್ಟೇ ಇದ್ದರೂ, ಅವುಗಳು ಜನರು ಹಾಗೂ ಬಾಕ್ಸ್ ಆಫೀಸ್ ಮೇಲೆ ಬೀರಿದ ಪರಿಣಾಮ ಬೃಹದಾಗಿದೆ. ಇವುಗಳ ಯಶಸ್ಸೇ ಇಡೀ ವರ್ಷ ಚಂದನವನಕ್ಕೆ ಕಾವು ತುಂಬಿತು.

ಫೆ.11ರಂದು ತೆರೆಕಂಡ 'ಲವ್ ಮಾಕ್ಟೇಲ್-2' ತನ್ನ ಹಳೆ ಛಾಪಿನ ನೆರಳಿನಲ್ಲಿ ಓಡಿತು. ವರ್ಷದ ಆರಂಭದಲ್ಲೇ(ಮಾ.17) ಗಳಿಕೆ ವಿಚಾರದಲ್ಲಿ ಪುನೀತ್ ರಾಜ್‌ಕುಮಾರ್ ನಟನೆಯ ಕೊನೆಯ ಕಮರ್ಷಿಯಲ್ ಸಿನಿಮಾ 'ಜೇಮ್ಸ್' ಬರೆದ ದಾಖಲೆ ಚಂದನವನಕ್ಕೆ ಬೂಸ್ಟರ್ ಡೋಸ್ ಆಗಿತ್ತು. ನಂತರದಲ್ಲಿ ತೆರೆಕಂಡ ಯಶ್ ನಟನೆಯ 'ಕೆ.ಜಿ.ಎಫ್. ಚಾಪ್ಟರ್-2' ನಿರೀಕ್ಷೆಯಂತೇ ಬಾಕ್ಸ್ ಆಫೀಸ್‌ನಲ್ಲಿ ದೂಳೆಬ್ಬಿಸಿತು. ಏ.14ರಂದು ತೆರೆಕಂಡ ಈ ಸಿನಿಮಾ ಮೊದಲ ದಿನವೇ ಭಾರತದಲ್ಲಿ ₹134.5 ಕೋಟಿ ಬಾಚಿತು. ವಿಶ್ವದಾದ್ಯಂತ 10 ಸಾವಿರಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡಿದ್ದ ಈ ಸಿನಿಮಾ ಒಟ್ಟಾರೆ ₹1,300 ಕೋಟಿಯವರೆಗೆ ಬಾಚಿತು ಎನ್ನುತ್ತದೆ ಗಾಂಧಿನಗರ. ಇದರಲ್ಲಿ ಉತ್ತರ ಭಾರತದ ಕಲೆಕ್ಷನ್ ₹450 ಕೋಟಿಯವರೆಗಿತ್ತು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು.

ಇದಾದ ಬಳಿಕ ತೆರೆಗೆ ಲಗ್ಗೆ ಇಟ್ಟ(ಜೂನ್ 10) ರಕ್ಷಿತ್ ಶೆಟ್ಟಿ ನಟನೆಯ '777 ಚಾರ್ಲಿ' ಗಳಿಕೆ ವಿಚಾರದಲ್ಲಿ ದೊಡ್ಡ ದಾಖಲೆ ಬರೆಯದೇ ಇದ್ದರೂ, ಜನರ ಮೇಲೆ ಮಾಡಿದ ಪರಿಣಾಮ ಮಾತ್ರ ಕಲೆಕ್ಷನ್ ಎನ್ನುವ ಮಾನದಂಡಕ್ಕಿಂತ ದೊಡ್ಡದಾಗಿತ್ತು. ಈ ಚಿತ್ರ ಗಳಿಸಿದ್ದು ಅಂದಾಜು ₹160 ಕೋಟಿ. ಇದರಲ್ಲಿ ನಿರ್ಮಾಪಕರು ₹110 ಕೋಟಿಯವರೆಗೆ ಲಾಭ ಪಡೆದಿದ್ದಾರೆ. ಜುಲೈ 28ರಂದು ವಿಶ್ವದಾದ್ಯಂತದ 3,200ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ತೆರೆಕಂಡ ಸುದೀಪ್ ನಟನೆಯ 'ವಿಕ್ರಾಂತ್ ರೋಣ' ಸಿನಿಮಾ ಪ್ರಚಾರ, ವಿತರಣೆ ಹಾಗೂ ಮೇಕಿಂಗ್‌ನಿಂದಾಗಿ ಗಳಿಕೆಯಲ್ಲಿ ಗೆದ್ದಿತು. ಕಥೆಯ ವಿಚಾರದಲ್ಲಿ ಜನರು ಈ ಸಿನಿಮಾಗೆ ಅಂಕ ನೀಡಲಿಲ್ಲ. ಈ ಸಿನಿಮಾ ಸುಮಾರು ₹200 ಕೋಟಿಯವರೆಗೆ ಕಲೆಕ್ಷನ್ ಮಾಡಿದೆ ಎನ್ನುವುದು ಗಾಂಧಿನಗರದ ಲೆಕ್ಕಾಚಾರ. ಆ.12ಕ್ಕೆ ಯೋಗರಾಜ್ ಭಟ್ ಅವರು ಆಗಸಕ್ಕೆ ಹಾರಿಸಿದ ಎರಡನೇ ಗಾಳಿಪಟ ಗಳಿಕೆ ವಿಚಾರದಲ್ಲಿ ಕೊಂಚ ಎತ್ತರಕ್ಕೆ ಹಾರಿದರೂ, ಕಥೆಯ ವಿಚಾರದಲ್ಲಿ ಪಲ್ಟಿ ಹೊಡೆದು ವಿಲವಿಲವೆಂದಿತು!

'ಜೇಮ್ಸ್' ಸಿನಿಮಾದಲ್ಲಿ ಪುನೀತ್ ಅವರನ್ನು ಅಭಿಮಾನಿಗಳು ಕೊಂಡಾಡಿದರೂ, ತಮ್ಮ ನೆಚ್ಚಿನ 'ಅಪ್ಪು'ವನ್ನು ಅವರು ಕಣ್ತುಂಬಿಕೊಂಡಿದ್ದು 'ಲಕ್ಕಿಮ್ಯಾನ್' ಸಿನಿಮಾ ಹಾಗೂ 'ಗಂಧದಗುಡಿ' ಡಾಕ್ಯೂಫಿಲಂನಲ್ಲಿ. ಒಮ್ಮೆ ದೇವರಾಗಿ ಮತ್ತೊಮ್ಮೆ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಪುನೀತ್ ಮಗದೊಮ್ಮೆ ತೆರೆಯಲ್ಲಿ ಉಸಿರಾಡಿದರು. 'ಅವತಾರ ಪುರುಷ', 'ಬೈರಾಗಿ', 'ಮಾನ್ಸೂನ್ ರಾಗ', ತೋತಾಪುರಿ', 'ಗುರುಶಿಷ್ಯರು', 'ಬನಾರಸ್', 'ಹೆಡ್‌ಬುಷ್', 'ರೇಮೊ', 'ವಿಜಯಾನಂದ', 'ಧರಣಿ ಮಂಡಲ ಮಧ್ಯದೊಳಗೆ' ಸಿನಿಮಾಗಳು ಬೆಳ್ಳಿತೆರೆಯಲ್ಲಿ ಸದ್ದು ಮಾಡಿದವು. 'ಹೆಡ್‌ಬುಷ್' ಸಿನಿಮಾ ಸುತ್ತ ಹುಟ್ಟಿದ ವಿವಾದವೂ ಕೊಂಚ ಸದ್ದು ಮಾಡಿತು. ಇತ್ತೀಚೆಗೆ ತೆರೆಕಂಡ ನಟ ಶಿವರಾಜ್‌ಕುಮಾರ್ ಅವರ 'ವೇದ' ಸಿನಿಮಾ ಕೂಡಾ ಬಾಕ್ಸ್ ಆಫೀಸ್‌ನಲ್ಲಿ ಕಲೆಕ್ಷನ್ ಏರಿಸಿಕೊಳ್ಳುತ್ತಿದೆ.

ರಾಷ್ಟ್ರಪ್ರಶಸ್ತಿ ವಿಜೇತ ನಟ, ದಿವಂಗತ ಸಂಚಾರಿ ವಿಜಯ್ ನಟನೆಯ ಸಿನಿಮಾ 'ತಲೆದಂಡ' ಹಾಗೂ ಸಾಗರ್ ಪುರಾಣಿಕ್ ನಿರ್ದೇಶನದ 'ಡೊಳ್ಳು' ಸಿನಿಮಾಗಳು ಕಥಾವಿಷಯದಲ್ಲಿ ಪ್ರೇಕ್ಷಕರಿಗೆ ಹತ್ತಿರವಾದರೂ, ಕಮರ್ಷಿಯಲ್ ಸಿನಿಮಾಗಳ ರೇಸ್ ನಡುವೆ ಸೋತವು. 'ವ್ಹೀಲ್‌ಚೇರ್ ರೋಮಿಯೋ' ಹಾಗೂ 'ಕಂಬ್ಳಿಹುಳ' ಸಿನಿಮಾಗಳು ಪ್ರೇಕ್ಷಕರು, ಸೆಲೆಬ್ರಿಟಿಗಳಿಂದಲೇ ವಿಮರ್ಶೆಗೊಳಪಟ್ಟು ಕೆಲಕಾಲ ಚಿತ್ರಮಂದಿರಗಳನ್ನು ಉಳಿಸಿಕೊಂಡವು.

'ಲಕ್ಕಿವೀಕ್' ಎಂದೇ ಕರೆಯಲ್ಪಡುವ ಡಿಸೆಂಬರ್ ಕೊನೆಯ ವಾರದಲ್ಲಿ (ಅಂದರೆ ಇಂದು;ಡಿ.30) ಒಟ್ಟು 9 ಸಿನಿಮಾಗಳು ತಮ್ಮ ಲಕ್ ಪರೀಕ್ಷೆಗೆ ಇಳಿದಿವೆ. ಕೋವಿಡ್ ಕಾರ್ಮೋಡ ಸರಿದು ಬೆಳ್ಳಿರೇಖೆಗಳನ್ನು ಕಂಡ ಕನ್ನಡ ಚಿತ್ರರಂಗಕ್ಕೆ ವರ್ಷಾಂತ್ಯದಲ್ಲಿ ಇದೀಗ ಮತ್ತೊಮ್ಮೆ ಕೋವಿಡ್ ಭೀತಿ ಆವರಿಸಿರುವುದಂತೂ ಅಷ್ಟೇ ಸತ್ಯ!

'ಕಾಂತಾರ'ದ ಅನಿರೀಕ್ಷಿತ ಯಶಸ್ಸು!

ಕರಾವಳಿಯ ದೈವದ ಸುತ್ತ ಹೆಣೆದಿರುವ 'ಕಾಂತಾರ' ಸಿನಿಮಾದ ಕಥೆ ಹಾಗೂ ತನ್ನನ್ನು, ಪ್ಯಾನ್ ಇಂಡಿಯಾ ಎಂಬ ತಕ್ಕಡಿಯಲ್ಲಿ ಇಟ್ಟು ತೂಗುವುದಕ್ಕೆ ನಟ ರಿಷಬ್ ಶೆಟ್ಟಿ ಆರಂಭದಲ್ಲಿ ಹಿಂದೇಟು ಹಾಕಿದ್ದರು. ಹೀಗಾಗಿಯೇ 'ಎಲ್ಲ ಸಿನಿಮಾಗಳು ಪ್ಯಾನ್ ಇಂಡಿಯಾ ಆಗಲು ಸಾಧ್ಯವಿಲ್ಲ. ನನ್ನ ಕರ್ನಾಟಕದ ಮಣ್ಣು, ಸಂಸ್ಕೃತಿಯ ಕಥೆ ಕನ್ನಡದಲ್ಲೇ ಬರಬೇಕು, ಸಬ್‌ಟೈಟಲ್ ಕೊಡುತ್ತೇನೆ. ಹೀಗಾದಾಗ ಇತರರು ನಮ್ಮ ಭಾಷೆ ಗುರುತಿಸುತ್ತಾರೆ' ಎಂದಿದ್ದರು ರಿಷಬ್. ನಂತರ ಆಗಿದ್ದು ಅನಿರೀಕ್ಷಿತವೇ! ಕನ್ನಡ ಮಣ್ಣಿನ ಘಮಲು ಎಲ್ಲೆಡೆ ಪಸರಿಸಿತು. ಕನ್ನಡದಲ್ಲಷ್ಟೇ ತೆರೆಕಂಡ 'ಕಾಂತಾರ' ನಂತರ ಪ್ಯಾನ್ ಇಂಡಿಯಾ ಸ್ವರೂಪ ಪಡೆಯಿತು. ಸುಮಾರು ₹16 ರಿಂದ ₹20 ಕೋಟಿಯಲ್ಲಿ ತೆರೆಗಪ್ಪಳಿಸಿದ 'ಕಾಂತಾರ', ₹450 ಕೋಟಿಯವರೆಗೂ ಬಾಚಿತು. ಇದೇ ಚಿತ್ರದ 'ವರಾಹ ರೂಪಂ' ಹಾಡಿನ ಕುರಿತು ಎದ್ದ ಕೃತಿಚೌರ್ಯದ ವಿವಾದವೂ ಕೊನೆಯಲ್ಲಿ ತಣ್ಣಗಾಯಿತು. ನಟ, ನಿರ್ದೇಶಕ ರಿಷಬ್ ಶೆಟ್ಟಿ ಸಿನಿಗ್ರಾಫ್ ಇಲ್ಲಿಂದ ಬದಲಾಯಿತು.

ಹೊಸ ವರ್ಷಕ್ಕೆ ಸಂಜನಾ 'ಡ್ಯಾಶ್'




ರ್‍ಯಾಪರ್, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ನಟನೆಯ ಚೊಚ್ಚಲ ಚಿತ್ರ 'ಸೂತ್ರಧಾರಿ'ಯ ಹಾಡೊಂದು ಹೊಸ ವರ್ಷದ ಹೊಸ್ತಿಲಲ್ಲಿ ಬಿಡುಗಡೆಯಾಗಿದ್ದು, ಚಂದನ್ ಜೊತೆಗೆ 'ಸಲಗ' ಖ್ಯಾತಿಯ ಸಂಜನಾ ಆನಂದ್ ಹೆಜ್ಜೆ ಹಾಕಿದ್ದಾರೆ.

'ಈ ಹಾಡು ಹೊಸ ವರ್ಷಕ್ಕೆ ನಮ್ಮ ಚಿತ್ರತಂಡದಿಂದ ಉಡುಗೊರೆ. ಈ ಹಾಡಿಗೆ ಭಜರಂಗಿ ಮೋಹನ್ ನೃತ್ಯ ನಿರ್ದೇಶನ ಮಾಡಿದ್ದಾರೆ. ನಾನು ಹಾಗೂ ಚೇತನ್ ಕುಮಾರ್ ಈ ಹಾಡನ್ನು ಬರೆದಿದ್ದೇವೆ. ಸದ್ಯ ಈ ಹಾಡು ಎಲ್ಲೆಡೆ ವೈರಲ್ ಆಗುತ್ತಿದೆ' ಎನ್ನುತ್ತಾರೆ ಚಂದನ್ ಶೆಟ್ಟಿ.

ಇದೊಂದು ವಿಶೇಷ ಹಾಡಾಗಿದ್ದು, ಸಂಜನಾ ಈ ಹಾಡಿನಲ್ಲಷ್ಟೇ ಇರಲಿದ್ದಾರೆ. ಅಪೂರ್ವ 'ಸೂತ್ರಧಾರಿ' ಚಿತ್ರದ ನಾಯಕಿ. ಕಿರಣ್ ಕುಮಾರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಮೈ ಮೂವಿ ಬಜಾರ್ ಖ್ಯಾತಿಯ ನವರಸನ್ ಅವರ ನಿರ್ಮಾಣದ ಚಿತ್ರ ಇದಾಗಿದೆ. ಚಿತ್ರದ ಶೇ 90ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಸಿನಿಮಾ ಶೀಘ್ರದಲ್ಲೇ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

'ಅಪಘಾತ'ಕ್ಕೊಳಗಾದ ದಿಗಂತ್!



'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾತಂಡವು 'ದೂದ್‌ಪೇಢ' ದಿಗಂತ್ ಅವರ ಜನ್ಮದಿನದಂದು ಚಿತ್ರದ ಹೊಸ ಕ್ಯಾರೆಕ್ಟರ್ ಪೋಸ್ಟರ್ ಬಿಡುಗಡೆ ಮಾಡಿದೆ.

ದಿಗಂತ್ ಅವರು ಇಲ್ಲಿಯವರೆಗೂ ಚಾಕೊಲೇಟ್ ಬಾಯ್ ರೀತಿ ಇದ್ದರು. ರೊಮ್ಯಾಂಟಿಕ್ ಹೀರೊ ದಿಗಂತ್ ಈ ಸಿನಿಮಾದಲ್ಲಿ ಸಂಪೂರ್ಣವಾಗಿ ವಿಭಿನ್ನ ಪಾತ್ರದಲ್ಲಿ ಕಾಣಸಿಗಲಿದ್ದಾರೆ ಎಂದಿದೆ ಚಿತ್ರತಂಡ. ಎಡಗೈ ಬಳಸುವ ಜನರ ಕಥೆಹೊತ್ತ ಈ ಸಿನಿಮಾದಲ್ಲಿ ಎಡಗೈಯನ್ನೇ ಹೆಚ್ಚು ಬಳಸುವ ಜನರು ಅನುಭವಿಸುವ ಸಮಸ್ಯೆ, ಸಂಕಷ್ಟದ ಸರಮಾಲೆಯೇ ಇದೆ.

ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದ್ದು, ಜನವರಿ ಕೊನೆಯಲ್ಲಿ ಚಿತ್ರೀಕರಣ ಪೂರ್ಣಗೊಳ್ಳಲಿದೆ. ಸಮರ್ಥ್ ಬಿ. ಕಡಕೊಳ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚೊಚ್ಚಲ ಸಿನಿಮಾ ಇದಾಗಿದೆ.

'ಜಮಾಲಿಗುಡ್ಡ ಮತ್ತೊಂದು ಪ್ರಯೋಗ'


2022, ನಟ 'ಡಾಲಿ' ಧನಂಜಯ ಸದಾ ನೆನಪಿನಲ್ಲಿಟ್ಟುಕೊಳ್ಳುವ ವರ್ಷ. ಏಕೆಂದರೆ ಈ ವರ್ಷ ಇಲ್ಲಿಯವರೆಗೂ ಅವರ ಐದು ಸಿನಿಮಾಗಳು ಬಿಡುಗಡೆಯಾಗಿದ್ದು, ಇಂದು(ಡಿ.30) ಆರನೇ ಸಿನಿಮಾ 'Once upon a time in ಜಮಾಲಿಗುಡ್ಡ' ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ಚಿತ್ರದ ಕುರಿತು ಧನಂಜಯ ಮಾತಿಗಿಳಿದು ಹೀಗಂದರು...

'...ಜಮಾಲಿಗುಡ್ಡ ಪಯಣ ಆರಂಭವಾಗಿದ್ದು 2020ರಲ್ಲಿ. ನಿರ್ದೇಶಕರಾದ ಕುಶಾಲ್ ಗೌಡ ಅವರು ಮೊದಲ ಲಾಕ್‌ಡೌನ್ ಮುಗಿದ ಬಳಿಕ ನನ್ನ ಜೊತೆ ಸಿನಿಮಾವೊಂದನ್ನು ಮಾಡಬೇಕೆಂದು ಮುಂದೆ ಬಂದರು. ಆಗಲೇ ಅವರು 'ಕನ್ನಡಕ್ಕಾಗಿ ಒಂದನ್ನು ಒತ್ತಿ' ಸಿನಿಮಾ ನಿರ್ದೇಶಿಸಿದ್ದರು. ಈ ಸಂದರ್ಭದಲ್ಲಿ '..ಜಮಾಲಿಗುಡ್ಡ' ಸಿನಿಮಾದ ಒನ್‌ಲೈನ್ ಹೇಳಿದ್ದರು. ಮಗುವಿನ ಜೊತೆಗಿನ ಒಂದು ಭಾವನಾತ್ಮಕದ ಪಯಣದ ಎಳೆಯನ್ನು ಇದು ಹೊಂದಿತ್ತು. ಕಮರ್ಷಿಯಲ್, ಆ್ಯಕ್ಷನ್ ಸಿನಿಮಾಗಳ ನಡುವೆ ಒಂದು ಫೀಲ್‌ಗುಡ್ ಸಿನಿಮಾ ಇದ್ದರೆ ಚೆನ್ನಾಗಿರುತ್ತದೆ ಎಂದು ನಾನು ಈ ಪ್ರಾಜೆಕ್ಟ್ ಒಪ್ಪಿಕೊಂಡೆ.'

'ಜಮಾಲಿಗುಡ್ಡ ಒಂದು ಕಾಲ್ಪನಿಕ ಜಾಗ. ಅದರ ಚಿತ್ರೀಕರಣಕ್ಕಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳ ಕಾಲ್‌ಶೀಟ್ ಬೇಕೆಂದು ಕುಶಾಲ್ ಕೇಳಿದರು. ಚಿಕ್ಕಮಗಳೂರಿನ ಬಾಬ ಬುಡನ್‌ಗಿರಿ, ಶಿವಮೊಗ್ಗ, ಗೋಕರ್ಣದಲ್ಲಿ ಶೂಟಿಂಗ್ ನಡೆಸಿದೆವು. '..ಜಮಾಲಿಗುಡ್ಡ' ಒಂದು ಸರಳ ಸಿನಿಮಾ. ಒಂದಿಷ್ಟು ಮುಗ್ಧ ಪಾತ್ರಗಳುಳ್ಳ ಸಿನಿಮಾವಿದು. ಅರ್ಜುನ್ ಜನ್ಯ ಸಂಗೀತ, ಕಾರ್ತಿಕ್ ಅವರ ಸಿನಿಮಾಟೋಗ್ರಫಿ ಕಥೆಗೆ ಪೂರಕವಾಗಿದೆ. ಸೆಪ್ಟೆಂಬರ್‌ನಲ್ಲಿ ಈ ಸಿನಿಮಾ ರಿಲೀಸ್ ಆಗಬೇಕಿತ್ತು. ಆದರೆ ನನ್ನದೇ 'ಮಾನ್ಸೂನ್ ರಾಗ' ಹಾಗೂ 'ಹೆಡ್‌ಬುಷ್' ಸಿನಿಮಾಗಳಿದ್ದ ಕಾರಣ ಇದನ್ನು ಮುಂದೂಡಿದೆವು' ಎನ್ನುತ್ತಾರೆ ಧನಂಜಯ.

'ಪ್ರತಿಯೊಬ್ಬ ನಿರ್ದೇಶಕರೂ ನನಗೆ ಬೇರೆ ಬೇರೆ ರೀತಿಯ ಪಾತ್ರವನ್ನು ವಿನ್ಯಾಸಗೊಳಿಸುತ್ತಿದ್ದಾರೆ. ಇದು ಖುಷಿ ತರುತ್ತದೆ. ನನ್ನ ಪ್ರತಿಯೊಂದು ಸಿನಿಮಾಗೂ ಬೇರೆಬೇರೆಯೇ ನಿರೀಕ್ಷೆ ಇರುತ್ತದೆ. 'ಹೆಡ್‌ಬುಷ್'ಗೆ ಬೇರೆಯೇ ನಿರೀಕ್ಷೆ ಇತ್ತು. 'ಬಡವ ರಾಸ್ಕಲ್' ಸಿನಿಮಾಗೂ ಅಷ್ಟೇ. ಅದೊಂದು ಮಧ್ಯಮ ವರ್ಗದ ಹುಡುಗನ ಕಥೆ ಎಂದು ಮೊದಲೇ ಹೇಳಿದ್ದೆವು. ಕಥೆ ಹೇಳುವುದಕ್ಕೆ ಮುನ್ನ ಪೀಠಿಕೆ ಉದ್ದವಾಗಬಾರದು. ಅದು ಸರಳವಾಗಿರಬೇಕು. '..ಜಮಾಲಿಗುಡ್ಡ' ಸರಳ ಭಾವನಾತ್ಮಕ ಸಿನಿಮಾ ಎಂದಷ್ಟೇ ಹೇಳುತ್ತೇನೆ'.

'ಇದು 90ರ ದಶಕದಲ್ಲಿ ನಡೆಯುವ ಕಥೆ. ನಾನಿದರಲ್ಲಿ ಬಹಳ ಮುಗ್ಧನೊಬ್ಬನ ಪಾತ್ರ ನಿರ್ವಹಿಸಿದ್ದೇನೆ. ಪ್ರಾಣ್ಯ, ಭಾವನ, ಯಶ್ ಶೆಟ್ಟಿ, ಅದಿತಿ ಹೀಗೆ ಪ್ರತಿಯೊಬ್ಬರ ಪಾತ್ರಕ್ಕೂ ಬಹಳ ಪ್ರಾಮುಖ್ಯತೆ ಇದೆ. ಈ ಭಾವನಾತ್ಮಕ ಸಿನಿಮಾ ಬಹಳ ಹಸಿರಾಗಿದೆ. ಬಾಲ್ಯದಲ್ಲಿ ನೋಡಿರುವ ಪಾತ್ರಗಳನ್ನು, ದಿನಗಳನ್ನು ಮತ್ತೊಮ್ಮೆ ರಿವಿಸಿಟ್ ಮಾಡಿದಾಗ ಆರಂಭವಾಗುವ ಕಥೆಯನ್ನು ಇದು ಹೊಂದಿದೆ' ಎಂದು ಕಥೆಯ ಎಳೆಯನ್ನು ಬಿಚ್ಚಿಟ್ಟರು ಧನಂಜಯ.



'...ಜಮಾಲಿಗುಡ್ಡ'
ಧನಂಜಯ, ಪ್ರಾಣ್ಯ

ಸ್ಯಾಂಡಲ್‌ವುಡ್ 'ಲಕ್ಕಿವೀಕ್'

ಚಂದನವನದ ಲಕ್ಕಿವೀಕ್ ಎಂದೇ ಪ್ರಸಿದ್ಧಿಯಾಗಿರುವ ಡಿಸೆಂಬರ್ ಕೊನೆಯ ಶುಕ್ರವಾರ; ಇಂದು(ಡಿ.30) ಸಾಲು ಸಾಲು ಕನ್ನಡ ಚಿತ್ರಗಳು ತೆರೆಗೆ ಬರುತ್ತಿವೆ. ಈ ಪೈಕಿ 'ಪದವಿಪೂರ್ವ', '...ಜಮಾಲಿಗುಡ್ಡ', 'ಮೇಡ್ ಇನ್ ಬೆಂಗಳೂರು', 'ನಾನು ಅದು ಮತ್ತು ಸರೋಜ' ಸಿನಿಮಾಗಳ ಮೇಲೆ ನಿರೀಕ್ಷೆ ಹೆಚ್ಚಿದೆ.

ಯೋಗರಾಜ್ ಭಟ್ ಅವರ ಗರಡಿಯಲ್ಲಿ ಪಳಗಿದ ಹರಿಪ್ರಸಾದ್ ಜಯಣ್ಣ ಅವರ ಚೊಚ್ಚಲ ಚಿತ್ರ 'ಪದವಿಪೂರ್ವ'. ಚಿತ್ರಕ್ಕೆ ಪೃಥ್ವಿ ಶಾಮನೂರು ನಾಯಕನಾದರೆ, ಅಂಜಲಿ ಅನೀಶ್ ಮತ್ತು ಯಶ ಶಿವಕುಮಾರ್ ನಾಯಕಿಯರಾಗಿ ಅಭಿನಯಿಸಿದ್ದಾರೆ. ಕುಶಾಲ್ ಗೌಡ ನಿರ್ದೇಶನದಲ್ಲಿ ಮೂಡಿಬರುತ್ತಿರುವ '..ಜಮಾಲಿಗುಡ್ಡ' ಕನ್ನಡ ಹಾಗೂ ತೆಲುಗಿನಲ್ಲಿ ತೆರೆಗೆ ಬರುತ್ತಿದೆ. ಈ ಸಿನಿಮಾದಲ್ಲಿ ಧನಂಜಯ ಅವರಿಗೆ ಅದಿತಿ ಪ್ರಭುದೇವ ಜೋಡಿಯಾಗಿದ್ದಾರೆ.

ಇಂದು ತೆರೆಗೆ

ಪ್ರದೀಪ್ ಕೆ. ಶಾಸ್ತ್ರಿ ಅವರ ನಿರ್ದೇಶನದ 'ಮೇಡ್ ಇನ್ ಬೆಂಗಳೂರು', ಬೆಂಗಳೂರು ಹಾಗೂ ಸ್ಟಾರ್ಟ್ ಅಪ್ ಸುತ್ತ ಸಾಗುವ ಚಿತ್ರಕಥೆ ಹೊಂದಿದೆ. ಅನಂತನಾಗ್, ಸಾಯಿಕುಮಾರ್, ಪ್ರಕಾಶ್ ಬೆಳವಾಡಿ ಮುಂತಾದ ಕಲಾವಿದರು ಇಲ್ಲಿ ಕಾಣಿಸಿಕೊಂಡಿದ್ದಾರೆ. ವಿಜಯ್ ಪ್ರೀತಮ್ ನಿರ್ದೇಶನದ ಹೊಸ ಚಿತ್ರ 'ನಾನು, ಅದು ಮತ್ತು ಸರೋಜ'. ಚಿತ್ರದ ಕಥೆ ಮೂರು ಪ್ರಮುಖ ಪಾತ್ರಗಳ ಸುತ್ತ ಸಾಗುತ್ತದೆ. 'ಲೂಸ್ ಮಾದ' ಯೋಗಿ, ದತ್ತಣ್ಣ ಹಾಗೂ ಅಪೂರ್ವ ಭಾರದ್ವಾಜ್ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ವಿನೋದ್ ಧಯಾಳನ್ ಅವರ 'ಜೋರ್ಡನ್' ಸಿನಿಮಾ ಕೂಡಾ ತೆರೆಕಾಣುತ್ತಿದ್ದು, 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಮಹೇಂದ್ರ ಪ್ರಸಾದ್, 'ಕವಲು ದಾರಿ' ಖ್ಯಾತಿಯ ಸಂಪತ್ ಮೈತ್ರೇಯ ಮುಖ್ಯ ಭೂಮಿಕೆಯಲ್ಲಿದ್ದಾರೆ. ಈ ಸಿನಿಮಾಗಳ ಜೊತೆಗೆ ಲಕ್ಕಿವೀಕ್‌ನಲ್ಲಿ ಒಂದಿಷ್ಟು ಹೊಸಬರ ಸಿನಿಮಾಗಳೂ ಗಾಂಧಿನಗರಕ್ಕೆ ಲಗ್ಗೆ ಇಟ್ಟಿವೆ.



ಅಪೂರ್ವ ಭಾರದ್ವಾಜ್

ಫೆಬ್ರುವರಿಯಲ್ಲಿ ಬರ್ತಾರೆ 'ನ್ಯಾನೋ ನಾರಾಯಣಪ್ಪ'!



'ಕೆಮಿಸ್ಟ್ರಿ ಆಫ್ ಕರಿಯಪ್ಪ', 'ಕ್ರಿಟಿಕಲ್ ಕೀರ್ತನೆಗಳು' ಸಿನಿಮಾ ಮೂಲಕ ಚಂದನವನದಲ್ಲಿ ಭರವಸೆ ಮೂಡಿಸಿದವರು ನಿರ್ದೇಶಕ ಕುಮಾರ್. ಇವರ ನಿರ್ದೇಶನದ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ.

'ಕೆ.ಜಿ.ಎಫ್ ತಾತ' ಖ್ಯಾತಿಯ ನಟ, ದಿವಂಗತ ಕೃಷ್ಣೋಜಿ ರಾವ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ನ್ಯಾನೋ ನಾರಾಯಣಪ್ಪ' ಫೆಬ್ರುವರಿಯಲ್ಲಿ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. 'ಕೃಷ್ಣೋಜಿ ರಾವ್ ಬಹಳ ಲವಲವಿಕೆಯಿಂದ ಸಿನಿಮಾದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಚಿತ್ರದಲ್ಲಿ ಅವರ ನಟನೆ ತುಂಬಾ ಅದ್ಭುತವಾಗಿ ಮೂಡಿಬಂದಿದೆ. ಸಿನಿಮಾ ಯಾವಾಗ ಬಿಡುಗಡೆಯಾಗುತ್ತದೆ ಎಂದು ಕೇಳುತ್ತಲೇ ಇದ್ದರು. ಆದರೆ ಇಂದು ಅವರು ನಮ್ಮೊಂದಿಗಿಲ್ಲ' ಎಂದು ಕುಮಾರ್ ಬೇಸರ ವ್ಯಕ್ತಪಡಿಸುತ್ತಾರೆ.

ಸೆನ್ಸಾರ್‌ನಲ್ಲಿ ಸಿನಿಮಾ 'ಯು' ಪ್ರಮಾಣಪತ್ರ ಪಡೆದಿದೆ. ಕುಮಾರ್ ಅವರ ಎಲ್ಲ ಚಿತ್ರಗಳಂತೆ ಹಾಸ್ಯಕ್ಕೆ ಇಲ್ಲಿ ಮೊದಲ ಆದ್ಯತೆ ಇದೆ ಎಂದಿದೆ ಚಿತ್ರತಂಡ. ಜೊತೆಗೆ ಭಾವನಾತ್ಮಕ ಅಂಶಗಳೂ ಈ ಚಿತ್ರದಲ್ಲಿದೆಯಂತೆ. ಕಾಕ್ರೋಚ್ ಸುಧಿ, ಗಿರೀಶ್ ಶಿವಣ್ಣ, ಪ್ರಶಾಂತ್ ಸಿದ್ದಿ, ಅಕ್ಷತ ಕುಕ್ಕಿ, ಅಪೂರ್ವ ಒಳಗೊಂಡ ತಾರಾಬಳಗ ಸಿನಿಮಾದಲ್ಲಿದೆ.



ಸುಭಾಷಿತ

ಸಾಧನೆಗಳು, ಪ್ರಶಸ್ತಿಗಳು, ಪದವಿಗಳು ಅಥವಾ ಹಣಕ್ಕಿಂತ ಉತ್ತಮ ಸಂಬಂಧಗಳು, ಔದಾರ್ಯ ಮತ್ತು ಮಾನಸಿಕ ಶಾಂತಿಯನ್ನು ಹೊಂದುವುದು ಬಹಳ ಮುಖ್ಯ.

–ಸುಧಾ ಮೂರ್ತಿ

ದ್ವೇಷ ಭಾಷಣಕಾರರಿಗೆ ಸಂಸತ್ತಿನಲ್ಲಿ ಸ್ಥಾನವಿರುವುದೇ ದುರದೃಷ್ಟಕರ

ಭೋಪಾಲ್‌ನ ಸಂಸದೆ, ಬಿಜೆಪಿಯ ಪ್ರಜ್ಞಾ ಸಿಂಗ್ ಠಾಕೂರ್ ಅವರು ತಮ್ಮ ಭಂಡ ಮಾತುಗಳ ಮೂಲಕ ಮತ್ತೊಮ್ಮೆ ಲಕ್ಷ್ಮಣ ರೇಖೆಯನ್ನು ದಾಟಿದ್ದಾರೆ. ಮುಸ್ಲಿಮರ ವಿರುದ್ಧ ಹಿಂದೂಗಳು ಆಯುಧ ಕೈಗೆತ್ತಿಕೊಳ್ಳಬೇಕು ಎಂದು ಶಿವಮೊಗ್ಗದಲ್ಲಿ ಭಾನುವಾರ ನಡೆದ ಹಿಂದೂ ಜಾಗರಣ ವೇದಿಕೆಯ ಕಾರ್ಯಕ್ರಮದಲ್ಲಿ ಅವರು ಹೇಳಿದ್ದಾರೆ. ಹಿಂದೂಗಳು ತಮ್ಮ ಹೆಣ್ಣು ಮಕ್ಕಳ ರಕ್ಷಣೆ ಮಾಡಬೇಕು ಮತ್ತು ಮನೆಯಲ್ಲಿ ಆಯುಧ ಇರಿಸಿಕೊಳ್ಳಬೇಕು ಎಂದಿದ್ದಾರೆ. 'ಅವರು ನಮ್ಮ ಹರ್ಷನನ್ನು (ಬಜರಂಗದಳದ ಕಾರ್ಯಕರ್ತರಾಗಿದ್ದ ಅವರು ಈ ವರ್ಷದ ಆರಂಭದಲ್ಲಿ ಹತ್ಯೆಯಾಗಿದ್ದಾರೆ) ಇರಿದು ಕೊಂದರು. ಅವರು ನಮ್ಮ ಹಿಂದೂ ಹೀರೊಗಳನ್ನು ಕೊಂದಿದ್ದಾರೆ' ಎಂದೂ ಹೇಳಿದ್ದಾರೆ. 'ಮನೆಯಲ್ಲಿ ಆಯುಧ ಇಟ್ಟುಕೊಳ್ಳಿ, ಅವುಗಳನ್ನು ಹರಿತವಾಗಿ ಇರಿಸಿಕೊಳ್ಳಿ, ಇವು ತರಕಾರಿಯನ್ನು ಸರಿಯಾಗಿ ಕತ್ತರಿಸುತ್ತವೆ ಎಂದಾದರೆ, ನಮ್ಮ ಶತ್ರುಗಳ ಬಾಯಿ ಮತ್ತು ತಲೆಯನ್ನೂ ಕತ್ತರಿಸಬಲ್ಲವು' ಎಂದಿದ್ದಾರೆ. 'ಲವ್ ಜಿಹಾದ್' ಸೇರಿದಂತೆ ಹಿಂದುತ್ವವಾದಿಗಳ ಅಚ್ಚುಮೆಚ್ಚಿನ ಎಲ್ಲ ವಿಚಾರಗಳನ್ನೂ ಅವರು ಪ್ರಸ್ತಾಪಿಸಿದ್ದಾರೆ. ಸರ್ಕಾರವು ಕಾನೂನು ಕ್ರಮ ಕೈಗೊಳ್ಳಬೇಕಾದ ರೀತಿಯಲ್ಲಿ ಅವರ ಹೇಳಿಕೆಗಳು ಪ್ರಚೋದನಕಾರಿಯಾಗಿದ್ದವು ಮತ್ತು ಗಂಭೀರವಾದ ರಾಜಕೀಯ ಪ್ರತಿಕ್ರಿಯೆಗೂ ಅರ್ಹವಾಗಿವೆ. ದ್ವೇಷ ಭಾಷಣಗಳಿಗೆ ತಡೆ ಒಡ್ಡಲೇಬೇಕು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಹೇಳಿತ್ತು. ಅದಕ್ಕಾಗಿ ಕೆಲವು ಮಾರ್ಗಸೂಚಿಗಳನ್ನೂ ನೀಡಿತ್ತು. ದ್ವೇಷ ಭಾಷಣದ ಪ್ರಕರಣ ನಡೆದಾಗ ಸರ್ಕಾರವು ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳಬೇಕು, ದೂರು ಬರಬೇಕು ಎಂದು ಕಾಯಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಹಾಗಿದ್ದರೂ ಪ್ರಜ್ಞಾ ಪ್ರಕರಣದಲ್ಲಿ ಪೊಲೀಸರು ಈ ಮಾರ್ಗಸೂಚಿಯನ್ನು ಪಾಲಿಸಲಿಲ್ಲ. ದೂರು ಬರುವವರೆಗೂ ಸುಮ್ಮನಿದ್ದರು. ಕಾಂಗ್ರೆಸ್ ನೀಡಿದ ದೂರು ಆಧರಿಸಿ ಬುಧವಾರ ಎಫ್‌ಐಆರ್ ದಾಖಲಿಸಿದ್ದಾರೆ.



ಹಿಂಸೆಗೆ ಪ್ರಚೋದನೆ ನೀಡುವ ದ್ವೇಷ ಭಾಷಣದ ಆರೋಪದ ಮೇಲೆ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಅವರ ಮೇಲೆ ಕಠಿಣ ಕ್ರಮ ಜರುಗಿಸಬೇಕು

ಪ್ರಜ್ಞಾ ಅವರ ಹೇಳಿಕೆಗಳ ಹಿಂದೆ ಇದ್ದದ್ದು ಕಿಚ್ಚು ಹಚ್ಚುವ ಉದ್ದೇಶ. ಹಾಗಾಗಿ, ಹಿಂಸೆಗೆ ಪ್ರಚೋದನೆ ನೀಡಿದ ಮತ್ತು ದ್ವೇಷ ಭಾಷಣದ ಆರೋಪದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಇಂತಹ ವ್ಯಕ್ತಿಯೊಬ್ಬರಿಗೆ ಸಂಸತ್ತಿನಲ್ಲಿ ಸ್ಥಾನ ಇದೆ ಎಂಬುದೇ ದುರದೃಷ್ಟಕರ. ಬಿಜೆಪಿಯವರು ಮತ್ತು ಬಿಜೆಪಿಯ ಬೆಂಬಲಿಗರು ಪ್ರಜ್ಞಾ ಅವರ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅವರು ಸ್ವರಕ್ಷಣೆ ಕುರಿತು ಮಾತನಾಡಿದ್ದಾರೆ ಮತ್ತು ಮುಸ್ಲಿಮರನ್ನು ಅವರು ಉಲ್ಲೇಖಿಸಿಯೇ ಇಲ್ಲ ಎಂದಿದ್ದಾರೆ. ಆದರೆ, ಅವರು ಹೇಳಿದ್ದು ಏನು ಎಂಬುದು ಬಹಳ ಸ್ಪಷ್ಟ. ಹಿಂದೂಗಳು ಮುಸ್ಲಿಮರ ವಿರುದ್ಧ ತಮ್ಮ ಆಯುಧಗಳನ್ನು ಹರಿತವಾಗಿಸಿಕೊಳ್ಳಿ ಎಂಬುದೇ ಅವರು ಹೇಳಿದ್ದರ ಅರ್ಥ. ಶಸ್ತ್ರಸಜ್ಜಿತರಾಗಿ ಎಂಬ ಕರೆ ಇದು. ನರಮೇಧಕ್ಕಾಗಿ ಈ ಹಿಂದೆ ನೀಡಿದ ಕರೆಗಳ ಮುಂದುವರಿದ ಭಾಗ ಇದು. ಈ ಕರೆಯ ಹಿಂದೆ ಇರುವ ಕೆಟ್ಟ ಉದ್ದೇಶವನ್ನು ಗುರುತಿಸಲು ನಿರಾಕರಿಸಿರುವುದು ಉದ್ದೇಶಪೂರ್ವಕವೇ. ಈ ಕರೆಯು ದೇಶದಲ್ಲಿ ಈಗ ಇರುವ ದ್ವೇಷ ಮತ್ತು ಹಿಂಸೆಯ ಮನೋಭಾವವನ್ನು ಇನ್ನಷ್ಟು ಗಾಢಗೊಳಿಸುತ್ತದೆ.

ಪ್ರಜ್ಞಾ ಅವರು ಭಯೋತ್ಪಾದನಾ ಪ್ರಕರಣದ ಆರೋಪಿ. ಆರು ಮಂದಿಯ ಸಾವಿಗೆ ಕಾರಣವಾದ ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಅವರು ವಿಚಾರಣೆ ಎದುರಿಸುತ್ತಿದ್ದಾರೆ. ದ್ವೇಷ ಕಾರುವ ಕೆಲಸವನ್ನು ಅವರು ಪದೇ ಪದೇ ಮಾಡಿದ್ದಾರೆ. ವಿವಿಧ ವಿಚಾರಗಳಿಗೆ ಸಂಬಂಧಿಸಿ ಅತ್ಯಂತ ಆಕ್ಷೇಪಾರ್ಹ ಮತ್ತು ಘಾತಕತನದ ಹೇಳಿಕೆಗಳನ್ನು ಅವರು ನೀಡಿದ್ದಾರೆ. ನಾಥೂರಾಮ್ ಗೋಡ್ಸೆಯನ್ನು ಅವರು ಹೊಗಳಿದ್ದರು. ಗೋಡ್ಸೆ ದೇಶಭಕ್ತ ಎಂದಿದ್ದರು. ಈ ಹೇಳಿಕೆ ನೀಡಿದ ಪ್ರಜ್ಞಾ ಅವರನ್ನು ಎಂದಿಗೂ ಕ್ಷಮಿಸುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಪಕ್ಷದ ಶಿಸ್ತು ಸಮಿತಿ ಕೂಡ ಈ ಹೇಳಿಕೆಗಳ ಕುರಿತು ಗಮನ ಹರಿಸಿತ್ತು. ಆದರೆ, ಮುಂದೆ ಯಾವ ಕ್ರಮವನ್ನೂ ಕೈಗೊಳ್ಳಲಾಗಿಲ್ಲ. ಪ್ರಜ್ಞಾ ಅವರು ದ್ವೇಷ ಹರಡುವ ಹೇಳಿಕೆಗಳನ್ನು ನೀಡುವುದನ್ನು ಮುಂದುವರಿಸಿದ್ದಾರೆ. ಪಕ್ಷವು ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಇಂತಹ ಆಕ್ಷೇಪಾರ್ಹ ಹೇಳಿಕೆ ನೀಡಿದವರ ಮೇಲೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶ ಇದೆ. ಅವರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರುವ ಮೂಲಕ ದ್ವೇಷ ಮತ್ತು ಪ್ರಚೋದನಕಾರಿಯಾದ ಅವರ ರಾಜಕೀಯಕ್ಕೆ ಪ್ರೋತ್ಸಾಹ ಕೊಟ್ಟಂತಾಗಿದೆ. ಮತ್ತೆ ಮತ್ತೆ ನೀಡಲಾಗುವ ಇಂತಹ ಹೇಳಿಕೆಗಳ ಗುರಿ ಅಲ್ಪಸಂಖ್ಯಾತರು ಅದರಲ್ಲೂ ವಿಶೇಷವಾಗಿ ಮುಸ್ಲಿಮರೇ ಆಗಿದ್ದಾರೆ. ಅವರನ್ನು ಭೀತಗೊಳಿಸುವುದು ಇಂತಹ ಹೇಳಿಕೆಗಳ ಉದ್ದೇಶವಾಗಿದೆ. ದ್ವೇಷದ ವಾತಾವರಣವು ವಿಷಮಗೊಳ್ಳುತ್ತಲೇ ಇದೆ ಮತ್ತು ಇದುವೇ ಸಹಜ ಎನ್ನುವ ಮನೋಭಾವ ಮೂಡುತ್ತಿದೆ.

ದಿನದ ಟ್ವೀಟ್


ರೈತಪರ ಚಿಂತನೆಗೆ ಸಕಾಲ



ಸ್ವಾತಂತ್ರ್ಯ ದೊರೆತ 75 ವರ್ಷಗಳ ಬಳಿಕವೂ ರೈತರ ಆದಾಯವು ಪಿರಮಿಡ್‌ನ ಕೆಳಭಾಗದಲ್ಲೇ ಇದೆ. ರೈತರ ಆದಾಯ ಏಕೆ ಇಷ್ಟು ಕೆಳಮಟ್ಟದಲ್ಲಿದೆ ಎಂದು ಯೋಚಿಸಲು ಇದು ಸಕಾಲವಲ್ಲವೇ ಎಂದು ಕೇಂದ್ರ ವಿದ್ಯುತ್ ಸಚಿವ ಕೃಷ್ಣಪಾಲ್ ಕೇಳಿದ್ದಾರೆ. ಹೆಚ್ಚಿನ ಸಚಿವರು ಇಂತಹ ಪ್ರಶ್ನೆಗಳನ್ನು ಕೇಳಬೇಕು ಮತ್ತು ಈ ದಿಸೆಯಲ್ಲಿ ಯೋಚಿಸಬೇಕು ಎಂದು ನಾನು ಆಶಿಸುತ್ತೇನೆ.

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ



ರೈಲ್ವೆಯಲ್ಲಿ 2,52,738 ಹುದ್ದೆಗಳು ಖಾಲಿಯಿವೆ ಮತ್ತು ನಿರುದ್ಯೋಗವು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ. ಮೋದಿ ನೇತೃತ್ವದ ಸರ್ಕಾರವು ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲವೇಕೆ? 2018-20ರ ಅವಧಿಯಲ್ಲಿ ನಿರುದ್ಯೋಗ ಅಥವಾ ಆರ್ಥಿಕ ಮುಗ್ಗಟ್ಟಿನಿಂದಾಗಿ 25,000ಕ್ಕೂ ಹೆಚ್ಚು ಭಾರತೀಯರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಸಚಿವರು ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ. ಪ್ರಧಾನಿ ಈ ಬಗ್ಗೆ ಕಾಳಜಿ ವಹಿಸುವರೇ?

ಸಂಘಮಿತ್ರಾ, ಚಿತ್ರನಿರ್ಮಾಪಕಿ, ಲೇಖಕಿ

25 ವರ್ಷಗಳ ಹಿಂದೆ

ಮಂಗಳವಾರ, 30-12-1997

• ಡಾ. ಚಿದಾನಂದ ಮೂರ್ತಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ನವದೆಹಲಿ, ಡಿಸೆಂಬರ್ 29– ಕನ್ನಡದ ಖ್ಯಾತ ಸಂಶೋಧಕ ಡಾ. ಎಂ.ಚಿದಾನಂದ ಮೂರ್ತಿ ಅವರ 'ಹೊಸತು ಹೊಸತು' ಪ್ರಬಂಧ ಸಂಕಲನಕ್ಕೆ 1997ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

25 ಸಾವಿರ ನಗದು ಹಾಗೂ ಕಂಚಿನ ಫಲಕವನ್ನು ಪ್ರಶಸ್ತಿ ಒಳಗೊಂಡಿದೆ.

ಇಂದು ಡಾ. ಯು.ಆರ್. ಅನಂತಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯಕಾರಿ ಸಮಿತಿ ಸಭೆಯು ಭಾರತೀಯ ಭಾಷೆಗಳ ಒಟ್ಟು 21 ಲೇಖಕರ ಕೃತಿಗಳಿಗೆ ಪ್ರಸಕ್ತ ಸಾಲಿನ ಪ್ರಶಸ್ತಿಗಳನ್ನು ಆಯ್ಕೆ ಮಾಡಿತು.

• ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕೆ ಸೋನಿಯಾ

ನವದೆಹಲಿ, ಡಿಸೆಂಬರ್ 29– ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಕಾರ್ಯಕಾರಿಣಿ ಸದಸ್ಯರ ಮನವಿಯನ್ನು ಕೊನೆಗೂ ಒಪ್ಪಿರುವ ಸೋನಿಯಾ ಗಾಂಧಿ ಅವರು, ಬರುವ ಮಧ್ಯಂತರ ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಪರವಾಗಿ ಪ್ರಚಾರ ಕೈಗೊಳ್ಳಲು ಇಂದು ನಿರ್ಧರಿಸಿದರು.

ಸೋನಿಯಾ ಅವರ ಈ ತೀರ್ಮಾನದಿಂದ ಕಾಂಗ್ರೆಸ್ ಇತ್ತೀಚಿನ ವರ್ಷಗಳಲ್ಲಿ ಕಳೆದುಕೊಂಡಿದ್ದ ನೆಹರೂ–ಇಂದಿರಾ ಗಾಂಧಿ ಕುಟುಂಬದ ಪಾತ್ರವು ಚುನಾವಣಾ ರಾಜಕೀಯ ರಂಗದಲ್ಲಿ ಮತ್ತೆ ವಿಜೃಂಭಿಸಲಿದೆ.

50 ವರ್ಷಗಳ ಹಿಂದೆ

ಶನಿವಾರ, 30-12-1972

• ಭಾಷೆ, ಪ್ರಾಂತೀಯತೆ ಚಳವಳಿಗಳಲ್ಲಿ ಕಾಂಗ್ರೆಸ್ಸಿಗರ ಭಾಗ ಬೇಡ

ವಿಧಾನನಗರ, ಡಿಸೆಂಬರ್ 29– ಕಾಂಗ್ರೆಸ್ ಸದಸ್ಯರು ಯಾವುದೇ ಪ್ರಾದೇಶಿಕ ಹಾಗೂ ಪ್ರಾಂತೀಯತೆ ಚಳವಳಿಗಳಲ್ಲಿ ಭಾಗವಹಿಸದಂತೆ ಆದೇಶ ನೀಡುವ ರಾಜಕೀಯ ಪರಿಸ್ಥಿತಿ ಕುರಿತ ನಿರ್ಣಯವೊಂದನ್ನು ಕಾಂಗ್ರೆಸ್ ಪಕ್ಷದ 74ನೇ ಪೂರ್ಣಾಧಿವೇಶನವು ಇಂದು ಆರು ಗಂಟೆ ಕಾಲ ನಡೆದ ಚರ್ಚೆ ನಂತರ ಅಂಗೀಕರಿಸಿತು.

ಆಂಧ್ರಪ್ರದೇಶ ಮತ್ತು ಅಸ್ಸಾಂಗಳಲ್ಲಿ ಇರುವಂತಹ ಚಳವಳಿಗಳಲ್ಲಿ ಪಕ್ಷದ ಸದಸ್ಯರು ಭಾಗವಹಿಸಬಾರದೆಂದೂ, ಹೊಸ ಸಾಮಾಜಿಕ ವ್ಯವಸ್ಥೆಗೆ ಅಡ್ಡಿಯಾಗುವ ಶಕ್ತಿಗಳ ವಿರುದ್ಧ ಎಚ್ಚರಿಕೆಯಿಂದಿರಬೇಕೆಂದೂ ನಿರ್ಣಯದ ತಿದ್ದುಪಡಿಯೊಂದರಲ್ಲಿ ಸೂಚಿಸಲಾಗಿದೆ.

• ಪ್ರಶಸ್ತಿ ನಿರಾಕರಣೆಗೆ ಹಣ ಕಡಿಮೆ ಎಂಬುದು ಕಾರಣವಲ್ಲ: ಭೈರಪ್ಪ

ಮೈಸೂರು, ಡಿಸೆಂಬರ್ 29– 'ವಂಶವೃಕ್ಷ' ಚಿತ್ರದ ಕಥಾ ಲೇಖನಕ್ಕೆ ನೀಡಿದ ಪ್ರಶಸ್ತಿಯನ್ನು ನಿರಾಕರಿಸಲು ಚಲನಚಿತ್ರ ಸಮಿತಿಯು ನೀಡುವ 1,500 ರೂ. ಹಣ ಕಡಿಮೆ ಆದುದೇ ಕಾರಣವಲ್ಲವೆಂದು ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ಅವರು ಇಂದು ಇಲ್ಲಿ ಪತ್ರಿಕಾ ಹೇಳಿಕೆಯೊಂದರಲ್ಲಿ ಸ್ಪಷ್ಟಪಡಿಸಿದರು.

'ಚಲನಚಿತ್ರವಾಗಲೆಂದು ನಾನು ಕಾದಂಬರಿಯನ್ನು ಬರೆಯಲಿಲ್ಲ. ಚಿತ್ರನಾಟಕ, ಸಂಭಾಷಣೆ ಮೊದಲಾದವುಗಳನ್ನು ನಾನು ಬರೆಯಲಿಲ್ಲ. ಆದುದರಿಂದ ನನ್ನ ಕಾದಂಬರಿಯನ್ನು ಚಲನಚಿತ್ರವಾಗಿ ಪರಿವರ್ತಿಸಿದ್ದು ತಂದು ನಿರ್ಣಯಿಸಿ ಪುರಸ್ಕಾರ ನೀಡುವ ಅಗತ್ಯವಿಲ್ಲ. ಇದು ನನ್ನ ಮೂಲ ನಿಲುವು' ಎಂದರು.

ಎಲ್ಲರನ್ನೂ ಒಳಗೊಳ್ಳಲು ಸಾಧ್ಯವಾದಾಗಷ್ಟೇ ಜಾತಿಯ ಮೀರುವಿಕೆ ಸಾಧ್ಯ

ಶರೀಫತತ್ವ ಇಲ್ಲದ್ದು 'ಕನ್ನಡ ಧರ್ಮ'ವೇ?



ಪಡಸಾಲೆ

ರಘುನಾಥ ಚ.ಹ

'ವ್ಯವಹಾರದಲ್ಲಿ ಕನ್ನಡವನ್ನು ವಿಶಾಲವಾಗಿಯೂ ಮನಃಪೂರ್ವಕವಾಗಿಯೂ ಉಪಯೋಗಿಸಬೇಕು; ಅದರ ಪರಿಣಾಮವಾಗಿ ಕನ್ನಡ ಭಾಷಾ ಸಾಹಿತ್ಯಗಳು ಕನ್ನಡ ಜನಜೀವನದ ವಿಪುಲತೆ, ವೈವಿಧ್ಯ, ಸೌಂದರ್ಯ ಮತ್ತು ಭಾವರಸವಾಹಿನಿಯಾಗಿ ಹರಿಯಬೇಕು. ಈ ಪ್ರವಾಹಕ್ಕೆ ಅಡ್ಡಬರಬಹುದಾದ ದೇಶ-ಕಾಲಗಳ ಸಂಕುಚಿತ ದೃಷ್ಟಿಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು'. ಇದು, ಬೊಂಬಾಯಿಯಲ್ಲಿ (1935ರಲ್ಲಿ) ನಡೆದ 21ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿನ ಎನ್.ಎಸ್. ಸುಬ್ಬರಾಯರ ಅಧ್ಯಕ್ಷ ಭಾಷಣದ ಸಾರಾಂಶ. ಸುಬ್ಬರಾಯರು ಹೇಳುವ ಕನ್ನಡ ಜನಜೀವನದ ವಿಪುಲತೆ, ವೈವಿಧ್ಯ ಹಾಗೂ ಸೌಂದರ್ಯವನ್ನು ಹಾವೇರಿಯಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಕಾಣಲಿಕ್ಕೆ ಸಾಧ್ಯವಿದೆಯೆ?

ಮುಸ್ಲಿಂ ಸಮುದಾಯದ ಬರಹಗಾರರನ್ನು ಸಮ್ಮೇಳನದಿಂದ ಹೊರಗಿಡಲಾಗಿದೆ ಎನ್ನುವ ಚರ್ಚೆ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಪರಿಷತ್ತಿನ ಈ ನಡೆಯನ್ನು ವಿರೋಧಿಸಿ, ಬೆಂಗಳೂರಿನಲ್ಲಿ ಪರ್ಯಾಯ ಸಮ್ಮೇಳನ ನಡೆಸುವ ಪ್ರಯತ್ನಗಳೂ ನಡೆದಿವೆ. ಈ ಟೀಕೆ ಟಿಪ್ಪಣಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನೀಡಿರುವ ಪ್ರತಿಕ್ರಿಯೆ ಕುತೂಹಲಕರವಾಗಿದೆ:

'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಯಾವುದೇ ಜಾತಿ, ಧರ್ಮ ಅಥವಾ ಸಿದ್ಧಾಂತಕ್ಕೆ ಸೀಮಿತವಾದುದಲ್ಲ. ಇಲ್ಲಿರುವುದು ಕನ್ನಡ ಜಾತಿ ಮತ್ತು ಕನ್ನಡ ಧರ್ಮ ಮಾತ್ರ. ಜಾತಿ–ಮತದ ಹಿನ್ನೆಲೆಯಲ್ಲಿ ಆಹ್ವಾನ ಪತ್ರಿಕೆಯನ್ನು ವಿಶ್ಲೇಷಣೆ ಮಾಡುವುದೇ ಕನ್ನಡವನ್ನು ಸಾರ್ವಭೌಮವಾಗಿಸುವ ಉನ್ನತ ಆಶಯದಿಂದ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿದ ಕನ್ನಡ ಸಾಹಿತ್ಯ ಪರಂಪರೆಗೆ ಮಾಡುವ ಅವಮಾನ. ಕನ್ನಡ ಸಾಹಿತ್ಯ ಪರಿಷತ್ತು ಎಡ ಪಂಥ, ಬಲ ಪಂಥ, ಮೇಲ್ಪಂಥ, ಕೆಳ ಪಂಥ, ಮಧ್ಯ ಪಂಥ– ಹೀಗೆ ಯಾವ ಚೌಕಟ್ಟಿಗೂ ಸಿಲುಕುವಂತಹದಲ್ಲ. ಇದು 'ಕನ್ನಡ ಪಂಥ'ಕ್ಕೆ ಸೇರಿದ್ದು'.

ಪರಿಷತ್ತಿನ ಅಧ್ಯಕ್ಷರ ಮಾತುಗಳಿಂದ ಎರಡು ಪ್ರಶ್ನೆಗಳು ಎದುರಾಗುತ್ತವೆ. ಅವುಗಳೆಂದರೆ: 'ಕನ್ನಡ ಧರ್ಮ' ಯಾವುದು? ಜಾತಿ–ಮತದ ಹಿನ್ನೆಲೆಯ ವಿಶ್ಲೇಷಣೆ ಸಾಹಿತ್ಯ ಪರಂಪರೆಗೆ ಮಾಡುವ ಅವಮಾನವೆ?

'ಕನ್ನಡ ಧರ್ಮ' ಯಾವುದೆನ್ನುವ ಪ್ರಶ್ನೆಗೆ, ಸಾಹಿತ್ಯ ಸಮ್ಮೇಳನ ನಡೆಯಲಿರುವ ಹಾವೇರಿ ಮಣ್ಣಿನ ಚರಿತ್ರೆಯೇ ಉತ್ತರವಾಗಿದೆ. ಹಾವೇರಿ ಪರಿಸರದಿಂದ ರೂಪುಗೊಂಡ ಶಿಶುನಾಳ ಶರೀಫ ಸಂತರಷ್ಟೇ ಅಲ್ಲ; ಕನ್ನಡ ಸಾಂಸ್ಕೃತಿಕ ಲೋಕದ ಅತ್ಯುತ್ತಮ ಪ್ರತಿನಿಧಿಯೂ ಹೌದು. ಹಿಂದೂ ಮತ್ತು ಮುಸ್ಲಿಂ– ಉಭಯಧರ್ಮಗಳನ್ನೂ ಜೀವಿಸಿದ, ಪ್ರೇಮಿಸಿದ ಅವರು, ಕನ್ನಡ ಧರ್ಮದ ನಿಜ ಮಾದರಿ. ಕನ್ನಡದ ಮೊದಲ ಮುಸಲ್ಮಾನ ಕವಿಯಾದ ಶರೀಫ, ನವೋದಯ ಕಾವ್ಯದ ಮೊದಲ ಕವಿಯೂ ಹೌದು. ಈ ಶರೀಫಜ್ಜ, 'ಕನ್ನಡ ನವೋದಯ ಕಾವ್ಯದ ಮುಂಗೋಳಿ'ಯೆಂದು ಕರೆಯಲಾಗುವ ಮುದ್ದಣನಿಗಿಂತಲೂ ಸುಮಾರು ಅರ್ಧ ಶತಮಾನದಷ್ಟು ಹಿರೀಕ. ಮುಸಲ್ಮಾನರ ಏಕ ದೈವದ ಆರಾಧನೆ, ಹಿಂದೂಗಳ ಬಹು ದೈವ ಸಂಸ್ಕೃತಿ, ಸೂಫಿಗಳ ಪ್ರೇಮಮಾರ್ಗ ಇವೆಲ್ಲವೂ ಶರೀಫರ ಬದುಕಿನಲ್ಲಿ ಮಿಳಿತಗೊಂಡಿದ್ದವು. ಕನ್ನಡ ಧರ್ಮದ ಬಹು ಮುಖ್ಯ ಲಕ್ಷಣ, ಎಲ್ಲರನ್ನೂ ಒಳಗೊಳ್ಳುವ ಶರೀಫತನವೇ. ಪರ ಧರ್ಮವನ್ನೂ, ಪರ ವಿಚಾರಗಳನ್ನೂ ಸಹಿಸಿಕೊಳ್ಳುವುದೇ ನಿಜವಾದ ಧರ್ಮ ಎನ್ನುವ ಕವಿರಾಜಮಾರ್ಗಕಾರನ ಮಾತು ಕನ್ನಡ ಧರ್ಮದ ಲಕ್ಷಣವಾಗಿರುವಂತೆ, ಶರೀಫರ ಬದುಕಿನ ತತ್ವವೂ ಆಗಿದೆ. ಕನ್ನಡ ಸಾಹಿತ್ಯ ಪರಂಪರೆಯುದ್ದಕ್ಕೂ ಸ್ಪಷ್ಟವಾಗಿ ಕಾಣಿಸುವ 'ಎಲ್ಲರನ್ನೂ ಒಳಗೊಳ್ಳುವ' ವಿವೇಕದ ನೆಲೆಗಟ್ಟಿನ ಕನ್ನಡ ಧರ್ಮವನ್ನು ಅನುಸರಿಸುವುದಾದರೆ, ಹಾವೇರಿ ಸಮ್ಮೇಳನದಲ್ಲಿ ಮುಸ್ಲಿಂ ಸಮುದಾಯದ ಬರಹಗಾರರಿಗೆ ಪ್ರಾತಿನಿಧ್ಯ ದೊರೆಯಬೇಕಿತ್ತಲ್ಲವೆ?

ಕನಕ ಮತ್ತು ಸರ್ವಜ್ಞರೊಂದಿಗೆ ಶರೀಫರ ಹೆಸರನ್ನೂ ಸಮ್ಮೇಳನದ ಮುಖ್ಯ ವೇದಿಕೆಗೆ ಇರಿಸಲಾಗಿರುವುದನ್ನು ಪರಿಷತ್ತು ಹೆಮ್ಮೆಯಿಂದ ಹೇಳಿಕೊಂಡಿದೆ. ಹೆಮ್ಮೆ ಪಡಬೇಕಾದುದೇ. ಆದರೆ, ಹಿರಿಮೆ ಕೃತಿರೂಪದಲ್ಲೂ ಇರಬೇಕಲ್ಲವೆ? ಶರೀಫರಂಥ ಮಹಾನುಭಾವರ ಹೆಸರನ್ನು ವೇದಿಕೆಗೆ ಇರಿಸಿ, ಅಲ್ಲಿ ಮುಸಲ್ಮಾನ ಬರಹಗಾರರು ಇಲ್ಲವೆಂದರೆ, ಅದು ಶರೀಫತತ್ವಕ್ಕೆ ಅಪಚಾರ.

ಸದ್ಯದ ಸಾಹಿತ್ಯಿಕ ಸಂದರ್ಭದಲ್ಲಿ, ಮುಸ್ಲಿಂ ಬರಹಗಾರರನ್ನು ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ನೋಡುವ ಅಗತ್ಯವೇನೂ ಇಲ್ಲ. ಗುಣಮಟ್ಟದ ಅಳತೆಗೋಲಿನಲ್ಲಿ ನೋಡಿದರೆ, ಹೊಸ ತಲೆಮಾರಿನ ಮುಸ್ಲಿಂ ತರುಣ ತರುಣಿಯರು ದೊಡ್ಡ ಸಂಖ್ಯೆಯಲ್ಲಿ ಬರೆಯುತ್ತಿದ್ದಾರೆ; ಗುಣಮಟ್ಟದ ಸಾಹಿತ್ಯವನ್ನೂ ರಚಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಅವರನ್ನು ಹೊರಗಿಡುವುದು 'ಕನ್ನಡ ಧರ್ಮ'ಕ್ಕೆ ಬೆನ್ನು ಮಾಡಿದಂತೆ.


'ಗೋಷ್ಠಿಗಳಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವಲ್ಲಿ ಪ್ರಾದೇಶಿಕ ನ್ಯಾಯ, ಸಾಮಾಜಿಕ ನ್ಯಾಯ ಮತ್ತು ಪ್ರತಿಭಾ ನ್ಯಾಯಕ್ಕೆ ಮಹತ್ವ ನೀಡಿ, ಪಾರದರ್ಶಕವಾಗಿ ಆಯ್ಕೆ ಮಾಡಲಾಗಿದೆ' ಎಂದು ಹೇಳಿರುವ ಪರಿಷತ್ತಿನ ಅಧ್ಯಕ್ಷರು, ತಮ್ಮ ಆಯ್ಕೆಯನ್ನು ಪ್ರಜಾಸತ್ತಾತ್ಮಕ ಎಂದೂ ಹೇಳಿಕೊಂಡಿದ್ದಾರೆ. ವಿರೋಧಾಭಾಸ ಇರುವುದು ಇಲ್ಲಿಯೇ. ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ನ್ಯಾಯದ ಪಾಲನೆಯಾಗಿದೆ ಎನ್ನುತ್ತಲೇ, ಜಾತಿ–ಮತದ ಹಿನ್ನೆಲೆಯಲ್ಲಿ ಆಹ್ವಾನ ಪತ್ರಿಕೆ ನೋಡಬಾರದು ಎಂದೂ ಹೇಳುತ್ತಾರೆ. ಈ ದ್ವಂದ್ವ ನೋಡಿದರೆ, 'ಕನ್ನಡ ಧರ್ಮ' ಹಾಗೂ ಸಾಮಾಜಿಕ ನ್ಯಾಯದ ಕುರಿತು ಸಾಹಿತ್ಯ ಪರಿಷತ್ತು ಹೊಸ ವ್ಯಾಖ್ಯಾನವನ್ನೇ ಮಾಡಿಕೊಂಡಿರುವಂತೆ ಕಾಣಿಸುತ್ತದೆ. ತನ್ನ ನಡವಳಿಕೆಯನ್ನು ಪ್ರಜಾಸತ್ತಾತ್ಮಕ ಎಂದು ಹೇಳಿಕೊಳ್ಳುವವರು, ಆ ನಡವಳಿಕೆಯನ್ನು ಪ್ರಶ್ನಿಸಲಿಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯೇ ಅವಕಾಶ ಕಲ್ಪಿಸಿದೆ ಎನ್ನುವುದನ್ನು ಮರೆಯಬಾರದು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜವಾಬ್ದಾರಿ ಹುದ್ದೆಗಳಲ್ಲಿ ಇರುವವರು ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸಬೇಕು. ಪ್ರಶ್ನೆ ಅಥವಾ ಟೀಕೆಗಳನ್ನು ಪರಂಪರೆಗೆ ಮಾಡುವ ಅವಮಾನ ಎಂದು ಹೇಳುವುದು ಕೂಡ ಪ್ರಜಾಸತ್ತಾತ್ಮಕ ನಡವಳಿಕೆಯಲ್ಲ. ಹೀಗೆ ಮಾತನಾಡುವುದು ಅಧಿಕಾರದ ಭಾಷೆ, ರಾಜಕಾರಣದ ಭಾಷೆಯೇ ಹೊರತು ಜನಪರವಾದ ಭಾಷೆಯಲ್ಲ. ರಾಷ್ಟ್ರೀಯತೆ, ದೇಶಪ್ರೇಮದ ಹೆಸರಿನಲ್ಲಿ ವೈಚಾರಿಕ ಭಿನ್ನಮತವನ್ನು ಹತ್ತಿಕ್ಕಲು ಬಳಕೆಯಾಗುವ ಭಾಷೆಯೇ ಇದೀಗ 'ಕನ್ನಡ ಧರ್ಮ'ದ ಹೆಸರಿನಲ್ಲಿ ಬಳಕೆಯಾದಂತಿದೆ. ಅಧಿಕಾರದ ಭಾಷೆ 'ಅವಕಾಶ ನೀಡು'ವ ಧಾಟಿಯದ್ದಾದರೆ, ಅಂತಃಕರಣದ ಭಾಷೆ 'ಒಳಗೊಳ್ಳು'ವ ಸ್ವರೂಪದ್ದಾಗಿರುತ್ತದೆ.

ಸಾಹಿತ್ಯದ ಸಾರ್ಥಕತೆ ಇರುವುದು ಎಲ್ಲರನ್ನೂ ಒಳಗೊಳ್ಳುವುದರಲ್ಲಿ. ಈ ಒಳಗೊಳ್ಳುವ ಮನೋಧರ್ಮವೇ ಇಲ್ಲದೆಹೋದಲ್ಲಿ, ಸಾಹಿತ್ಯಕ್ಕೆ ಅರ್ಥವೂ ಇಲ್ಲ, ಅದರ ಅಗತ್ಯವೂ ಇಲ್ಲ. ಸಾಹಿತ್ಯ ಸಮ್ಮೇಳನದಲ್ಲಿ ಎಲ್ಲ ಸಮುದಾಯದವರಿಗೆ ಅವಕಾಶ ಇರಬೇಕು ಎಂದು ನಿರೀಕ್ಷಿಸುವುದು ಸಾಹಿತ್ಯದಿಂದ ಸಾಧ್ಯವಾಗುವ ಬಹುತ್ವ–ಮಾತೃತ್ವದ ಅಪೇಕ್ಷೆಯೇ ಹೊರತು, ಜಾತೀಯತೆಯಲ್ಲ. ಜಾತಿಯ ನಿಜವಾದ ಮೀರುವಿಕೆ ಸಾಧ್ಯವಾಗುವುದು ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಲ್ಲಿ.

1957ರಲ್ಲಿ, ಧಾರವಾಡದಲ್ಲಿ ನಡೆದ 39ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ, 'ಸಾಹಿತಿ ಅಥವಾ ಲೇಖಕನಾಗುವವನು ತನ್ನ ಸ್ವಂತ ಜೀವನದಲ್ಲಿ ವಿಶಾಲ ಮನೋಧರ್ಮವನ್ನು ಸ್ಥಾಪಿಸಿಕೊಳ್ಳುವುದು ಅಗತ್ಯ. ಏಕೆಂದರೆ ನಮ್ಮ ತೇಗಿನಲ್ಲಿ ಹೊರಬೀಳುವುದು ನಾವು ತಿಂದುದರ ವಾಸನೆ ತಾನೆ' ಎಂದು ಕುವೆಂಪು ಹೇಳಿದ್ದರು. 'ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ದೊಡ್ಡದಾಗದು' ಎನ್ನುವುದು ಶಿವರಾಮ ಕಾರಂತರ ಮಾತು. ಈ ವಿಶಾಲ ಮನೋಧರ್ಮ ಸಾಹಿತಿಗಳಿಗಷ್ಟೇ ಅಲ್ಲ, ಸಾಹಿತ್ಯ ಸಂಘಟಕರಿಗೂ ಸಹೃದಯರಿಗೂ ಅಗತ್ಯ. ಮನೋಧರ್ಮ ಸಂಕುಚಿತವಾದರೆ, ನಮ್ಮ ತೇಗಿನ ವಾಸನೆ ಲೋಕಕ್ಕೆ ತಿಳಿಯಲು ಹೆಚ್ಚು ಸಮಯ ಬೇಕಾಗಿಲ್ಲ.

ಧಾರವಾಡ ಸಮ್ಮೇಳನದ ಭಾಷಣದಲ್ಲಿಯೇ, 'ಜಯ ಭಾರತ ಜನನಿಯ ತನುಜಾತೆ' ಗೀತೆಯನ್ನು ಕುವೆಂಪು ಉಲ್ಲೇಖಿಸಿದ್ದರು. ಬಹುತ್ವದ ಚೆಲುವನ್ನು ಪ್ರತಿಪಾದಿಸುವ ಆ ಕನ್ನಡಗೀತೆಯೀಗ ನಾಡಗೀತೆಯೂ ಹೌದು; 'ಕನ್ನಡ ಧರ್ಮ'ದ ವ್ಯಾಖ್ಯಾನವೂ ಹೌದು. ಸಮ್ಮೇಳನದಲ್ಲಿ ನಾಡಗೀತೆ ಮೊಳಗುವಾಗ, 'ಸರ್ವ ಜನಾಂಗದ ಶಾಂತಿಯ ತೋಟ', 'ಹಿಂದೂ ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ' ಎನ್ನುವ ಸಾಲುಗಳೂ ಇರುತ್ತವಲ್ಲವೇ? ಆ ಸಾಲುಗಳು ವರ್ತಮಾನದ 'ಕನ್ನಡ ಧರ್ಮ'ಕ್ಕೆ ಹೊಂದುವುವೋ ಇಲ್ಲವೋ?



ಚುರುಮುರಿ



ಶೀತ, ಗೋತಾ!

• ಬಿ.ಎನ್.ಮಲ್ಲೇಶ್

'ಗುರು, ಈ ಕೊರೊನಾ ಮೂಗಿನ್ಯಾಗಿರ್ತತಾ?' ಗುಡ್ಡೆ ತೆಪರೇಸಿಯನ್ನ ಕೇಳಿದ.

'ನಂಗೊತ್ತಿಲ್ಲಪ್ಪ, ಯಾಕೆ?'

'ಅಲ್ಲಲೆ, ಈಗ ಕೊರೊನಾಕ್ಕೆ ಮೂಗಿನಾಗೆ ಹಾಕೋ ಲಸಿಕೆ ಕಂಡುಹಿಡಿದಾರಂತಲ್ಲ, ಅದ್ಕೆ ಕೇಳಿದೆ'.

'ಕೊರೊನಾ ನಮ್ ಮೈಯಾಗೆ ಹೊಕ್ಕೋಳ್ಳೋದು ಮೂಗು ಬಾಯಿ ಮೂಲಕನೇ. ಅದ್ಕೇ ಮೂಗಿನಾಗೆ ಹಾಕ್ತಾರೆ ಅನ್ಸತ್ತೆ. ವೈರಸ್ಸು ಬಾಗಿಲ್ಯಾಗೇ ಸಾಯ್ಲಿ, ಒಳಾಕೆ ಹೋಗಾದು ಬ್ಯಾಡ ಅಂತ' ತೆಪರೇಸಿ ವಿವರಿಸಿದ.

'ಕರೆಕ್ಟ್, ಮೂಗು ಬಾಯಿ ಶುದ್ಧ ಇದ್ರೆ ಲೋಕಾನೇ ಗೆಲ್ಲಬಹುದು ಅಂತ ನಮ್ ಹಿರೇರು ಇದ್ಕೇ ಹೇಳಿರೋದು' ದುಬ್ಬೀರ ನಕ್ಕ.

'ಅಂದ್ರೇ?'

'ಅಂದ್ರೇ ಎಲ್ಲಿ ಬೇಕಲ್ಲಿ ಮೂಗು ತೂರಿಸೋದು, ಬಾಯಿಗೆ ಬಂದಂಗೆ ಮಾತಾಡೋದು ಮಾಡಿದ್ರೆ ಹಿಂಗೆ ಬರಬಾರ್ದ ರೋಗ ಬರ್ತಾವೆ ಅಂತ'.

'ನೀ ಯಾರಿಗೆ ಹೇಳ್ತಿದಿ ಇದನ್ನೆಲ್ಲ?' ಗುಡ್ಡೆಗೆ ಸಿಟ್ಟು ಬಂತು.

'ನಿಂಗಲ್ಲಲೆ, ಲೋಕಾರೂಢಿ ಮಾತೇಳಿದೆ. ಮನುಷ್ಯ ದೇಹದಾಗಿನ ಅತೀ ವೀಕ್ ಪಾರ್ಟ್‌ಗಳು ಯಾವು ಗೊತ್ತಾ? ಕಣ್ಣು, ಕಿವಿ, ಮೂಗು, ಬಾಯಿ. ಇದು ವೈರಸ್‌ಗಳಿಗೂ ಗೊತ್ತಾಗೇತಿ. ಅದ್ಕೇ ಅಲ್ಲಿಂದಾನೇ ಅವು ಒಳಕ್ಕೆ ಬರ್ತಾವು'.

'ಅಲ್ಲ, ನೀನು ರೋಗದ ಬಗ್ಗೆ ಮಾತಾಡ್ತಿದೀಯೋ, ಬೇರೇನರೆ ಹೇಳ್ತಿದೀಯೋ ತಿಳೀವಲ್ದಪ್ಪ...' ಕೊಟ್ರೇಶಿ ತಲೆ ಕೆರೆದುಕೊಂಡ.

'ನೋಡಲೆ, ಮಾತು, ನೋಟ ಸರಿ ಇದ್ರೆ ಎಲ್ರು ಗೌರವ ಕೊಡ್ತಾರೆ. ಅದು ಬಿಟ್ಟು ಯಾವುದೋ ವಾಸನಿ ಹಿಡ್ಕಂಡು ಎಲ್ಲಿಗೋ ಹೋಗೋದು, ಯಾರದೋ ಮಾತು ಕೇಳ್ಕಂಡು ಏನರೆ ಮಾಡೋದು ಮಾಡಿದ್ರೆ ಜನ ನುಗ್ಗರಿಯಂಗೆ ಹೊಡೀತಾರೆ, ಆಮೇಲೆ ಮೂಗಿನಾಗೆ ಹತ್ತಿ ಇಡಿಸ್ಕಾಬೇಕಾಕ್ಕತಿ...'

'ಹೌದಲ್ಲಲೆ, ಕಿವ್ಯಾಗೆ ಹತ್ತಿ ಇಟ್ರೆ ಶೀತ, ಮೂಗಿನ್ಯಾಗೆ ಇಟ್ರೆ ಗೋತಾ... ಅಲ್ವಾ?' ಕೊಟ್ರೇಶಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಸಂವಿಧಾನದ ಆಶಯ ಅರಿಯೋಣ

ಸಾಮಾಜಿಕ ಸಮಾನತೆಯ ಸದುದ್ದೇಶಕ್ಕೆ ಕುಂದು ಉಂಟಾಗದಂತೆ ನೋಡಿಕೊಳ್ಳಬೇಕಾದದ್ದು ಸಂವೇದನಾಶೀಲ ಸಮಾಜದ ಜವಾಬ್ದಾರಿ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಕಡುಕಷ್ಟದಲ್ಲಿ ಬದುಕು ಕಟ್ಟಿಕೊಳ್ಳುತ್ತಿದ್ದ ಆ ತಾಯಿಗೆ ಇಬ್ಬರು ಮಕ್ಕಳು. ದೊಡ್ಡವನು ಆರೋಗ್ಯವಂತ, ದೃಢಕಾಯನಾಗಿದ್ದರೆ ಚಿಕ್ಕವನಿಗೆ ಹುಟ್ಟಿನಿಂದಲೇ ದೈಹಿಕ ದೌರ್ಬಲ್ಯಗಳು. ಸಾವಿನಂಚಿನಲ್ಲಿ ಹೋರಾಡುತ್ತಿರುವ ಕಿರಿಮಗನನ್ನು ಉಳಿಸಿಕೊಳ್ಳಲು ಅಮ್ಮನದ್ದು ನಿತ್ಯವೂ ಹರಸಾಹಸ. ಕಿರಿಯವ ದೈಹಿಕವಾಗಿ ಗಟ್ಟಿಗೊಳ್ಳುವವರೆಗೂ ಅವನಿಗೆ ಪೌಷ್ಟಿಕ ಆಹಾರ-ಆರೈಕೆಯ ತುರ್ತು ಅವಶ್ಯಕತೆ ಇತ್ತು. ಆದರೆ ಬಡ ತಾಯಿಜೀವಕ್ಕೆ ಆಯ್ಕೆಗಳಿಲ್ಲ. ತಿನ್ನಲು ಇದ್ದುದರಲ್ಲಿಯೇ ಹಿರಿಮಗನ ಪಾಲಿನ ರೊಟ್ಟಿಯನ್ನು ಸ್ವಲ್ಪ ಚಿವುಟಿ ಕಿರಿಮಗನಿಗೆ ಹೆಚ್ಚುವರಿ ಕೊಡುತ್ತಿದ್ದಳು. ಆತನನ್ನು ಬದುಕಿಸಿಕೊಳ್ಳುವುದಕ್ಕಾಗಿ!

ಹಾಗೆ ಒಂದು ದಿನ, ದೊಡ್ಡವನು ತನ್ನ ಪಾಲಿನ ರೊಟ್ಟಿಚೂರನ್ನು ತಮ್ಮನಿಗೆ ಕೊಡುತ್ತಿರುವ ಬಗ್ಗೆ ಅಮ್ಮನಲ್ಲಿ ತಕರಾರು ತೆಗೆದ. ನಿಜ, ಅಲ್ಲಿ ಅಮ್ಮ ಮಾಡುತ್ತಿರುವುದು ತಾರತಮ್ಯವೇ! ಆದರೆ ಅದರ ಹಿಂದೊಂದು ಘನವಾದ ಉದ್ದೇಶವಿತ್ತು. ಹೆತ್ತಕರುಳಿಗೆ ತನ್ನ ಕರುಳ ಕುಡಿಗಳಿಬ್ಬರೂ ಒಂದೇ, ಇಬ್ಬರ ಮೇಲೂ ಅದೇ ಪ್ರೀತಿ. ಇಬ್ಬರಲ್ಲಿ ಯಾರನ್ನೂ ಕಳೆದುಕೊಳ್ಳಲು ಬಯಸದ ಹೆತ್ತಮ್ಮನ ಜಾಗದಲ್ಲೀಗ ನಮ್ಮ ಸಂವಿಧಾನವಿದೆ. ಸದೃಢ ಮಗನಿಂದ ಚಿವುಟಿ ಕೊಡುವ ಸಣ್ಣ ರೊಟ್ಟಿಯ ತುಣುಕೇ ಮೀಸಲಾತಿ!

ನಮ್ಮ ಶಿಕ್ಷಣ, ಆಹಾರ, ಆರೋಗ್ಯದ ಗುಣಮಟ್ಟದ ಬಗ್ಗೆ ಚಿಂತಿಸಬೇಕಾದ ಹೊತ್ತಿದು. ಜಾತೀಯತೆ, ನಿರುದ್ಯೋಗ, ಪರಿಸರಮಾಲಿನ್ಯ, ಕೃಷಿ ಬಿಕ್ಕಟ್ಟುಗಳು ಹೆಮ್ಮರವಾಗಿ ಬೆಳೆಯುತ್ತಿವೆ. ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇಂತಹ ವಿಷಮ ಪರಿಸ್ಥಿತಿಗಳ ಬಗ್ಗೆ ಜಾಗೃತಿ ಮೂಡಿಸಬೇಕಾದ ಶಿಕ್ಷಿತ ಸಮಾಜವಿಂದು, ಖಾಸಗೀಕರಣ ಇನ್ನಿಲ್ಲದ ವೇಗ ಪಡೆದುಕೊಂಡಿರುವ ಈ ಸಂದರ್ಭದಲ್ಲಿ ದೀರ್ಘಕಾಲಿಕವಾಗಿ ಅಷ್ಟೇನೂ ಮಹತ್ವ ಹೊಂದಿರುವ ಸಾಧ್ಯತೆ ಇಲ್ಲದ ಮೀಸಲಾತಿಗಾಗಿ ಹೋರಾಡುತ್ತಿರುವ ಪರಿಯು ನಿಜಕ್ಕೂ ಆತಂಕ ಹುಟ್ಟಿಸುತ್ತದೆ. ಮೈಸೂರು ಅರಸರ ಕಾಳಜಿ, ಅಂಬೇಡ್ಕರ್ ಅವರ ಇಚ್ಛಾಶಕ್ತಿಯಲ್ಲಿ ಮೂಡಿದ್ದ ಭರವಸೆಗಳು ಬತ್ತದಂತೆ ಮೀಸಲಾತಿಯ ಫಲಾನುಭವಿಗಳು ಸ್ವಯಂಪ್ರೇರಿತರಾಗಿ ವಂಚಿತರಿಗೆ ಅವಕಾಶ ತೋರುವ ಔದಾರ್ಯ ಮೆರೆಯಬೇಕಾದ ಸಂದರ್ಭವಿದು. ವಾಸ್ತವದಲ್ಲಿ ಮೀಸಲಾತಿ ಅನ್ವಯವಾಗುತ್ತಿದ್ದ ಕೇವಲ ಶೇ 7ರಷ್ಟಿದ್ದ ಸರ್ಕಾರಿ ಉದ್ಯೋಗಗಳು ಪ್ರಸ್ತುತ ಖಾಸಗೀಕರಣದ ಭರಾಟೆಯಲ್ಲಿ ಗಣನೀಯವಾಗಿ ಕುಸಿಯುತ್ತಿರುವ ಹೊತ್ತಿದು.

ಇರುವುದರಲ್ಲಿ ಬಲಿಷ್ಠವೆನಿಸಿರುವ ಸಮುದಾಯಗಳ ರಾಜಕೀಯ ಮುಖಂಡರು ಮಠಾಧೀಶರ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವುದು ವಿಷಾದಕರ. ತಮಗಿರುವ ಜಾತಿ ಬಲವನ್ನೇ ಮುಂದೆ ಮಾಡಿ, ನಿಮ್ನವರ್ಗಗಳಿಗೆ ಅವಶ್ಯವಾಗಿ ತಲುಪಬೇಕಾದ ಸವಲತ್ತುಗಳನ್ನು ಕಿತ್ತುಕೊಳ್ಳುವ ಸ್ವಾರ್ಥ ಮತ್ತು ಕಪಟತನದ ಹುನ್ನಾರಗಳನ್ನು ಮುನ್ನೆಲೆಗೆ ತಂದಿರುವುದು ಸಮರ್ಥನೀಯವಲ್ಲ. ಅಷ್ಟಕ್ಕೂ ಮೀಸಲಾತಿ ಎಂಬುದೊಂದು 'ಬಡತನ ನಿರ್ಮೂಲನೆ' ಕಾರ್ಯಕ್ರಮವಾಗಿರದೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಸಮಾನ ಪ್ರಾತಿನಿಧಿತ್ವವನ್ನು ಖಾತರಿಪಡಿಸುವ ಯೋಜನೆ ಎಂಬುದನ್ನು ಮೊದಲು ಎಲ್ಲರೂ ಅರಿಯಬೇಕಿದೆ.

ಅದೊಂದು ವ್ಯಕ್ತಿತ್ವ ವಿಕಸನ ಶಿಬಿರ. ಎಂಟು– ಹತ್ತು ಸಾಲುಗಳಲ್ಲಿ ಶಿಬಿರಾರ್ಥಿಗಳು ಕುಳಿತಿದ್ದರು. ದಿನದ ಕೊನೆಗೆ ನಿರ್ವಾಹಕರು ಸರಳ ಸ್ಪರ್ಧೆಯೊಂದನ್ನು ಏರ್ಪಡಿಸಿದ್ದರು. ದಿನಪತ್ರಿಕೆಯ ಹಾಳೆಯೊಂದನ್ನು ಎಲ್ಲರಿಗೂ ನೀಡಿ ಉಂಡೆ ಕಟ್ಟಲು ತಿಳಿಸಿದರು. ಮೂಲೆಯಲ್ಲಿದ್ದ ಕಸದ ಬುಟ್ಟಿಯನ್ನು ತಮ್ಮೆದುರು ತಂದಿಟ್ಟುಕೊಂಡು ಎಲ್ಲರೂ ತಾವು ಕೂತ ಜಾಗದಿಂದ ಕದಲದೇ ಕಾಗದದ ಉಂಡೆಗಳನ್ನು ಕಸದಬುಟ್ಟಿಗೆ ಗುರಿಯಿಟ್ಟು ಎಸೆಯಲು ಸೂಚಿಸಿದರು. ಮುಂದಿನ ಸಾಲಿನ ಎಲ್ಲರೂ ಬುಟ್ಟಿಯೊಳಗೆ ನಿಖರವಾಗಿ ಕಾಗದದ ಉಂಡೆಗಳನ್ನು ಎಸೆದಿದ್ದರು. ನಂತರದ ಎರಡು ಸಾಲಿನವರೂ ಹೆಚ್ಚೂಕಮ್ಮಿ ಎಸೆದಿದ್ದರು, ಒಬ್ಬಿಬ್ಬರ ವಿನಾ. ಹಿಂಬದಿ ಸಾಲಿನವರಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಎಸೆಯಲು ಸಫಲರಾದರೆ, ಕೊನೆಯ ಎರಡು ಸಾಲುಗಳಲ್ಲಿ ಕೂತವರ್‍ಯಾರಿಗೂ ಬುಟ್ಟಿಯೊಳಗೆ ಬೀಳುವಂತೆ ಕಾಗದದುಂಡೆಗಳನ್ನು ಎಸೆಯಲಾಗಿರಲಿಲ್ಲ!



ಇಂತಹ ವಿಭಿನ್ನ ಫಲಿತಾಂಶಕ್ಕೆ ಕಾರಣವಿಷ್ಟೇ. ಎದುರಿನ ಎರಡು–ಮೂರು ಸಾಲಿನವರ ಪಾಲಿಗೆ ಗುರಿಯಾಗಿರಿಸಿದ್ದ ಬುಟ್ಟಿ ಹತ್ತಿರವಿತ್ತು ಮತ್ತು ಸ್ಪಷ್ಟವಾಗಿ ತೋರುತ್ತಿತ್ತು. ಅವರ ಹಿಂದಿನ ಸಾಲಿನವರಿಗೆ ಬುಟ್ಟಿಯ ದೂರ ಹೆಚ್ಚಿಲ್ಲದಿದ್ದರೂ ಎದುರಿನವರ ತಲೆ ಅಡ್ಡವಾದ್ದರಿಂದ ಎಸೆಯಲು ಸಣ್ಣ ಅಡಚಣೆಯಾಗಿತ್ತು. ಹಾಗಾಗಿ ಎಸೆದಿದ್ದರಲ್ಲಿ ಕೆಲವು ಗುರಿಮುಟ್ಟದೇ ಹೋಗಿದ್ದವು. ಆದರೆ, ಕೊನೆಯ ಸಾಲಿನವರಿಗೆ ಬುಟ್ಟಿಯು ಕಾಗದದುಂಡೆ ತಲುಪಲಾರದಷ್ಟು ದೂರವಿತ್ತು, ಮೇಲಾಗಿ ಅವರಿಗೆಲ್ಲ ಅವರ ಗುರಿಯೇ ಕಾಣುತ್ತಿರಲಿಲ್ಲ! ಗುರಿಯೇ ತೋರದ ಮೇಲೆ ಗೆಲ್ಲುವ ಮಾತೆಲ್ಲಿ?!

ಹಾಗೆಯೇ ಭಿನ್ನಸ್ತರದ ಸಾಮಾಜಿಕ ಹಿನ್ನೆಲೆಯುಳ್ಳ ನಮ್ಮ ಬಹುತ್ವ ಭಾರತದಲ್ಲಿ ಎಲ್ಲರೂ ಗೆಲ್ಲಬೇಕೆಂಬುದು ಸಂವಿಧಾನವೆಂಬ ಅಂತರಾತ್ಮದ ಆಶಯ. ಮಾನವೀಯ ನೆಲೆಯಲ್ಲಿ ಸಾಮಾಜಿಕ ಸಮಾನತೆಯನ್ನು ಸಾಕಾರಗೊಳಿಸುವ ಕನಸು ಕಂಡು, ದೂರದೃಷ್ಟಿತ್ವದ ಹಿರಿಯರನೇಕರು ಜಾರಿಗೊಳಿಸಿದ ಸಂವಿಧಾನ ಮತ್ತು ಸಂಘಟಿಸಿದ ಸಮಾಜ ಸುಧಾರಣಾ ಕ್ರಮಗಳಲ್ಲಿ ಎಲ್ಲರನ್ನೂ ಒಳಗೊಳ್ಳುವ ಮತ್ತು ಕೂಡಿಬೆಳೆಯುವ ಸಾಧ್ಯತೆಗಳು ತೆರೆದುಕೊಂಡಿವೆ. ಆ ಸದುದ್ದೇಶ ಮಣ್ಣುಪಾಲಾಗದಂತೆ ನೋಡಿಕೊಳ್ಳಬೇಕಾದದ್ದು ಸಂವೇದನಾಶೀಲ ಸಮಾಜದ ಜವಾಬ್ದಾರಿ ಮತ್ತು ಆದ್ಯ ಕರ್ತವ್ಯವಾಗಿದೆ. ಸಾಮಾಜಿಕ ನ್ಯಾಯವು ಆದರ್ಶ ಸಮಾಜದ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಕಳಕಳಿಯಾಗಿ ಉಳಿಯಬೇಕಿದೆ.

ವಾಚಕರ ವಾಣಿ

ವಿ.ವಿ: ಸಂಖ್ಯೆಯಲ್ಲಿ ಹೆಚ್ಚಳ, ಗುಣಮಟ್ಟದಲ್ಲಿ ಕುಸಿತ

ರಾಜ್ಯ ಸರ್ಕಾರವು ಯಾರನ್ನು ಮೆಚ್ಚಿಸುವ ಸಲುವಾಗಿ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಹೊರಟಿದೆ ಎಂಬ ಎಂ.ಎಸ್.ರಘುನಾಥ್ ಅವರ ಪ್ರಶ್ನೆ (ಸಂಗತ, ಡಿ. 27) ಸಕಾಲಿಕವಾಗಿದೆ. ಒಂದು ಕಾಲದಲ್ಲಿ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ಬೆರಳೆಣಿಕೆಯಷ್ಟಿದ್ದು, ಇದ್ದುದರಲ್ಲೇ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದವು. ಕಾಲಕ್ರಮೇಣ ಅವುಗಳ ಸಂಖ್ಯೆ ಹೆಚ್ಚಾಗುತ್ತಾ ಗುಣಮಟ್ಟ ಕ್ಷೀಣಿಸುತ್ತಾ ಬಂದಿತು. ಬೋಧನೆಯ ಮಟ್ಟ ಕುಸಿಯುತ್ತಿರುವುದು, ವಿದ್ಯಾರ್ಜನೆ ಬಗೆಗಿನ ಆಸಕ್ತಿ ಕಡಿಮೆಯಾಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ.

ರಮೇಶ್, ಬೆಂಗಳೂರು

ಭ್ರಷ್ಟಾಚಾರ: ಇಲ್ಲೂ ಆಗಲಿ 'ಮೇಜರ್ ಸರ್ಜರಿ'

ದೂರಸಂಪರ್ಕ ಇಲಾಖೆಯ ಹತ್ತು ಕಳಂಕಿತ ಹಿರಿಯ ಅಧಿಕಾರಿಗಳನ್ನು ಇತ್ತೀಚೆಗೆ ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ. ಈ ಮೂಲಕ, ಭ್ರಷ್ಟಾಚಾರವನ್ನು ಕಿಂಚಿತ್ತೂ ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಕೇಂದ್ರ ಸರ್ಕಾರ ರವಾನೆ ಮಾಡಿದೆ. 2014ರಿಂದ ನಿಷ್ಕ್ರಿಯತೆ ಮತ್ತು ಅಪ್ರಾಮಾಣಿಕತೆಗಾಗಿ ಸುಮಾರು 400 ಅಧಿಕಾರಿಗಳನ್ನು ಕೇಂದ್ರವು ನಿವೃತ್ತಿಗೊಳಿಸಿದೆ. ಕರ್ನಾಟಕದಲ್ಲಿಯೂ ಇಂತಹ ಒಂದು 'ಮೇಜರ್ ಸರ್ಜರಿ'ಯ ಅಗತ್ಯವಿದೆ.

ಲಂಚ ಕೊಡದೆ ಯಾವುದೇ ಕಡತ ಮುಂದೆ ಹೋಗುವುದಿಲ್ಲ ಎಂದು ಹೈಕೋರ್ಟ್ ಇತ್ತೀಚೆಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಕೆಲವು ಐಎಎಸ್ ಅಧಿಕಾರಿಗಳು ನಿವೃತ್ತಿಯ ವೇಳೆಗೆ 500 ಕೋಟಿ ರೂಪಾಯಿ ಬೆಲೆಬಾಳುತ್ತಾರೆ ಎಂದು ಶಾಸಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದರು. ಬಹುತೇಕ ಅಧಿಕಾರಿಗಳು ಮತ್ತು ನೌಕರರ ಹೊಣೆಗೇಡಿತನದಿಂದಾಗಿ ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಒಂದು ಪ್ರಹಸನದ ಮಟ್ಟಕ್ಕೆ ಕುಸಿದಿರುವುದು ಸಾಮಾನ್ಯ ಜನರ ಅನುಭವಕ್ಕೆ ಬಂದಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯಲ್ಲಿ ಅದಕ್ಷರು ಮತ್ತು ಭ್ರಷ್ಟರ ಕಡ್ಡಾಯ ನಿವೃತ್ತಿಗೆ ಅವಕಾಶ ಇದೆ.

ಸಿ.ರುದ್ರಪ್ಪ, ಬೆಂಗಳೂರು

ಮೂದಲಿಕೆಗೆ ಬ್ರೇಕ್ ಬೀಳಬಹುದೇ?

'ಸೈಜುಗಲ್ಲು ಹೊತ್ತೋರ ಮೇಲೆತ್ತೋರ್‍ಯಾರು?' ಶೀರ್ಷಿಕೆಯ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಡಿ. 29) ಹೃದಯಸ್ಪರ್ಶಿ ಆಗಿತ್ತು. ಧರ್ಮರಾಯನ ರೂಪಕದ ಸಾಲುಗಳು ತಾಯಿ ಹೃದಯದ್ದಾಗಿವೆ. ಮನೆಯಲ್ಲಿರುವ ಎಲ್ಲರ ಊಟವಾದ ಮೇಲೆ ಊಟ ಮಾಡುವುದು ಈ ನೆಲದ ಹೆಣ್ಣುಕುಲದ ಗುಣವಿರಬಹುದು.

ಶೋಷಿತ ಸಮುದಾಯಗಳನ್ನು ನೋಡಿ 'ಇವರಿಗೆ ಇನ್ನೂ ಎಷ್ಟು ದಿನ ಮೀಸಲಾತಿ ಕೊಡುವುದು' ಎಂದು ಮೂದಲಿಸುತ್ತಿದ್ದ ಸಮುದಾಯಗಳೇ ಈಗ ತಮಗೂ ಮೀಸಲಾತಿ ಕೇಳುತ್ತಿರುವುದರಿಂದ ಇಷ್ಟೂ ದಿನಗಳ ಕಾಲ ಮಾಡಿದ ಮೂದಲಿಕೆಗೆ ಇನ್ನಾದರೂ ಬ್ರೇಕ್ ಬೀಳಬಹುದೇ? ಲೇಖನ ಓದಿ ಮುಗಿಸಿದಾಗ, ಬಸವಣ್ಣನವರ ಒಂದು ವಚನ ನೆನಪಾಯಿತು. ಅದರ ಸಾರಾಂಶ ಹೀಗಿದೆ: ಬಸವಣ್ಣನವರ ಪತ್ನಿ ನೀಲಾಂಬಿಕೆ, ಗಂಡನೆಂಬ ಪ್ರೇಮದಿಂದ ಪತಿಗೆ ಊಟವನ್ನು ಸ್ವಲ್ಪ ಜಾಸ್ತಿ ಬಡಿಸುತ್ತಾರೆ. ತಕ್ಷಣ ಬಸವಣ್ಣನವರು 'ನನ್ನ ಹೊಟ್ಟೆಗೆ ಎಷ್ಟು ಬೇಕೊ ಅಷ್ಟು ಬಡಿಸಬೇಕು. ಊಟ ಮಾಡಬೇಕು. ಅಗತ್ಯಕ್ಕಿಂತ ಹೆಚ್ಚು ಒಂದು ತುತ್ತಲ್ಲ, ಒಂದು ಅಗುಳು ಕೂಡ ನನ್ನದಲ್ಲ' ಎನ್ನುತ್ತಾರೆ. ಈ ಮಾತು ಪ್ರಕೃತಿಯ ನುಡಿಯಂತೆ ಇದೆ. ಇದು ನೀಲವ್ವನ ಕಣ್ಣು ತೆರೆಸಿತು. ಹಾಗೇ ನಮ್ಮೆಲ್ಲರ ಕಣ್ಣು ಕೂಡ ತೆರೆಸಬೇಕಲ್ಲ. ಯಾರ ಅನ್ನವನ್ನು ಯಾರೂ ಕದಿಯದಂತೆ ಎಲ್ಲರನ್ನೂ ತಾಯಿ ಮಮತೆಯಿಂದ ನೋಡಿಕೊಳ್ಳಬೇಕಾದುದು ನಮ್ಮ ನಾಗರಿಕ ಸಮಾಜ ಮತ್ತು ನಮ್ಮನ್ನು ಆಳುವ ಸರ್ಕಾರದ ಹೊಣೆ. ಇಂತಹ ಬರಹಗಳನ್ನು ಓದಿದ ಬಳಿಕ ಕನಿಷ್ಠ ನಮ್ಮ ನೆರಳಿಗಾದರೂ ಅಂಜಿ, ಆಚರಣೆಗೆ ತಂದುಕೊಳ್ಳುವುದರಲ್ಲಿ ಮನುಷ್ಯನ ಘನತೆ ಇದೆ.

ಸುಬ್ಬು ಹೊಲೆಯಾರ್, ಬೆಂಗಳೂರು

ಹೈನುಗಾರನದೂ ಮೂಕವೇದನೆ

ಜಾನುವಾರುಗಳಿಗೆ ವ್ಯಾಪಿಸಿದ ಚರ್ಮಗಂಟು ರೋಗದ ಬಗೆಗಿನ ಲೇಖನದಲ್ಲಿ (ಸಂಗತ, ಡಿ. 28) ಡಾ. ಮುರಳೀಧರ ಕಿರಣಕೆರೆ ಅವರು ರೈತನ ಸಂದೇಹಕ್ಕೆ ಬಹುಮಟ್ಟಿನ ಸಾಂತ್ವನವನ್ನೇನೋ ನೀಡಿದ್ದಾರೆ. ಆದರೆ ಈ ರೋಗದ ವ್ಯಾಪಕತೆಯಿಂದಾಗಿ ಹೈನುಗಾರ ಇನ್ನೊಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದಾನೆ.

ತನ್ನ ಎರಡೋ ಮೂರೋ ಹಸುಗಳು ಕಡಿಮೆ ದಿನಗಳ ಅಂತರದಲ್ಲಿ ಕರು ಹಾಕಿದಾಗ, ಮುಂದಿನ ಬೇಸಿಗೆಯಲ್ಲಿ ಉಂಟಾಗಬಹುದಾದ ನೀರು ಹಾಗೂ ಹಸಿರು ಹುಲ್ಲಿನ ಕೊರತೆಯನ್ನು ಮನಗಂಡು, ಒಂದು ಹಸುವನ್ನಾದರೂ ಮಾರೋಣವೆಂದರೆ ಪ್ರಸ್ತುತ ಕಾಲಘಟ್ಟದಲ್ಲಿ ಸರ್ಕಾರದ ಕಟ್ಟುನಿಟ್ಟಿನ ನಿಯಮ ಅಡ್ಡಬರುತ್ತದೆ. ರೋಗದ ಕಾರಣದಿಂದ ದನ ಖರೀದಿಗೆ ಇನ್ನೊಬ್ಬ ರೈತ ಹಿಂದೇಟು ಹಾಕುವುದು ಸಹಜವೇ. ಪರಿಣಾಮ ತನ್ನನ್ನೂ ಬಾಧಿಸುವ ವಯೋಸಹಜವಾದ ಕೈ, ಕಾಲು, ಮಂಡಿ ನೋವಿನಿಂದಾಗಿ ಹಾಗೂ ಕೂಲಿಯಾಳಿನ ಅಲಭ್ಯತೆಯಂತಹ ಹಲವು ಸಮಸ್ಯೆಗಳ ಸುಳಿಯಲ್ಲಿ ಸ್ವತಃ ಸಿಲುಕಿದ ಹೈನುಗಾರನದೂ ಮೂಕವೇದನೆಯೇ!

ಗೋಪು ಗೋಖಲೆ, ಶಿಶಿಲ, ಬೆಳ್ತಂಗಡಿ

ವಿದ್ಯಾರ್ಥಿವೇತನಕ್ಕೆ ಅರ್ಜಿ: ಅಡ್ಡಿ ನಿವಾರಣೆಯಾಗಲಿ

ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್ (ಎಸ್‌ಎಸ್‌ಪಿ) ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತಿವರ್ಷ ಒಂದಿಲ್ಲೊಂದು ಸಮಸ್ಯೆ ಎದುರಿಸುವುದು, ಸರ್ಕಾರ ಸಮಯಾವಕಾಶ ವಿಸ್ತರಿಸುವುದು ಸಾಮಾನ್ಯ ಎನ್ನುವಂತಾಗಿದೆ. ಈ ವರ್ಷ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಕುಟುಂಬದ ಗುರುತಿನ ಚೀಟಿ ಕಡ್ಡಾಯಗೊಳಿಸಲಾಗಿದೆ. ಇದರಿಂದ ಅನೇಕ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ವಂಚಿತರಾಗುವ ಆತಂಕ ಎದುರಿಸುತ್ತಿದ್ದಾರೆ. ಏಕೆಂದರೆ ಕುಟುಂಬದ ಐ.ಡಿ ಇಲ್ಲದ ವಿದ್ಯಾರ್ಥಿಗಳಿಗೆ ಇದುವರೆಗೂ ಪೋರ್ಟಲ್‌ನಲ್ಲಿ ಖಾತೆ ಸೃಜಿಸಲು ಸಾಧ್ಯವಾಗಿಲ್ಲ. ಇಲ್ಲಿಯೇ ನೀಡಿರುವ ಕುಟುಂಬ ಪೋರ್ಟಲ್ ಲಿಂಕ್ ಬಳಸಿ ನೋಂದಾಯಿಸಿಕೊಂಡರೂ ಐ.ಡಿ ಸಿಗುತ್ತಿಲ್ಲ. ಕುಟುಂಬ ಸಹಾಯವಾಣಿ 'ಸದಾ ಕಾರ್ಯನಿರತ'ವಾಗಿರುತ್ತದೆ.

ಪಡಿತರ ಚೀಟಿದಾರರು 'ಎಲೆಕ್ಟ್ರಾನಿಕ್ ನೊ ಯುವರ್ ಕಸ್ಟಮರ್' (ಇ-ಕೆವೈಸಿ) ಪ್ರಕ್ರಿಯೆ ಮಾಡಿಸದಿರುವುದೇ ಈ ಸಮಸ್ಯೆಗೆ ಕಾರಣ ಎನ್ನಲಾಗುತ್ತಿದೆ. ಆಹಾರ ಇಲಾಖೆ ತುರ್ತಾಗಿ ಇದಕ್ಕೆ ಅವಕಾಶ ಮಾಡಿಕೊಟ್ಟು ಸಹಕರಿಸಬೇಕಾಗಿದೆ.

ದೇವರಾಜ ದೊಡ್ಡಗೌಡ್ರ, ನಾಗವಂದ, ರಟ್ಟೀಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಲವು ಏಳು ಬೀಳುಗಳಿಗೆ ಸಾಕ್ಷಿಯಾದ ವರ್ಷ

ಕೋವಿಡ್ ಸೋಂಕು, ನಾಗರಿಕರ ಪ್ರತಿಭಟನೆಗಳು, ದುರಂತಗಳು, ಪ್ರಮುಖ ರಾಜಕೀಯ ಬೆಳವಣಿಗೆಗಳಿಗೆ ದೇಶವು ಸಾಕ್ಷಿಯಾದ ವರ್ಷ 2022. ಈ ವರ್ಷದಲ್ಲಿ ದೇಶದಲ್ಲಿ ಘಟಿಸಿದ ಪ್ರಮುಖ ಘಟನೆಗಳ ಇಣುಕು ನೋಟವಿದು...

ಜನವರಿ

5: ಪಂಜಾಬ್ ಚುನಾವಣಾ ರ್‍ಯಾಲಿಗೆ ರಸ್ತೆ ಮಾರ್ಗದ ಮೂಲಕ ಹೋಗುತ್ತಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಟ್ಟಿದ ರೈತರ ರಸ್ತೆ ತಡೆ ಬಿಸಿ. ಮೇಲ್ಸೇತುವೆಯಲ್ಲಿ 15–20 ನಿಮಿಷ ಸಿಲುಕಿದ ಮೋದಿ ವಾಪಸಾಗಬೇಕಾಯಿತು
- ರಾಜಸ್ಥಾನದಲ್ಲಿ ಓಮೈಕ್ರಾನ್‌ನಿಂದ 73 ವರ್ಷದ ವೃದ್ಧ ಸಾವು– ಇದು ದೇಶದ ಮೊದಲ ಪ್ರಕರಣ

ಫೆಬ್ರುವರಿ

7: ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮೊದಲ ಮಹಿಳಾ ಕುಲಪತಿಯಾಗಿ ಶಾಂತಿಶ್ರೀ ಧೂಲಿಪುಡಿ ಪಂಡಿತ್ ನೇಮಕ
18: 2008ರ ಅಹಮದಾಬಾದ್ ಸರಣಿ ಸ್ಫೋಟ ಪ್ರಕರಣ– 8 ಜನರಿಗೆ ಗಲ್ಲು, 11 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದ ವಿಶೇಷ ನ್ಯಾಯಾಲಯ
23: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರ ಚಟುವಟಿಕೆಗಳಿಗೆ ಹಣ ಅಕ್ರಮ ವರ್ಗಾವಣೆ ಮಾಡಿದ ಸಂಬಂಧ ಎನ್‌ಸಿಪಿ ಮುಖ್ಯ ವಕ್ತಾರ ನವಾಬ್ ಮಲಿಕ್ (62) ಇ.ಡಿಯಿಂದ ಬಂಧನ

ಮಾರ್ಚ್

9: ಆಕಸ್ಮಿಕವಾಗಿ ಸಿಡಿದು ಪಾಕಿಸ್ತಾನ ನೆಲಕ್ಕೆ ಅಪ್ಪಳಿಸಿದ ಭಾರತದ ಸಿಡಿತಲೆರಹಿತ ಸೂಪರ್‌ಸಾನಿಕ್ ಕ್ಷಿಪಣಿ
10: ಉತ್ತರಪ್ರದೇಶ, ಉತ್ತರಾಖಂಡ, ಮಣಿಪುರ, ಗೋವಾ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿಗೆ ಗೆಲುವು; ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಗೆಲುವು– ಪಂಜಾಬ್ ಮುಖ್ಯಮಂತ್ರಿ ಗಾದಿಯೇರಿದ ಭಗವಂತ ಸಿಂಗ್ ಮಾನ್
21: ಗೋವಾ ಮುಖ್ಯಮಂತ್ರಿಯಾಗಿ ಪ್ರಮೋದ್ ಸಾವಂತ್ ಮತ್ತು ಅಸ್ಸಾಂ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ಶರ್ಮಾ ಪ್ರಮಾಣ ವಚನ
23: ಉತ್ತರಾಖಂಡದ ನೂತನ ಮುಖ್ಯಮಂತ್ರಿಯಾಗಿ ಪುಷ್ಕರ್ ಸಿಂಗ್ ಧಾಮಿ ಅಧಿಕಾರ ಸ್ವೀಕಾರ
25: ಉತ್ತರ ಪ್ರದೇಶದಲ್ಲಿ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಯೋಗಿ ಆದಿತ್ಯನಾಥ ಪ್ರಮಾಣ ವಚನ

ಏಪ್ರಿಲ್

1: ಅಸ್ಸಾಂ, ಮಣಿಪುರ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (ಆಫ್‌ಸ್ಪಾ) ಅಡಿ, 'ಪ್ರಕ್ಷುಬ್ಧ'ವೆಂದು ಗುರುತಿಸಿರುವ ಹಲವು ಪ್ರದೇಶಗಳಲ್ಲಿ ಈ ಕಾಯ್ದೆ ಹಿಂದಕ್ಕೆ– ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಕಟಣೆ
6: ಕೋವಿಡ್ ಇತರೆ ತಳಿಗಳಿಗಿಂತ ವೇಗವಾಗಿ ಹರಡುವ 'ಎಕ್ಸ್‌.ಇ' ಹೊಸ ತಳಿಯ ಮೊದಲ ಪ್ರಕರಣ ಮುಂಬೈ ನಗರದಲ್ಲಿ ಪತ್ತೆ
7: 'ಎಲ್ಲಾ ರಾಜ್ಯಗಳ ಜನರು ಸಂಪರ್ಕಕ್ಕಾಗಿ ಹಿಂದಿ ಭಾಷೆ ಬಳಸಬೇಕು' – ಅಮಿತ್ ಶಾ ಕರೆ– ಇದಕ್ಕೆ ದೇಶದಾದ್ಯಂತ ಭಾರಿ ವಿರೋಧ
29: ಕಲ್ಲಿದ್ದಲು ಕೊರತೆ ನೀಗಿಸಲು ಕಲ್ಲಿದ್ದಲು ಸಾಗಣೆ ರೈಲುಗಳ ಸುಗಮ ಸಂಚಾರಕ್ಕಾಗಿ 657 ಪ್ರಯಾಣಿಕ ರೈಲುಗಳ ಸಂಚಾರ ರದ್ದುಪಡಿಸಿದ ಭಾರತೀಯ ರೈಲ್ವೆ
30: ಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಸಲು ಪ್ರಧಾನಿ ಮೋದಿ ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಪ್ರಬಲ ಪ್ರತಿಪಾದನೆ

ಮೇ

3: ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಒತ್ತಾಯಿಸುವಂತಿಲ್ಲ. ಲಸಿಕೆಯ ಪ್ರತಿಕೂಲ ಪರಿಣಾಮ ಬಹಿರಂಗಪಡಿಸಬೇಕು– ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ
5: ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಜಾರಿ– ಅಮಿತ್ ಶಾ



ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ' ಯಾತ್ರೆ ದೆಹಲಿಯಲ್ಲಿ ಸಾಗಿದ ದೃಶ್ಯ

15: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 'ಭಾರತ್ ಜೋಡೊ ಯಾತ್ರೆ' ನಡೆಸಲು ರಾಜಸ್ಥಾನದ ಉದಯಪುರದ ಚಿಂತನ ಶಿಬಿರದಲ್ಲಿ ಕಾಂಗ್ರೆಸ್ ತೀರ್ಮಾನ
- ಕೇಂದ್ರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರ ಪ್ರತಿಭಟನೆ ಸಂಘಟಿಸಿದ್ದ ಭಾರತೀಯ ಕಿಸಾನ್ ಯೂನಿಯನ್‌ನಲ್ಲಿ (ಬಿಕೆಯು) ಒಡಕು, ಸಂಘಟನೆಯ ಹೊಸ ಬಣ ಸ್ಥಾಪಿಸಿದ ಬಿಕೆಯು ಉಪಾಧ್ಯಕ್ಷ ರಾಜೇಶ್ ಚೌಹಾಣ್

17: ವಾರಾಣಸಿ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಶಿವಲಿಂಗ ಪತ್ತೆಯಾಗಿದೆ ಎನ್ನಲಾದ ಜಾಗಕ್ಕೆ ರಕ್ಷಣೆ ನೀಡಲು, ಮುಸ್ಲಿಮರಿಗೆ ಮಸೀದಿಯಲ್ಲಿ ನಮಾಜ್‌ಗೆ ಅವಕಾಶ ಕೊಡಲು ಜಿಲ್ಲಾಡಳಿತಕ್ಕೆ ಸುಪ್ರೀಂ ಕೋರ್ಟ್ ಸೂಚನೆ
25: ಭಯೋತ್ಪಾದನೆಗೆ ಹಣಕಾಸು ನೆರವು– ಕಾಶ್ಮೀರದ ಪ್ರತ್ಯೇಕತಾವಾದಿ ಮುಖಂಡ, ನಿಷೇಧಿತ ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ ವಿಧಿಸಿದ ದೆಹಲಿ ಕೋರ್ಟ್
30: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿಯ ಸಚಿವ, ಎಎಪಿ ನಾಯಕ ಸತ್ಯೇಂದ್ರ ಜೈನ್ ಇ.ಡಿಯಿಂದ ಬಂಧನ

ಜೂನ್

14: ಸೇನಾ ನೇಮಕಾತಿಗೆ 'ಅಗ್ನಿಪಥ' ಯೋಜನೆ ಪ್ರಕಟಿಸಿದ ಕೇಂದ್ರ ಸರ್ಕಾರ
16: 'ಅಗ್ನಿಪಥ' ಯೋಜನೆ ವಿರುದ್ಧ ಉತ್ತರ ಭಾರತದ ವಿವಿಧೆಡೆ ಭಾರಿ ಪ್ರತಿಭಟನೆ
17: 'ಅಗ್ನಿಪಥ' ವಿರೋಧಿಸಿ, ತೆಲಂಗಾಣದ ಸಿಕಂದರಾಬಾದ್ ರೈಲು ನಿಲ್ದಾಣದಲ್ಲಿ ಪ್ರತಿಭಟನಕಾರರು ಹಚ್ಚಿದ ಕಿಚ್ಚಿಗೆ ಕೆಲವು ರೈಲು ಬೋಗಿಗಳು ಆಹುತಿ. ಪೊಲೀಸರ ಗೋಲಿಬಾರ್‌ಗೆ ಒಬ್ಬ ವ್ಯಕ್ತಿ ಸಾವು
22 ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ ಸರ್ಕಾರ ಉರುಳಿಸುವುದಾಗಿ ಶಿವಸೇನಾ ಭಿನ್ನಮತೀಯ ಶಾಸಕ ಏಕನಾಥ್ ಶಿಂದೆ ಘೋಷಣೆ
25: ಕ್ರಿಮಿನಲ್ ಪಿತೂರಿ ಪ್ರಕರಣ– ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ಗುಜರಾತ್ ಭಯೋತ್ಪಾದನೆ ನಿಗ್ರಹ ದಳದಿಂದ (ಎಟಿಎಸ್) ಮುಂಬೈನಲ್ಲಿ ಬಂಧನ
28: ಸಾಮಾಜಿಕ ಮಾಧ್ಯಮಗಳಲ್ಲಿ ವಿವಾದಿತ ಪೋಸ್ಟ್ ಹಾಕಿದ್ದಕ್ಕೆ ರಾಜಸ್ಥಾನದ ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಅವರ ಕತ್ತು ಸೀಳಿ ಹತ್ಯೆ
29: ಮಹಾರಾಷ್ಟ್ರ ಮುಖ್ಯಮಂತ್ರಿ ಸ್ಥಾನಕ್ಕೆ, ವಿಧಾನ ಪರಿಷತ್ ಸದಸ್ಯತ್ವಕ್ಕೆ ಉದ್ಧವ್ ಠಾಕ್ರೆ ರಾಜೀನಾಮೆ



30: ಶಿವಸೇನಾ ನಾಯಕ ಏಕನಾಥ್ ಶಿಂದೆ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿ, ಬಿಜೆಪಿಯ ದೇವೇಂದ್ರ ಫಡಣವೀಸ್ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ

ಜುಲೈ

8: ಹಿಮಾಲಯದ ತಪ್ಪಲಿನ ಪ್ರಸಿದ್ಧ ಯಾತ್ರಾಸ್ಥಳ ಅಮರನಾಥದಲ್ಲಿ ಭಾರಿ ಮಳೆಗೆ 15 ಮಂದಿ ಸಾವು, 40 ಯಾತ್ರಾರ್ಥಿಗಳು ನಾಪತ್ತೆ
- ನಿರ್ಮಾಣ ಹಂತದ ನೂತನ ಸಂಸತ್ ಭವನದ ಕಟ್ಟಡದ ಮೇಲೆ 9.5 ಟನ್ ತೂಕದ ನೂತನ ರಾಷ್ಟ್ರ ಲಾಂಛನ ಅನಾವರಣಗೊಳಿಸಿದ ಪ್ರಧಾನಿ



21: ದೇಶದ 15ನೇ ರಾಷ್ಟ್ರಪತಿಯಾಗಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಆಯ್ಕೆ; ವಿರೋಧ ಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾಗೆ ಸೋಲು

ಆಗಸ್ಟ್

1: ಪತ್ರಾ ಚಾಳ್ ಭೂಹಗರಣದಲ್ಲಿ ಶಿವಸೇನಾ ಸಂಸದ ಸಂಜಯ್ ರಾವುತ್ ಅವರನ್ನು ಬಂಧಿಸಿದ ಇ.ಡಿ
6: ಎನ್‌ಡಿಎ ಅಭ್ಯರ್ಥಿ ಜಗದೀಪ್ ಧನ್‌ಕರ್ 14ನೇ ಉಪರಾಷ್ಟ್ರಪತಿಯಾಗಿ ಆಯ್ಕೆ; ಪ್ರತಿಪಕ್ಷಗಳ ಅಭ್ಯರ್ಥಿ ಮಾರ್ಗರೆಟ್ ಆಳ್ವಗೆ ಸೋಲು



ಧನ್‌ಕರ್

9: ಬಿಜೆಪಿಯ ಸಖ್ಯ ತೊರೆದ ಬಿಹಾರದ ಜೆಡಿಯು ನಾಯಕ ನಿತೀಶ್ ಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ
10: ಆರ್‌ಜೆಡಿ ನೇತೃತ್ವದ ಮಹಾಮೈತ್ರಿಕೂಟದ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅಧಿಕಾರ ಸ್ವೀಕಾರ
15: ಬಿಲ್ಕಿಸ್ ಬಾನು ಪ್ರಕರಣದ 11 ಅತ್ಯಾಚಾರಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿದ ಗುಜರಾತ್ ಸರ್ಕಾರ. ಇದಕ್ಕೆ ವಿಪಕ್ಷಗಳ ಆಕ್ಷೇಪ. ನಿರ್ಧಾರ ಸಮರ್ಥಿಸಿಕೊಂಡ ಗುಜರಾತ್ ಸರ್ಕಾರ. ಅತ್ಯಾಚಾರಿಗಳಿಗೆ ಹೂಹಾರ ಹಾಕಿ ಸ್ವಾಗತ.
26: ಗುಲಾಂ ನಬಿ ಆಜಾದ್ ಕಾಂಗ್ರೆಸ್‌ಗೆ ರಾಜೀನಾಮೆ

ಸೆಪ್ಟೆಂಬರ್

6: ಕಾರು ಮತ್ತು ಎಸ್‌ಯುವಿಗಳ ಹಿಂದಿನ ಆಸನಗಳಲ್ಲಿ ಕುಳಿತು ಪ್ರಯಾಣಿಸುವವರೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ– ಕೇಂದ್ರ ಸಚಿವ ನಿತಿನ್ ಗಡ್ಕರಿ ಘೋಷಣೆ
7: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ರಾಹುಲ್ ಗಾಂಧಿ ಅವರಿಗೆ ತ್ರಿವರ್ಣ ಧ್ವಜ ನೀಡುವ ಮೂಲಕ ಕನ್ಯಾಕುಮಾರಿಯಲ್ಲಿ 'ಭಾರತ್ ಜೋಡೊ ಯಾತ್ರೆ'ಗೆ ಚಾಲನೆ
8: ಹೆಸರು ಬದಲಿಸಿದ 'ಕರ್ತವ್ಯಪಥ' ರಸ್ತೆ ಪ್ರಧಾನಿಯಿಂದ ಉದ್ಘಾಟನೆ, ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗಿನ ಈ ರಸ್ತೆಗೆ ಮೊದಲು 'ರಾಜಪಥ' ಎಂಬ ಹೆಸರಿತ್ತು
14: ಗೋವಾ ಕಾಂಗ್ರೆಸ್‌ನ ಎಂಟು ಶಾಸಕರು ಬಿಜೆಪಿ ಸೇರ್ಪಡೆ
21: ಪಿಎಂ ಕೇರ್ಸ್ ನಿಧಿಯ ಟ್ರಸ್ಟಿಗಳಾಗಿ ಟಾಟಾ ಸನ್ಸ್ ಮುಖ್ಯಸ್ಥ ರತನ್ ಟಾಟಾ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಟಿ.ಥಾಮಸ್, ಲೋಕಸಭೆಯ ಮಾಜಿ ಉಪ ಸಭಾಧ್ಯಕ್ಷ ಕರಿಯಾ ಮುಂಡಾ ನಾಮನಿರ್ದೇಶನ
22: ಎನ್‌ಐಎ ನೇತೃತ್ವದಲ್ಲಿ ವಿವಿಧ ತನಿಖಾ ಸಂಸ್ಥೆಗಳಿಂದ 15 ರಾಜ್ಯಗಳಲ್ಲಿ ಪಿಎಫ್‌ಐಗೆ ಸೇರಿದ 93 ಸ್ಥಳಗಳಲ್ಲಿ ಶೋಧ; 106 ಕಾರ್ಯಕರ್ತರ ಬಂಧನ
27: ಕರ್ನಾಟಕವೂ ಸೇರಿ ಏಳು ರಾಜ್ಯಗಳಲ್ಲಿ ಪಿಎಫ್‌ಐ ಜತೆಗೆ ನಂಟು ಹೊಂದಿದ್ದ 230 ಮಂದಿಯನ್ನು ಬಂಧಿಸಿದ ಎನ್‌ಐಎ
29: ಅವಿವಾಹಿತೆಯರು ಸೇರಿ ಎಲ್ಲ ಮಹಿಳೆಯರಿಗೂ ಭ್ರೂಣಕ್ಕೆ 24 ವಾರ ತುಂಬುವವರೆಗೆ ಸುರಕ್ಷಿತ ಗರ್ಭಪಾತದ ಹಕ್ಕು ಇದೆ– ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

ಅಕ್ಟೋಬರ್

3: ಎಚ್‌ಎಎಲ್ ಸಂಪೂರ್ಣ ದೇಶೀಯವಾಗಿ ನಿರ್ಮಿಸಿರುವ 'ಪ್ರಚಂಡ' ಹೆಸರಿನ ಲಘು ಯುದ್ಧ ಹೆಲಿಕಾಪ್ಟರ್‌ಗಳು ವಾಯುಪಡೆ ಮತ್ತು ಭೂಸೇನೆಗೆ ಸೇರ್ಪಡೆ
5: ಉತ್ತರಾಖಂಡದ ಪೌಡಿ ಗಡವಾಲ್ ಜಿಲ್ಲೆಯಲ್ಲಿ ಮದುವೆ ದಿಬ್ಬಣದ ಬಸ್ ಕಂದಕಕ್ಕೆ ಉರುಳಿ 33 ಮಂದಿ ಸಾವು
10: ಸಮಾಜವಾದಿ ಪಕ್ಷದ ನೇತಾರ, ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ನಿಧನ
17: ಎರಡು ದಶಕಗಳ ನಂತರ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆ
18: ಕೇದಾರನಾಥ ದೇವಾಲಯದಿಂದ ಗುಪ್ತಕಾಶಿಗೆ ಹೋಗುತ್ತಿದ್ದ ಹೆಲಿಕಾಪ್ಟರ್ ದಟ್ಟ ಮಂಜಿನ ಕಾರಣದಿಂದ ಪತನ, ಆರು ಮಂದಿ ಭಕ್ತರು ಮತ್ತು ಪೈಲಟ್ ಸಾವು
21: ದ್ವೇಷ ಭಾಷಣ ಮಾಡುವವರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ಕ್ರಮಕೈಗೊಳ್ಳಲು ಮೂರು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ
- ಅರುಣಾಚಲ ಪ್ರದೇಶದ ಅಪ್ಪರ್ ಸಿಯಾಂಗ್ ಜಿಲ್ಲೆಯ ಮಿಗ್ಗಿಂಗ್‌ನಲ್ಲಿ ಸೇನೆಯ ಸುಧಾರಿತ ಹೆಲಿಕಾಪ್ಟರ್ ಪತನ– ನಾಲ್ವರು ಸಿಬ್ಬಂದಿ ಸಾವು



28: ಶಶಿ ತರೂರ್ ವಿರುದ್ಧ ಗೆಲುವು, ಕಾಂಗ್ರೆಸ್ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅಧಿಕಾರ ಸ್ವೀಕಾರ
30: ಪಶ್ಚಿಮ ಗುಜರಾತ್‌ನ ಮಚ್ಚು ನದಿಯ ಮೊರ್ಬಿ ತೂಗು ಸೇತುವೆ ಕುಸಿದು 136 ಜನರ ದುರ್ಮರಣ

ನವೆಂಬರ್

1: ಮೊರ್ಬಿ ತೂಗು ಸೇತುವೆ ದುರಂತದ ಸ್ಥಳಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ, ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೂ ಭೇಟಿ ನೀಡಿ ಸಾಂತ್ವನ
7: ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಸಂವಿಧಾನದ 103ನೇ ತಿದ್ದುಪಡಿ ಎತ್ತಿಹಿಡಿದ ಸುಪ್ರೀಂ ಕೋರ್ಟ್
11: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹಂತಕರಾದ ನಳಿನಿ ಶ್ರೀಹರನ್ ಮತ್ತು ಇತರ ಐವರ ಅವಧಿಪೂರ್ವ ಬಿಡುಗಡೆಗೆ ಸುಪ್ರೀಂ ಕೋರ್ಟ್ ಆದೇಶ
14: ಮುಂಬೈ ಮೂಲದ ಕಾಲ್‌ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಭೀಕರ ಹತ್ಯೆ ಮಾಡಿ, ದೇಹವನ್ನು 35 ತುಂಡುಗಳಾಗಿ ಕತ್ತರಿಸಿದ್ದ ಆಕೆಯ ಸಹ ಜೀವನದ ಸಂಗಾತಿ ಆಫ್ತಾಬ್ ಪೂನಾವಾಲಾ; 6 ತಿಂಗಳ ಹಿಂದಿನ ಪ್ರಕರಣ ಬೆಳಕಿಗೆ
18: ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ಅಭಿವೃದ್ಧಿಪಡಿಸಿದ ದೇಶದ ಮೊದಲ ಖಾಸಗಿ ರಾಕೆಟ್ 'ವಿಕ್ರಮ್–ಎಸ್' ಮೂಲಕ ಮೂರು ಉಪಗ್ರಹಗಳು ಕಕ್ಷೆಗೆ ಯಶಸ್ವಿ ಸೇರ್ಪಡೆ
22: ಅಸ್ಸಾಂ ಮತ್ತು ಮೇಘಾಲಯ ರಾಜ್ಯಗಳ ವಿವಾದಿತ ಗಡಿ ಪ್ರದೇಶದಲ್ಲಿ ನಡೆದ ಘರ್ಷಣೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಸೇರಿ 6 ಮಂದಿ ಸಾವು
26: ಕೇಂದ್ರ ಸರ್ಕಾರಕ್ಕೆ ಸೇರಿದ 15 ವರ್ಷ ಹಳೆಯದಾದ ಎಲ್ಲ ವಾಹನಗಳು ಗುಜರಿಗೆ: ಕೇಂದ್ರ ಸಚಿವ ನಿತಿನ್ ಗಡ್ಕರಿ ಪ್ರಕಟ
27: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಒಂಬತ್ತು ಉಪಗ್ರಹಗಳ ಗುಚ್ಛ ನಭಕ್ಕೆ ಯಶಸ್ವಿ ಉಡಾವಣೆ;
- ಎಲ್ಗಾರ್ ಪರಿಷತ್– ಪ್ರಕರಣದಲ್ಲಿ ಬಂಧಿತರಾಗಿದ್ದ ಸಾಮಾಜಿಕ ಕಾರ್ಯಕರ್ತ ಆನಂದ್ ತೇಲ್ತುಂಬ್ಡೆ ಅವರಿಗೆ ಬಾಂಬೆ ಹೈಕೋರ್ಟ್‌ನಿಂದ ಜಾಮೀನು ಸಿಕ್ಕಿ, ಮುಂಬೈನ ತಲೋಜಾ ಜೈಲಿನಿಂದ ಬಿಡುಗಡೆ

ಡಿಸೆಂಬರ್

1: ಸುಪ್ರೀಂ ಕೋರ್ಟ್ ಇತಿಹಾಸದಲ್ಲಿ ಮೂರನೇ ಬಾರಿಗೆ ಮಹಿಳಾ ನ್ಯಾಯಮೂರ್ತಿಗಳೇ ಇರುವ ಪೀಠ ರಚಿಸಿದ ಸಿಜೆಐ



2023ರ ಜಿ–20 ಅಧ್ಯಕ್ಷತೆಯನ್ನು ಭಾರತಕ್ಕೆ ಹಸ್ತಾಂತರಿಸಿದ ಕಾರ್ಯಕ್ರಮದಲ್ಲಿ ಇಂಡೊನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ, ಪ್ರಧಾನಿ ನರೇಂದ್ರ ಮೋದಿ ಇದ್ದರು

- ಭಾರತಕ್ಕೆ ಡಿ.1ರಿಂದ ಜಿ–20 ಅಧ್ಯಕ್ಷತೆ ಪಟ್ಟ

7: 15 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿದ್ದ ದೆಹಲಿ ಪಾಲಿಕೆ ಆಡಳಿತ ಎಎಪಿಗೆ
- ನೋಟು ಅಮಾನ್ಯದ ದಾಖಲೆ ಸಲ್ಲಿಸಲು ಕೇಂದ್ರ ಸರ್ಕಾರ ಮತ್ತು ಆರ್‌ಬಿಐಗೆ 'ಸುಪ್ರೀಂ' ಸೂಚನೆ

8: ಗುಜರಾತ್ ಚುನಾವಣೆ: ಸತತ ಏಳನೇ ಬಾರಿಗೆ ಬಿಜೆಪಿಗೆ ಅಧಿಕಾರ– ಎರಡನೇ ಬಾರಿಗೆ ಸಿಎಂ ಆಗಿ ಭೂಪೇಂದ್ರ ಪಟೇಲ್; ಖಾತೆ ತೆರೆದ ಎಎಪಿಗೆ ರಾಷ್ಟ್ರೀಯ ಪಕ್ಷದ ಮಾನ್ಯತೆ; ಹಿಮಾಚಲಪ್ರದೇಶದಲ್ಲಿ ಕಾಂಗ್ರೆಸ್‌ಗೆ ಅಧಿಕಾರ– ಸಿಎಂ ಆಗಿ ಸುಖ್ವಿಂದರ್ ಸಿಂಗ್ ಸುಖು
- ದಕ್ಷಿಣ ರಾಜ್ಯಗಳಿಗೆ ಅಪ್ಪಳಿಸಿದ ಮ್ಯಾಂಡಸ್ ಚಂಡಮಾರುತ

12: ಅರುಣಾಚಲ ಪ್ರದೇಶದಲ್ಲಿ ತವಾಂಗ್ ವಲಯದ ಯಾಂಗ್‌ತ್ಸೆ ಗಡಿಯಲ್ಲಿ ಚೀನಾ ಮತ್ತು ಭಾರತ ಸೈನಿಕರ ನಡುವೆ ಡಿ.9ರಂದು ಘರ್ಷಣೆ ನಡೆದಿರುವ ಬಗ್ಗೆ ಸೇನೆಯಿಂದ ಅಧಿಕೃತ ಮಾಹಿತಿ
- ಬೆಂಗಳೂರಿನಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ಜಿ–20 ರಾಷ್ಟ್ರಗಳ ಮೊದಲ ಸಮಾಲೋಚನಾ ಸಭೆ

14: ಕರ್ನಾಟಕ– ಮಹಾರಾಷ್ಟ್ರ ಗಡಿವಿವಾದ: ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಮತ್ತು ಏಕನಾಥ್ ಶಿಂದೆ ಜತೆಗೆ ಸಭೆ ನಡೆಸಿದ ಅಮಿತ್ ಶಾ
17: 'ಮೋದಿ ಗುಜರಾತ್‌ನ ಕಟುಕ' ಎಂದ ಪಾಕಿಸ್ತಾನ ಸಚಿವ ಬಿಲಾವಲ್ ಭುಟ್ಟೊ ವಿರುದ್ಧ ದೇಶದಾದ್ಯಂತ ಬಿಜೆಪಿಯಿಂದ ಪ್ರತಿಭಟನೆ
18: ಕ್ಷಿಪಣಿ ಧ್ವಂಸಕ, ಸ್ವದೇಶಿ ನಿರ್ಮಿತ 'ಐಎನ್‌ಎಸ್ ಮೊರ್ಮುಗಾವೊ' ಸಮರನೌಕೆ ಭಾರತೀಯ ನೌಕಾಪಡೆಗೆ ಸೇರ್ಪಡೆ
- ಭಾರತದ ಸರ್ಗಂ ಕೌಶಲ್ ಮುಡಿಗೇರಿದ 'ಮಿಸೆಸ್ ವರ್ಲ್ಡ್' ಕಿರೀಟ

19: ಭಾರತದಲ್ಲಿ ನೂರಕ್ಕೂ ಹೆಚ್ಚು ಭಾಷೆಗಳಲ್ಲಿ ಧ್ವನಿ ಮತ್ತು ಪಠ್ಯ ಆಧಾರಿತ ಸೇವೆ ಆರಂಭ– ಗೂಗಲ್ ಸಿಇಒ ಸುಂದರ್ ಪಿಚೈ ಘೋಷಣೆ
20: ಗ್ರಾಮೀಣಾಭಿವೃದ್ಧಿಯಲ್ಲಿನ ಅನುಪಮ ಸೇವೆಗೆ ಸೆತ್ರಿ ಸೆಂಗ್ಟಮ್‌ಗೆ ಒಲಿದ ರೋಹಿಣಿ ನಯ್ಯರ್ ಪ್ರಶಸ್ತಿ
22: ಕೋವಿಡ್ ತಡೆಯಲು ಆಡಳಿತ ಯಂತ್ರ ಸಜ್ಜಾಗಿರಿಸುವ ಜೊತೆಗೆ ಕೋವಿಡ್ ಪರೀಕ್ಷೆ ಹಾಗೂ ವೈರಾಣು ಸಂರಚನಾ ವಿಶ್ಲೇಷಣೆ ಹೆಚ್ಚಿಸಲು ಮೋದಿ ಸೂಚನೆ
22: ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಕಾಡು ಕುರುಬರ ಜತೆಗೆ ಬೆಟ್ಟ ಕುರುಬರನ್ನು ಸೇರಿಸುವ ಮಸೂದೆಗೆ ಸಂಸತ್ ಅಂಗೀಕಾರ
23: ಉತ್ತರ ಸಿಕ್ಕಿಂನ ಝೆಮಾದ ಬಳಿ ಸೇನಾ ಟ್ರಕ್ ಕಣಿವೆಗೆ ಉರುಳಿ ಮೂವರು ಅಧಿಕಾರಿಗಳು (ಜೆಸಿಒ) ಸೇರಿ 16 ಸೈನಿಕರ ದುರ್ಮರಣ
24: ಚೀನಾ, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ ಹಾಗೂ ಥಾಯ್ಲೆಂಡ್‌ನಿಂದ ಭಾರತಕ್ಕೆ ಬರುವ ಪ್ರಯಾಣಿಕರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ಕಡ್ಡಾಯ– ಕೇಂದ್ರ ಸರ್ಕಾರ

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಹೌದು 63%
ಅಲ್ಲ 37%

ಮೈಸೂರು ಭಾಗದಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಜಯಗಳಿಸುವ ಬಿಜೆಪಿಯ ಯೋಜನೆ ವಿಧಾನಸಭೆಯ ಮುಂದಿನ ಚುನಾವಣೆಯಲ್ಲಿ ಫಲ ನೀಡುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಗುಂಡಣ್ಣ



ಬೆರಗಿನ ಬೆಳಕು – ಗುರುರಾಜ ಕರಜಗಿ



ಎಲ್ಲರೊಳಗೆ ಒಂದಾಗು

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು |
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ||
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ |
ಎಲ್ಲರೊಳಗೊಂದಾಗು – ಮಂಕುತಿಮ್ಮ || 789 ||

ಪದ-ಅರ್ಥ: ಬೆಟ್ಟದಡಿ = ಬೆಟ್ಟದ + ಅಡಿ, ಎಲ್ಲರೊಳಗೊಂದಾಗು = ಎಲ್ಲರೊಳಗೆ + ಒಂದಾಗು

ವಾಚ್ಯಾರ್ಥ: ಬೆಟ್ಟದ ಕೆಳಗೆ ಬೆಳೆಯುವ ಹುಲ್ಲಾಗು, ಮನೆಗೆ ಸುಗಂಧ ತರುವ ಮಲ್ಲಿಗೆಯಾಗು, ವಿಧಿ, ಕಷ್ಟಗಳ ಮಳೆಸುರಿದಾಗ ಕಲ್ಲಾಗು, ದೀನ ದುರ್ಬಲರಿಗೆ ಸಂತೋಷ ತರುವ ಬೆಲ್ಲ ಸಕ್ಕರೆಯಂತಾಗು, ಎಲ್ಲರೊಳಗೆ ಒಂದಾಗಿ ಬಾಳು.

ವಿವರಣೆ: ಇದೊಂದು ಅತ್ಯಂತ ಪ್ರಖ್ಯಾತವಾದ ಚೌಪದಿ. ಡಿ.ವಿ.ಜಿಯವರು ಇಲ್ಲಿ ಎಲ್ಲರಿಗೂ ಅರ್ಥವಾಗುವ, ಅತ್ಯಂತ ಸುಲಭದ ನಾಲ್ಕು ಪ್ರತಿಮೆಗಳನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸಿ, ಅವುಗಳ ಮೂಲಕ ಸಾರ್ಥಕ ಬದುಕು ಹೇಗಿರಬೇಕು ಎಂಬುದನ್ನು ತಿಳಿಸುತ್ತಾರೆ. ಅವು - ಹುಲ್ಲು, ಮಲ್ಲಿಗೆ, ಕಲ್ಲು ಮತ್ತು ಬೆಲ್ಲ ಸಕ್ಕರೆ. ಯಾವ ಯಾವ ಸಂದರ್ಭಗಳಲ್ಲಿ ನಾವು ಹೇಗಿರಬೇಕು ? ಮೊದಲು ಬೆಟ್ಟದಲ್ಲಿ ಹುಲ್ಲಾಗಬೇಕು. ಸ್ಥೂಲ ಅರ್ಥದಲ್ಲಿ ಬೆಟ್ಟದ ತಪ್ಪಲಿನಲ್ಲಿ ಹುಲ್ಲಾಗಿದ್ದರೆ ಪ್ರಾಣಿಗಳಿಗೆ ಪ್ರಯೋಜನವಾಗುತ್ತದೆ, ಆಹಾರವಾಗುತ್ತದೆ. ಆದರೆ ಅದರ ನಿಜವಾದ ಅರ್ಥ, ಮಹತ್ತಾದದ್ದನ್ನು, ಶ್ರೇಷ್ಠವಾದದ್ದನ್ನು ಕಂಡಾಗ ನಾವು ಹುಲ್ಲಿನಂತೆ ಬಾಗುವುದನ್ನು ಕಲಿಯಬೇಕು. ದೊಡ್ಡವರ, ಸಾಧಕರ ಮುಂದೆ ಅಹಂಕಾರ ತೋರಿಸುವುದು ಉದ್ಧಟತನ. ಅಲ್ಲಿ ವಿನಯವಂತಿಕೆ ಬೇಕು. ಹುಲ್ಲಿನ ದೊಡ್ಡ ಗುಣ ಬಾಗುವುದು. ಅದು ಅದರ ಭದ್ರತೆಯ ಕಾರಣವೂ ಹೌದು. ಪರ್ವತಗಳಲ್ಲಿ ಬಿರುಗಾಳಿ ನುಗ್ಗಿದಾಗ, ಅಹಂಕಾರದಿಂದ ತಲೆ ಎತ್ತಿ ನಿಂತ ದೊಡ್ಡ ಮರಗಳು ಬೇರು ಸಮೇತ ಕಿತ್ತು ಬೀಳುತ್ತವೆ. ಆದರೆ ಹುಲ್ಲಿಗೆ ಏನೂ ಆಗುವುದಿಲ್ಲ. ಅಷ್ಟೇ ಅಲ್ಲ, ಗಾಳಿಯಿಂದ ಅದರ ಮೇಲೆ ಕುಳಿತಿದ್ದ ಧೂಳು ಕೂಡ ಹಾರಿ ಹೋಗಿ ಸ್ವಚ್ಛವಾಗುತ್ತದೆ. ಹಾಗೆ ನಾವು ವಿನಯವನ್ನು ಪ್ರಯತ್ನ ಪಟ್ಟು ಸಾಧಿಸಬೇಕು. ಬದುಕಿನಲ್ಲಿ ಮನೆಯ ವಾತಾವರಣ ಬಹಳ ಮುಖ್ಯ. ನಮಗಾಗಿ ತುಡಿಯುವ, ಬದುಕುವ, ಪ್ರೀತಿ ನೀಡುವ ಜೀವಗಳು ಅಲ್ಲಿವೆ. ಅವುಗಳಿಗೆ ಸಂತೋಷ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿ. ಕೆಲವರು ಊರಿಗೆಲ್ಲ ಒಳ್ಳೆಯವರಾಗಿ ಮನೆಗೆ ಏನೂ ಪ್ರಯೋಜವಿಲ್ಲದಂತಾಗುತ್ತಾರೆ. ಮನೆಗೆ, ಮಧುರವಾಗಿ, ನವಿರಾಗಿ ಸಂತೋಷ ತರುವ ಮಲ್ಲಿಗೆಯಂತಾಗಬೇಕು. ಜೀವನದಲ್ಲಿ ಕೆಲವು ಬಾರಿ ವಿಧಿ ಕಷ್ಟಗಳನ್ನು ಸುರಿಸಿ, ಕುಕ್ಕಿ ಬಿಡುತ್ತದೆ. ಆಗ ಅವುಗಳನ್ನು ಕಲ್ಲಿನಂತೆ ಗಟ್ಟಿಯಾಗಿ ನಿಂತು ಎದುರಿಸಿ ನಿಲ್ಲಬೇಕು. ಬರೀ ನನ್ನ ಜೀವನ, ನನ್ನ ಸಂಸಾರ ಎಂದು ಬದುಕಿದರೆ ಅದು ಸ್ವಾರ್ಥ ಜೀವನ. ವಿವೇಕಾನಂದರು ಹೇಳಿದಂತೆ, ಕೇವಲ ತನಗಾಗಿ ಬದುಕಿ, ಮತ್ತೊಬ್ಬರ ಕಷ್ಟ ಸುಖಕ್ಕೆ ಮನನೀಡದವನು ಬದುಕಿಯೂ ಸತ್ತಂತೆ. ನಮ್ಮ ಸುತ್ತಣ ಪ್ರಪಂಚದಲ್ಲಿ ದೀನರು, ದುರ್ಬಲರಿದ್ದಾರೆ. ನಮ್ಮ ಶಕ್ತಿಯ, ತಿಳುವಳಿಕೆಯ ಮಿತಿಯಲ್ಲಿ ಅವರಿಗೆ ಸಹಾಯ ಮಾಡಬೇಕು. ನಮ್ಮ ಸಹಾಯ ಅವರಿಗೆ ಬೆಲ್ಲ ಸಕ್ಕರೆಯಂತೆ. ಹೀಗೆ ಜ್ಞಾನಿಗಳೊಡನೆ, ಪರಿವಾರದಲ್ಲಿ, ಕಷ್ಟದ ಪರಿಸ್ಥಿತಿಗಳಲ್ಲಿ ಮತ್ತು ದೀನ ದುರ್ಬಲರೊಡನೆ ಏಕಮಿಳಿತವಾಗಬೇಕು. ಎಲ್ಲರಲ್ಲಿ ಒಂದಾಗಿ ಬಾಳಬೇಕು. ಎಲ್ಲರಲ್ಲೂ ತನ್ನನ್ನೇ ಮತ್ತು ತನ್ನಲ್ಲಿ ಎಲ್ಲರನ್ನೂ ಕಂಡಾಗ ಅದೊಂದು ಸಾರ್ಥಕ ಜೀವವಾಗುತ್ತದೆ. ❖

ದಿನ ಭವಿಷ್ಯ – ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ – ಶುಕ್ರವಾರ ಡಿಸೆಂಬರ್ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಅಷ್ಟಮಿ ಗಂ. 18-34 ನಕ್ಷತ್ರ: ಉತ್ತರಾಭಾದ್ರಾ ಗಂ. 11-24 ಯೋಗ: ವರಿಯಾನ್ ಗಂ. 09-45, ಕರಣ: ವಿಷ್ಟಿ ಗಂ. 06-51, ಧನುರ್ ಮಾಸದ 14 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 –12-00
ಸೂರ್ಯೋದಯ : 06-56 ಸೂರ್ಯಾಸ್ತ : 06-09
ಮುಸ್ಲಿಂ ದಿನಾಂಕ : 06 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 4, 5

ಮೇಷ: ಅತೀವ ಪ್ರಯತ್ನದಿಂದ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿ. ಸಂಸಾರದ ವಿಚಾರದಲ್ಲಿ, ಮಕ್ಕಳ ಭವಿಷ್ಯದ ವಿಚಾರದಲ್ಲಿ ಕಾಡುತ್ತಿದ್ದ ತಲೆನೋವು ಶಮನಹೊಂದುವುದು. ಖರ್ಚಿನ ಮೇಲೆ ಬಿಗಿ ಹಿಡಿತವಿರಲಿ.

ವೃಷಭ: ದಿನಬಳಕೆಯ ವಸ್ತುಗಳ ಅಥವಾ ಉಡುಗೊರೆಯ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ಸಂಸಾರದಲ್ಲಿ ಅನುಮಾನಗಳಿಗೆ ಜಾಗ ನೀಡಬೇಡಿ, ನಂಬಿಕೆ ವಿಶ್ವಾಸವಿರಲಿ

ಮಿಥುನ: ಅಗತ್ಯದ ಹಣ ಕೈಸೇರುವುದರಿಂದ ಮಾಡಿದ ಸಾಲವನ್ನು ತೀರಿಸಲು ಸಾಧ್ಯವಾಗಲಿದೆ. ನೂತನ ವಾಹನ ಖರೀದಿಯ ಯೋಚನೆ ಅಗತ್ಯಕ್ಕೆ ಅನುಗುಣವಾಗಿ ತೀರ್ಮಾನಿಸಿ. ವಿವಾಹ ಅಪೇಕ್ಷಿಗಳಿಗೆ ಈ ದಿನ ಉತ್ತಮ.

ಕರ್ಕಾಟಕ: ನಿಮ್ಮಲ್ಲಿರುವ ಮಾತಿನ ಚತುರತೆಯು ಸಂಘಟನೆ ಮಾಡಲು ಉಪಯೋಗವಾಗುವುದು. ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡುವ ಸಮಯದಲ್ಲಿ ಸ್ವಾರ್ಥ ಯೋಚಿಸಬೇಡಿ. ಕಾಗದ ಕಾರ್ಖಾನೆಯವರಿಗೆ ಆಕಸ್ಮಿಕ ಲಾಭ.

ಸಿಂಹ: ಇಂದಿನ ಜೀವನ ಶೈಲಿಯಲ್ಲಿ ಸಣ್ಣಪುಟ್ಟ ಸಂತಸದ ಕ್ಷಣಗಳನ್ನು ಕಾಣುವಿರಿ. ಮಹಾಲಕ್ಷ್ಮಿಯ ಅನುಗ್ರಹದಿಂದ ಈ ದಿನ ಸಂಪಾದನೆ ಅಧಿಕವಾಗಿರುವುದು. ಮನೆಯಲ್ಲಿ ನೆಮ್ಮದಿಯ ವಾತಾವರಣ ಅನುಭವಿಸುವಿರಿ.

ಕನ್ಯಾ: ಸಮಸ್ಯೆಯ ಸರಪಳಿಯಿಂದ ಹೊರಬರಲು ಕಷ್ಟವಾಗಲಿದೆ. ಯಾವುದೇ ಒಪ್ಪಂದಗಳಿಗೆ ಒಪ್ಪಿಕೊಳ್ಳುವ ಮೊದಲು ಯೋಚಿಸಿ ತೀರ್ಮಾನಿಸಿ. ಉದ್ಯೋಗದ ನಿಮಿತ್ತ ಕಚೇರಿಯಲ್ಲಿನ ಸಮಸ್ಯೆ ತನ್ನಂತಾನೆ ಬಗೆಹರಿಯುವುದು.

ತುಲಾ: ನಿಮ್ಮ ಸ್ಥಾನಮಾನದ ಬಗ್ಗೆ ನಿಮಗೆ ಅರಿವಿರಲಿ. ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ನುಚ್ಚುನೂರಾಗುವ ಪರಿಸ್ಥಿತಿ ತಂದುಕೊಳ್ಳಬೇಡಿ. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

ವೃಶ್ಚಿಕ: ಕೋರ್ಟು ವ್ಯವಹಾರದಲ್ಲಿ ಬಹುನಿರೀಕ್ಷಿತವಾದ ಜಯದ ಸಿಹಿಯನ್ನು ಅನಿರೀಕ್ಷಿತವಾದ ಸೋಲಿನ ಕಹಿ ಕಸಿಯುವ ಸಾಧ್ಯತೆಗಳಿವೆ. ಸರಕಾರಿ ಅಧಿಕಾರಿಗಳಿಗೆ ವರ್ಗಾವಣೆಯ ಸಾಧ್ಯತೆಯಿದೆ.

ಧನು: ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು. ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ.

ಮಕರ: ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ಆಕಸ್ಮಿಕ ಧನಲಾಭ ಉಂಟಾಗಲಿದೆ. ಹೊಸ ಜವಾಬ್ದಾರಿಯೊಂದನ್ನು ವಹಿಸಿ ಕೊಳ್ಳಬೇಕಾಗುವುದು.


ಕುಂಭ: ಸಾಮಾಜಿಕ ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗಲಿದೆ. ಅರಣ್ಯ ಅಧಿಕಾರಿಗಳಿಗೆ ಕೆಲಸವಿರುವುದು.

ಮೀನ: ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ದೊರೆತು ಸಂತಸ. ಯೋಜನೆಗಳು ಕಾರ್ಯಗತ ಗೊಳ್ಳುವುದರ ಬಗ್ಗೆ ಶನೈಶ್ಚರನಲ್ಲಿ ಪೂಜೆ ಪ್ರಾರ್ಥನೆ ನಡೆಸುವುದು ಉತ್ತಮ. ಮದುವೆ ಕೆಲಸಗಳಿಗಾಗಿ ಓಡಾಟ ನಡೆಸುವಿರಿ.

ಪದಬಂಧ 5184 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಾಪವಿರುವಾಗಲೇ ಅತೀ ದುಃಖ (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿರುವ ಕೆಟ್ಟಗುಣ (4)
8.ಬರವಿದ್ದಾಗ ನೀಡಿದ ಪಾನಕ (4)
10.ಹೀಗೆ ಮಾಯವಾಗುವಿಕೆ (4)
12.ಗರತಿ ಸೇರಿರುವ ವರ್ಗ (4)
13.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಅಪಹಾಸ್ಯವನ್ನು ಹೀಗೆನ್ನಿ (4)
17.ನೂತನ ದಂಪತಿಗಳ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ
1.ಅತ್ತೆ ಹೇಳಿದ ವಿಳಾಸ! (2)
2.ಪಣ ಕಟ್ಟಿ ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ಹೊಳೆದಾಟಲು ಬಳಸುವ ಸಾಧನ (2)
7.ವರನ ತಗಾದೆಯೇ ಇದು? (3)
9.ಬಹಳವೇ ಆತ್ಮೀಯ ನೆಂಟರ ಸಮೂಹ (3)
11.ಒಂಬತ್ತು ತಿಂಗಳಿದು (4)
12.ಈ ತರ ತೋರಿದ ಬೇಧಭಾವ (4)
14.ನೀರಿನಿಂದ ಸುತ್ತುವರೆದ ಭಾಗ (2)
15.ದೇವತೆಗಳ ಒಡೆಯ (2)



5183ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುರಂಗಮಾರ್ಗ 3.ಕುಲಾವಿ 5.ವ್ಯವಕಲನ 7.ಗರುಡ 8.ಒಣಹರಟೆ 10.ಬಯಕೆ 11.ನವದಂಪತಿ 14.ಪನ್ನೀರು 15.ಸುಲಿಗೆಗಾರ

ಮೇಲಿಂದ ಕೆಳಕ್ಕೆ: 1.ಸುಶ್ರಾವ್ಯ 2.ಗಮಕ 4.ವಿತಂಡ 6.ಲಕ್ಷಣ 7.ಗಲಾಟೆ 8.ಒನಕೆ 9.ರಕ್ತಾವ 10.ಬಳಪ 12.ದಂಡಿಗೆ 13.ತಿಮಿರ

ಸುಡೊಕು 5570


		1		7		6		2
		5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5569 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,122
ಇಂದಿನ ಅಂತ್ಯ	18,191
▲	69
ದಿನದ ಗರಿಷ್ಠ	18,229

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1610 (1615)
ಸೋಯಾ (ರಿಫೈಂಡ್)	₹1290 (1300)
ಸೂರ್ಯಕಾಂತಿ (ರಿಫೈಂಡ್)	₹1325 (1330)
ಪಾಮೋಲಿನ್	₹955 (960)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹512-655
ದ್ವಿತಳಿ (ಬಿ.ವಿ)	₹545-815

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹132.50
ಆರ್‌ಎಸ್‌ಎಸ್-5	₹124
ಗುಡ್ ಲಾಟ್	₹118

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-18000
2ನೇ ದರ್ಜೆ	₹12000-15000

ಮುಂಬೈ ಧಾರಣೆ

ಶೇಂಗಾ

29-12-2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1625)
ಒಂದು ವಾರದ ಡೆಲಿವರಿ	1615 (1620)
ಸೋಯಾ ಕಚ್ಚಾ	1230 (1235)
ಪಾಮ್ ವಾರದ ಡೆಲಿವರಿ	960 (965)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1230)

ಚಿನ್ನ- ಬೆಳ್ಳಿ (ಮಧ್ಯಾಹ್ನ ಸೆಲಿಂಗ್)

ಅಪರಂಜಿ ಚಿನ್ನ 10ಗ್ರಾಂ
54,450 (54,350)
ಬೆಳ್ಳಿ ಕೆ.ಜಿ 67,850 (67,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಾಲ್ತಿ ಖಾತೆ ಕೊರತೆ ಶೇ 4.4ಕ್ಕೆ ಏರಿಕೆ

ಮುಂಬೈ (ಪಿಟಿಐ): ದೇಶದ ಚಾಲ್ತಿ ಖಾತೆ ಕೊರತೆಯು (ಸಿಎಡಿ) ಜೂನ್ ತ್ರೈಮಾಸಿಕ ಅಂತ್ಯದಲ್ಲಿ ಜಿಡಿಪಿಯ ಶೇಕಡ 2.2ರಷ್ಟು ಇದ್ದದ್ದು ಸೆಪ್ಟೆಂಬರ್ ತ್ರೈಮಾಸಿಕ ಅಂತ್ಯದ ವೇಳೆಗೆ ಶೇ 4.4ಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ತಿಳಿಸಿದೆ.

ವ್ಯಾಪಾರ ಕೊರತೆ ಹೆಚ್ಚಾಗುತ್ತಿರುವುದರಿಂದ ಚಾಲ್ತಿ ಖಾತೆ ಕೊರತೆ ಏರಿಕೆ ಆಗುತ್ತಿದೆ. ವ್ಯಾಪಾರ ಕೊರತೆ ಅಂತರವು ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 5.22 ಲಕ್ಷ ಕೋಟಿಯಿಂದ ₹ 6.91 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮೌಲ್ಯದ ಲೆಕ್ಕದಲ್ಲಿ, ಭಾರತದ ಚಾಲ್ತಿ ಖಾತೆ ಕೊರತೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 3.01 ಲಕ್ಷ ಕೋಟಿಗೆ (ಶೇ 4.4) ತಲುಪಿದೆ. ಜೂನ್ ತ್ರೈಮಾಸಿಕದಲ್ಲಿ ₹ 1.50 ಲಕ್ಷ ಕೋಟಿಯಷ್ಟು (ಶೇ 2.2) ಇತ್ತು. 2021–22ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ₹ 80,374 ಕೋಟಿ ಇತ್ತು ಎಂದು ಆರ್‌ಬಿಐ ಹೇಳಿದೆ.

ಹಣಕಾಸು ಸ್ಥಿರತೆ ವರದಿಯಲ್ಲಿ ಆರ್‌ಬಿಐ ಮಾಹಿತಿ

ಎನ್‌ಪಿಎ ಪ್ರಮಾಣ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕ್‌ಗಳ ಒಟ್ಟು ಎನ್‌ಪಿಎ ಪ್ರಮಾಣವು ಏಳು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 5ಕ್ಕೆ ಕುಸಿದಿದೆ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಂಡವಾಳವು ಸಾಕಷ್ಟಿದೆ ಎಂದು ಆರ್‌ಬಿಐ ತಿಳಿಸಿದೆ.

ಎನ್‌ಪಿಎ ಪ್ರಮಾಣದ ಕುಸಿತ ಮುಂದುವರಿಯುವ ಸಾಧ್ಯತೆ ಇದೆ ಎಂದು ಹಣಕಾಸು ಸ್ಥಿರತೆ ವರದಿಯಲ್ಲಿ ಆರ್‌ಬಿಐ ಹೇಳಿದೆ. ವಾಣಿಜ್ಯ ಬ್ಯಾಂಕ್‌ಗಳ ತೆರಿಗೆ ನಂತರದ ಲಾಭ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಶೇಕಡ 40.7ರಷ್ಟು ಹೆಚ್ಚಳ ಕಂಡಿದೆ. ಎನ್‌ಪಿಎ ನಷ್ಟ ಭರ್ತಿಗೆ ತೆಗೆದಿರಿಸಬೇಕಾದ ಮೊತ್ತ ಕಡಿಮೆ ಆಗಿದ್ದು, ನಿವ್ವಳ ಬಡ್ಡಿ ಆದಾಯ ಹೆಚ್ಚಾಗಿದ್ದು ಬ್ಯಾಂಕ್‌ಗಳ ತೆರಿಗೆ ನಂತರದ ಲಾಭ ಹೆಚ್ಚಾಗಲು ಮುಖ್ಯ ಕಾರಣ.

ಜಾಗತಿಕ ಅರ್ಥ ವ್ಯವಸ್ಥೆಯು ದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ. ಆರ್ಥಿಕ ಹಿಂಜರಿತ ಎದುರಾಗುವ ಅಪಾಯಗಳು ಹೆಚ್ಚಾಗಿವೆ ಎಂದು ಕೂಡ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಹಲವು ಬಗೆಯ ಆಘಾತಗಳು ಒಂದರ ಮೇಲೆ ಇನ್ನೊಂದರಂತೆ ಪರಿಣಾಮ ಬೀರಿದ ಕಾರಣದಿಂದಾಗಿ, ಹಣಕಾಸಿನ ಸ್ಥಿತಿ ಬಿಗಿಗೊಂಡಿದೆ. ಹಣಕಾಸು ಮಾರುಕಟ್ಟೆಗಳಲ್ಲಿ ಅಸ್ಥಿರತೆ ಹೆಚ್ಚಾಗಿದೆ ಎಂದು ವರದಿಯು ಹೇಳಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆ ಅರ್ಥವ್ಯವಸ್ಥೆಗಳಿಗೆ ಸವಾಲುಗಳು ಇನ್ನಷ್ಟು ಕಠಿಣವಾಗಿರುತ್ತವೆ. ಇವು ಜಾಗತಿಕ ಪರಿಣಾಮಗಳನ್ನು, ಕರೆನ್ಸಿ ಅಸ್ಥಿರತೆಯನ್ನು ಮತ್ತು ಬಂಡವಾಳದ ಹೊರಹರಿವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದೆ.

ಕೋವಿಡ್ ನಿರ್ವಹಣೆ: ಭಾರತ ಮೂಲದ ವ್ಯಕ್ತಿಗೆ ಸಿಂಗಪುರ ಪ್ರಶಸ್ತಿ

ಸಿಂಗಪುರ (ಪಿಟಿಐ): ದೇಶದಲ್ಲಿ ಕೋವಿಡ್‌-19 ನಿರ್ವಹಣೆ ಹಾಗೂ ಕೋವಿಡ್ ಲಸಿಕೆ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ್ದನ್ನು ಪರಿಗಣಿಸಿ, ಭಾರತ ಮೂಲದ ಆರೋಗ್ಯಾಧಿಕಾರಿ ದಿನೇಶ್ ವಾಸು ದಾಸ್ ಎಂಬುವವರನ್ನು ಸಿಂಗಪುರ ಸರ್ಕಾರವು ‘ಪಬ್ಲಿಕ್ ಸರ್ವೀಸ್ ಸ್ಟಾರ್’ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಈ ಪ್ರಶಸ್ತಿಗೆ ಆಯ್ಕೆಯಾಗಿರುವುದಕ್ಕೆ ಪ್ರತಿಕ್ರಿಯಿಸಿರುವ ದಿನೇಶ್, ‘ಬದ್ಧತೆ ಹಾಗೂ ವೃತ್ತಿಪರತೆ ಹೊಂದಿದ್ದವರನ್ನು ಒಳಗೊಂಡ ತಂಡ ನನ್ನ ಬೆನ್ನಿಗೆ ಇತ್ತು. ಸಿಂಗಪುರದ ಜನರನ್ನು ಕೋವಿಡ್ ಪಿಡುಗು ಬಾಧಿಸದಂತೆ ತಡೆಯಲು ಇದರಿಂದ ಸಾಧ್ಯವಾಯಿತು’ ಎಂದು ಹೇಳಿದ್ದಾರೆ.

ಈ ಪ್ರಶಸ್ತಿಗೆ ಒಟ್ಟು 32 ಜನರನ್ನು ಆಯ್ಕೆ ಮಾಡಲಾಗಿದೆ.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹13650
ಎಸಿ	₹7000
ಆರ್‌ಪಿ	₹8000
ಆರ್‌ಸಿ	₹4700

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹7200-8092
ಪುತ್ತೂರು	₹11500-12050
ತುರುವೇಕೆರೆ	₹12000-12050

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಚಿತ್ರದುರ್ಗ	
ಆಪಿ	45119-45529
ಬೆಟ್ಟೆ	32649-33069
ಕೆಂಪುಗೋಟು	28600-29000
ರಾಶಿ	44639-45099
ಕಾರ್ಕಳ	
ಹೊಸತು	30000-37500
ಹಳತು	40000-54500
ಕುಮಟ	
ಚಿಪ್ಪು	23600-32369
ಕೋಕ	13209-28699
ಹಳೆಚಾಲಿ	38449-40519
ಹೊಸಚಾಲಿ	28789-34519
ಪುತ್ತೂರು	
ಕೋಕ	11000-26000
ಹೊಸತು	32000-38000
ಸಾಗರ	
ಬಿಳಿಗೋಟು	18699-29799
ಚಾಲಿ	29870-38204
ಕೋಕ	22989-32700
ಕೆಂಪುಗೋಟು	33319-36899
ರಾಶಿ	36699-45239
ಸಿಪ್ಪೆಗೋಟು	7869-21215
ಶಿವಮೊಗ್ಗ	
ಬೆಟ್ಟೆ	40009-52399
ಗೊರಬಲು	17001-34369
ರಾಶಿ	40469-45799
ಸರಕು	48159-80936
ಸಿದ್ದಾಪುರ	
ಬಿಳಿಗೋಟು	28699-32699
ಚಾಲಿ	37199-41509
ಕೋಕ	26099-30699
ಕೆಂಪುಗೋಟು	29699-30699
ರಾಶಿ	43009-44609
ತಟ್ಟಿಬೆಟ್ಟೆ	36509-43009
ಶಿರಸಿ	
ಬೆಟ್ಟೆ	34499-42823
ಬಿಳಿಗೋಟು	18319-35699
ಚಾಲಿ	36199-36199
ಕೆಂಪುಗೋಟು	30899-33699
ರಾಶಿ	38809-44809
ಯಲ್ಲಾಪುರ	
ಬಿಳಿಗೋಟು	24899-33891
ಹಳೆಚಾಲಿ	34299-40760
ಕೋಕ	18299-30016
ಕೆಂಪುಗೋಟು	24899-34799
ರಾಶಿ	42590-51379
ತಟ್ಟಿಬೆಟ್ಟೆ	35899-41899

ಮಕ್ಕಳಿಗೆ ಗುರಿ ನಿಗದಿಪಡಿಸಿದ ಅಂಬಾನಿ

ನವದೆಹಲಿ (ಪಿಟಿಐ): 2023ರ ಅಂತ್ಯದೊಳಗೆ 5ಜಿ ಸೇವೆಗಳನ್ನು ದೇಶದ ಎಲ್ಲೆಡೆ ಶುರುಮಾಡಬೇಕು, ರಿಟೇಲ್ ವಿಭಾಗದಲ್ಲಿ ಇನ್ನಷ್ಟು ಮಹತ್ವಾಕಾಂಕ್ಷೆ ಹೊಂದಬೇಕು ಹಾಗೂ ಕಂಪನಿಯನ್ನು ದೇಶದ ಅತ್ಯಂತ ಹೆಚ್ಚು ಪರಿಸರಸ್ನೇಹಿ ಕಂಪನಿಯಾಗಿಸಬೇಕು ಎಂಬ ಗುರಿಗಳನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ತಮ್ಮ ಪುತ್ರರು ಮತ್ತು ಪುತ್ರಿಗೆ ನಿಗದಿಪಡಿಸಿದ್ದಾರೆ.

ರಿಲಯನ್ಸ್ ಸಂಸ್ಥಾಪಕ ಧೀರೂಭಾಯ್ ಅಂಬಾನಿ ಅವರ ಜನ್ಮದಿನದ ಅಂಗವಾಗಿ ಕಂಪನಿಯ ಉದ್ಯೋಗಿಗಳನ್ನು ಉದ್ದೇಶಿಸಿ ಅಂಬಾನಿ ಬುಧವಾರ ಮಾತನಾಡಿದ್ದಾರೆ.

ಅವರ ಮಾತಿನ ವಿವರಗಳನ್ನು ಗುರುವಾರ ಪ್ರಕಟಿಸಲಾಗಿದೆ. ದೂರಸಂಪರ್ಕ ಮತ್ತು ಡಿಜಿಟಲ್ ವಹಿವಾಟುಗಳಿಗೆ ಆಕಾಶ್ ಅಂಬಾನಿ, ರಿಟೇಲ್ ವಹಿವಾಟಿಗೆ ಇಶಾ ಮತ್ತು ನವ ಇಂಧನ ವಹಿವಾಟಿನ ಮುಂದಾಳತ್ವ ಅನಂತ್ ಅವರಿಗೆ ಇರಲಿದೆ ಎಂದಿದ್ದಾರೆ.

‘ಆಕಾಶ್ ಅಧ್ಯಕ್ಷತೆಯಲ್ಲಿ ಜಿಯೊ 5ಜಿ ನೆಟ್‌ವರ್ಕ್ ಆರಂಭಿಸುತ್ತಿದೆ. ಇದು 2023ರಲ್ಲಿ ಪೂರ್ಣಗೊಳ್ಳಲಿದೆ’ ಎಂದು ಅಂಬಾನಿ ಹೇಳಿದ್ದಾರೆ. ಇಶಾ ನೇತೃತ್ವದ ರಿಟೇಲ್ ವಹಿವಾಟು ತಂಡವು ‘ಇನ್ನೂ ಮಹತ್ವಾಕಾಂಕ್ಷೆಯ ಗುರಿಗಳನ್ನು ಬೆನ್ನಟ್ಟುವ ಸಾಮರ್ಥ್ಯ ಹೊಂದಿದೆ’ ಎಂದಿದ್ದಾರೆ.

‘ಅನಂತ್ ಅವರು ಮುಂದಿನ ತಲೆಮಾರಿನ (ನವ ಇಂಧನ) ವಹಿವಾಟಿಗೆ ಪ್ರವೇಶಿಸಿದ್ದಾರೆ. ಜಾಮ್‌ನಗರದಲ್ಲಿ ನಮ್ಮ ಗಿಗಾ ಫ್ಯಾಕ್ಟರಿ ಸಜ್ಜುಗೊಳಿಸುವಲ್ಲಿ ಮುಂದಡಿ ಇರಿಸುತ್ತಿದ್ದೇವೆ. ನವ ಇಂಧನ ವಹಿವಾಟಿನ ತಂಡವು, ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ದೇಶಕ್ಕೆ ನೆರವಾಗಬೇಕು’ ಎಂದು ಮುಕೇಶ್ ಅಂಬಾನಿ ಹೇಳಿದ್ದಾರೆ.

120 ಕ್ಷಿಪಣಿಗಳನ್ನು ಉಡಾಯಿಸಿದ ರಷ್ಯಾ

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ

ಕೀವ್/ಮಾಸ್ಕೊ/ಬೆಲರೂಸ್ (ಎಪಿ/ರಾಯಿಟರ್ಸ್/ಎಎಫ್‌ಪಿ): ಉಕ್ರೇನ್‌ನ ಅಭೇದ್ಯ ಕೋಟೆ, ರಾಜಧಾನಿ ಕೀವ್ ನಗರ ಸಹಿತ ದೇಶದ ಹಲವು ಪ್ರದೇಶಗಳಲ್ಲಿ ವಿದ್ಯುತ್ ಸ್ಥಾವರಗಳು ಮತ್ತು ಪ್ರಮುಖ ಮೂಲಸೌಕರ್ಯಗಳು ಗುರುವಾರ ರಷ್ಯಾದ ಭಾರಿ ಕ್ಷಿಪಣಿಗಳ ದಾಳಿಗೆ ಗುರಿಯಾದವು.

ರಷ್ಯಾ ಪಡೆಗಳ ಈ ಭೀಕರ ದಾಳಿ ತೀವ್ರ ಚಳಿಗಾಲದಿಂದ ತತ್ತರಿಸಿರುವ ಯುದ್ಧಪೀಡಿತ ದೇಶದ ಜನರನ್ನು ಮತ್ತಷ್ಟು ಸಮಸ್ಯೆಗೆ ಸಿಲುಕಿಸಿದೆ. ಶೇ 40ರಷ್ಟು ವಿದ್ಯುತ್, ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ.

ಪ್ರಾದೇಶಿಕ ಆಡಳಿತದ ಪ್ರಕಾರ, ಕೀವ್‌ನಲ್ಲಿ ವಾಯು ದಾಳಿಯ ರಕ್ಷಣಾ ವ್ಯವಸ್ಥೆಗಳನ್ನು ಗುರುವಾರ ಸಕ್ರಿಯಗೊಳಿಸಲಾಯಿತು. ನಗರದಲ್ಲಿ ಸ್ಫೋಟಗಳ ಶಬ್ಧ ಕೇಳಿಬಂದಿತು. ಹಾರ್ಕಿವ್ ಮತ್ತು ಪೋಲೆಂಡ್ ಗಡಿಯ ಸಮೀಪದ ಲುವಿವ್, ಕೆರ್ಸಾನ್ ಹಾಗೂ ಒಡೆಸ್ಸಾ ನಗರಗಳಲ್ಲಿ ಹಲವು ಬಾರಿ ಸ್ಫೋಟಗಳು ನಡೆದವು. ಕೀವ್, ಸುಮಿ ಮತ್ತು ಮೇಲೆ ತೂರಿ ಬಂದ ಬಹುತೇಕ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ.

ವಾಯು ದಾಳಿಯ ಎಚ್ಚರಿಕೆಯ ಸೈರನ್‌ಗಳು ದೇಶದಾದ್ಯಂತ ಧ್ವನಿಸಿದವು. ರಷ್ಯಾ ಪಡೆಗಳು ಸುಮಾರು 120 ಕ್ಷಿಪಣಿಗಳನ್ನು ಒಂದೇ ದಿನದಲ್ಲಿ ಉಡಾಯಿಸಿವೆ. ತಕ್ಷಣಕ್ಕೆ ಸಾವು–ನೋವಿನ ವರದಿ ಸಿಕ್ಕಿಲ್ಲ. ನಿರ್ಣಾಯಕ ಮೂಲಸೌಕರ್ಯ ನಾಶಪಡಿಸುವ ಮತ್ತು ನಾಗರಿಕರ ಸಾಮೂಹಿಕ ಹತ್ಯೆಯ ಗುರಿಯನ್ನು ರಷ್ಯಾ ಹೊಂದಿದೆ ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರ ಸಲಹೆಗಾರ ಮಿಖಾಯಿಲೊ ಪೊಡೊಲಿಯಾಕ್ ದೂರಿದರು.

ಬೆಳಿಗ್ಗೆ ಕಾರ್ಯತಂತ್ರದ ವಿಮಾನ ಮತ್ತು ಹಡಗುಗಳಿಂದ ವಾಯು ಮತ್ತು ಸಮುದ್ರದ ಮೂಲಕ ಕ್ರೂಸ್ ಕ್ಷಿಪಣಿಗಳ ದಾಳಿ ನಡೆಯಿತು. ಸುಮಾರು 59 ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ. ರಷ್ಯಾ ಪಡೆಗಳು ಬುಧವಾರ ರಾತ್ರಿಯಿಡೀ ಆಯ್ದ ಪ್ರದೇಶಗಳ ಮೇಲೆ ಸ್ಫೋಟಕ ಡ್ರೋನ್‌ಗಳಿಂದ ದಾಳಿ ಮಾಡಿವೆ ಎಂದು ಉಕ್ರೇನ್ ವಾಯುಪಡೆ ಹೇಳಿದೆ.

ದೇಶದ ಬ್ರೆಸ್ಟ್ ಗಡಿ ಪ್ರದೇಶದಲ್ಲಿ ಉಕ್ರೇನ್‌ನ ಎಸ್ -300 ಕ್ಷಿಪಣಿಯನ್ನು ತಮ್ಮ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆ ಗುರುವಾರ ಬೆಳಿಗ್ಗೆ ಹೊಡೆದುರುಳಿಸಿದೆ ಎಂದು ಬೆಲರೂಸ್ ರಕ್ಷಣಾ ಸಚಿವಾಲಯದ ಮಾಹಿತಿ ಉಲ್ಲೇಖಿಸಿ ಸರ್ಕಾರಿ ಸುದ್ದಿ ಸಂಸ್ಥೆ ‘ಬೆಲ್ಟಾ’ ವರದಿ ಮಾಡಿದೆ.

ಅಮೆರಿಕವು ಪೇಟ್ರಿಯಾಟ್ ಕ್ಷಿಪಣಿಗಳನ್ನು ಉಕ್ರೇನ್‌ಗೆ ಪೂರೈಸಿದ ಬೆನ್ನಲ್ಲೇ ರಷ್ಯಾವು ಉಕ್ರೇನ್ ಗಡಿಗೆ ಹತ್ತಿರದ ತನ್ನ ಏಂಗೆಲ್ಸ್ ವಾಯು ನೆಲೆಯಲ್ಲಿ ವಾಯು ರಕ್ಷಣಾ ವ್ಯವಸ್ಥೆ ಸಕ್ರಿಯಗೊಳಿಸಿತು. ಈ ವಾಯು ನೆಲೆಯಲ್ಲಿ ರಷ್ಯಾ ತನ್ನ ಕಾರ್ಯತಂತ್ರದ ಯುದ್ಧ ವಿಮಾನಗಳನ್ನು ನೆಲೆಗೊಳಿಸಿದೆ. ಉಕ್ರೇನ್ ಸೇನೆ ಇತ್ತೀಚೆಗೆ ವಿಮೋಚನೆಗೊಳಿಸಿದ ದಕ್ಷಿಣದ ಕೆರ್ಸಾನ್ ನಗರವು ನಿಪ್ರೊ ನದಿಯ ದಂಡೆಗುಂಟ ಬೀಡು ಬಿಟ್ಟಿರುವ ರಷ್ಯಾ ಪಡೆಗಳಿಂದ ಮಾರ್ಟರ್ ಮತ್ತು ಶೆಲ್ ದಾಳಿಗೆ ತುತ್ತಾಯಿತು.

2022 ಹಿನ್ನೋಟ



2022: ಮಹತ್ವದ ವಿಲೀನ, ಸ್ವಾಧೀನ ಪ್ರಕ್ರಿಯೆ

2022ನೆಯ ಇಸವಿಯು ದೇಶದ ಕಾರ್ಪೊರೇಟ್ ವಲಯದಲ್ಲಿ ದೊಡ್ಡ ವಿಲೀನ ಹಾಗೂ ಸ್ವಾಧೀನ ಘೋಷಣೆಗಳಿಗೆ ಸಾಕ್ಷಿಯಾಗಿದೆ. ಪ್ರಮುಖವಾದ ಕೆಲವು ವಿಲೀನ ಹಾಗೂ ಸ್ವಾಧೀನ ಪ್ರಕ್ರಿಯೆಗಳ ಮೇಲೊಂದು ಪಕ್ಷಿನೋಟ ಇಲ್ಲಿದೆ.

- ದೇಶದ ಅತಿದೊಡ್ಡ ಗೃಹ ಹಣಕಾಸು ಕಂಪನಿ ಎಚ್‌ಡಿಎಫ್‌ಸಿ, ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ವಿಲೀನವಾಗುವ ಘೋಷಣೆ ಏಪ್ರಿಲ್‌ನಲ್ಲಿ ಆಯಿತು. ಈ ವಿಲೀನವು ದೇಶದ ಕಾರ್ಪೊರೇಟ್ ಇತಿಹಾಸದಲ್ಲಿನ ಅತಿದೊಡ್ಡ ವಿಲೀನ ಪ್ರಕ್ರಿಯೆ ಆಗಲಿದೆ ಎಂದು ತಜ್ಞರು ಬಣ್ಣಿಸಿದ್ದರು. ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ವಿಲೀನದ ನಂತರ ಸೃಷ್ಟಿಯಾಗುವ ಬ್ಯಾಂಕ್, ಐಸಿಐಸಿಐ ಬ್ಯಾಂಕ್‌ಗಿಂತ ಎರಡು ಪಟ್ಟು ದೊಡ್ಡದಾಗಿ ಇರಲಿದೆ ಎಂದು ರೇಟಿಂಗ್ಸ್ ಕಂಪನಿ ಎಸ್‌ಆ್ಯಂಡ್‌ಪಿ ಗ್ಲೋಬಲ್ ಹೇಳಿತ್ತು.
- ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯು 67 ವರ್ಷಗಳ ಬಳಿಕ, ಈ ವರ್ಷದ ಜನವರಿಯಲ್ಲಿ ಮತ್ತೆ ಟಾಟಾ ಸಮೂಹದ ತೆಕ್ಕೆಗೆ ಸೇರಿತು, ಟಾಟಾ ಸಮೂಹವು ಏರ್ ಇಂಡಿಯಾ ಮಾಲೀಕತ್ವವನ್ನು ವಹಿಸಿಕೊಂಡಿತು. ‘ವಿಸ್ತಾರಾ’ ವಿಮಾನಯಾನ ಕಂಪನಿಯನ್ನು ಏರ್ ಇಂಡಿಯಾದಲ್ಲಿ ವಿಲೀನಗೊಳಿಸಲಾಗುವುದು ಎಂದು ಟಾಟಾ ಸಮೂಹವು ನವೆಂಬರ್‌ನಲ್ಲಿ ಪ್ರಕಟಿಸಿತು. ವಿಸ್ತಾರಾ–ಏರ್ ಇಂಡಿಯಾ ವಿಲೀನವು ದೇಶದ ವಿಮಾನಯಾನ ಕ್ಷೇತ್ರದ ಪಾಲಿಗೆ ಮಹತ್ವದ್ದು.
- ಅದಾನಿ ಸಮೂಹವು ಹೋಲ್ಸಿಮ್ ಲಿಮಿಟೆಡ್‌ನ ಭಾರತದ ವಹಿವಾಟನ್ನು ₹ 81,375 ಕೋಟಿಗೆ ಖರೀದಿಸುವುದಾಗಿ ಮೇ ತಿಂಗಳಲ್ಲಿ ಹೇಳಿತು. ಈ ಮೂಲಕ ಸಿಮೆಂಟ್ ಉತ್ಪಾದನೆ ವಲಯವನ್ನು ಅದಾನಿ ಸಮೂಹವು ಪ್ರವೇಶಿಸಿತು. ಹೋಲ್ಸಿಮ್‌ನ ಅಂಗಸಂಸ್ಥೆಗಳಾದ ಎಸಿಸಿ ಲಿಮಿಟೆಡ್ ಮತ್ತು ಅಂಬುಜಾ ಸಿಮೆಂಟ್ ನಿಯಂತ್ರಣವು ಅದಾನಿ ಸಮೂಹಕ್ಕೆ ಸಿಕ್ಕಿತು.
- ಷೇರುಪೇಟೆಯಲ್ಲಿ ನೋಂದಾಣಿ ಆಗಿರುವ ಪ್ರಮುಖ ಸುದ್ದಿಮಾಧ್ಯಮ ಕಂಪನಿಗಳ ಪೈಕಿ ಒಂದಾಗಿರುವ ‘ಎನ್‌ಡಿಟಿವಿ’ಯನ್ನು ಅದಾನಿ ಸಮೂಹ ತನ್ನದಾಗಿಸಿಕೊಂಡಿತು.
- ಬಿ2ಬಿ ವಹಿವಾಟುಗಳಲ್ಲಿ ಜನಪ್ರಿಯತೆ ಪಡೆದಿರುವ ಮೆಟ್ರೊ ಕ್ಯಾಶ್ ಆ್ಯಂಡ್ ಕ್ಯಾರಿ ಕಂಪನಿಯ ಭಾರತದ ವಹಿವಾಟುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಘೋಷಣೆಯನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮಾಡಿತು. ಮೆಟ್ರೊ ಕಂಪನಿಯು 21 ನಗರಗಳಲ್ಲಿ 31 ದೊಡ್ಡ ಗಾತ್ರದ ಮಳಿಗೆಗಳನ್ನು ಹೊಂದಿದೆ.
- ದೇಶದ ಉದ್ದಗಲಕ್ಕೂ ಸಿನಿಮಾ ಮಲ್ಟಿಪ್ಲೆಕ್ಸ್ ಹೊಂದಿರುವ ಪಿವಿಆರ್ ಲಿಮಿಟೆಡ್ ಮತ್ತು ಐನಾಕ್ಸ್ ಲೀಷರ್ ಕಂಪನಿಗಳು ವಿಲೀನವಾಗುವ ಘೋಷಣೆ ಮಾರ್ಚ್‌ನಲ್ಲಿ ಹೊರಬಿತ್ತು. ಸಿನಿಮಾ ಪ್ರದರ್ಶನ ಉದ್ಯಮ ಕೋವಿಡ್ ಸಾಂಕ್ರಾಮಿಕ ಹಾಗೂ ಒಟಿಟಿ ವೇದಿಕೆಗಳ ಬೆಳವಣಿಗೆಯಿಂದಾಗಿ ತೊಂದರೆಗೆ ಒಳಗಾಗಿರುವ ಸಂದರ್ಭದಲ್ಲಿ ಈ ವಿಲೀನ ಘೋಷಣೆ ಆಯಿತು.

ಎಲ್‌ಐಸಿ ಐಪಿಒ

ದೇಶದ ಐಪಿಒಗಳ ಪೈಕಿ ಅತಿದೊಡ್ಡದು ಎಲ್‌ಐಸಿ ಐಪಿಒ. ಈ ಪ್ರಕ್ರಿಯೆಯ ಮೂಲಕ ಭಾರತೀಯ ಜೀವ ವಿಮಾ ನಿಗಮವು ಷೇರುಪೇಟೆಯಲ್ಲಿ ನೋಂದಾಯಿತವಾಯಿತು. ಎಲ್‌ಐಸಿ ಐಪಿಒ ಮೂಲಕ ಕೇಂದ್ರ ಸರ್ಕಾರವು ₹ 20,557 ಕೋಟಿ ಬಂಡವಾಳ ಸಂಗ್ರಹಿಸಿತು. ಆದರೆ, ಐಪಿಒ ಮೂಲಕ ಷೇರು ಖರೀದಿಸಿದ್ದವರು ಇಂದಿಗೂ ನಷ್ಟದಲ್ಲಿದ್ದಾರೆ.

ಕಾಂಬೋಡಿಯಾ: ಕ್ಯಾಸಿನೊದಲ್ಲಿ ಬೆಂಕಿ–19 ಸಾವು

ಪೊಯೆಪೆಟ್, ಕಾಂಬೋಡಿಯಾ (ಎಎಫ್‌ಪಿ/ರಾಯಿಟರ್ಸ್): ಪೊಯೆಪೆಟ್‌ನ ಗ್ರ್ಯಾಂಡ್ ಡೈಮೆಂಡ್ ಸಿಟಿ ಹೋಟೆಲ್‌ನ ಕ್ಯಾಸಿನೊದಲ್ಲಿ ಬೆಂಕಿ ಕಾಣಿಸಿಕೊಂಡು 19 ಮಂದಿ ಮೃತಪಟ್ಟಿದ್ದು, 30 ಜನರು ನಾಪತ್ತೆಯಾಗಿದ್ದಾರೆ. ಮೃತರ ಸಂಖ್ಯೆ ಹೆಚ್ಚಾಗುವ ಶಂಕೆ ವ್ಯಕ್ತವಾಗಿದೆ.

ಈ ಹೋಟೆಲ್ ಥಾಯ್ಲೆಂಡ್ ಗಡಿ ಬಳಿ ಇದೆ. ‘19 ಮಂದಿ ಮೃತಪಟ್ಟಿದ್ದಾರೆ. ಕಟ್ಟಡದ ಇನ್ನಷ್ಟು ಜಾಗವನ್ನು ರಕ್ಷಣಾ ಸಿಬ್ಬಂದಿ ಇನ್ನುವರೆಗೂ ತಲುಪಿಲ್ಲ. ಆದ್ದರಿಂದ ಈ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ’ ಎಂದು ಪ್ರಾಂತೀಯ ಮಾಹಿತಿ ವಿಭಾಗದ ನಿರ್ದೇಶಕ ಸೆಕ್ ಸೊಖೊಂ ಮಾಹಿತಿ ನೀಡಿದ್ದಾರೆ. ‘ಸುಮಾರು 60 ಮಂದಿ ಅವಘಡದಲ್ಲಿ ಸಿಲುಕಿಕೊಂಡಿದ್ದರು. ಅವರನ್ನು ಆಸ್ಪತ್ರೆಗಳಿಗೆ ಕಳುಹಿಸಲಾಗಿದೆ’ ಎಂದರು.

ಮಹದಾಯಿ ನೀರಿಗೆ ಹೋರಾಟ ನಿಲ್ಲದು: ಪ್ರಮೋದ್ ಸಾವಂತ್

ಪ್ರಜಾವಾಣಿ ವಾರ್ತೆ

ಪಣಜಿ: ಮಹದಾಯಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕದ ವಿರುದ್ಧ ನಡೆಯುತ್ತಿರುವ ಕಾನೂನು ಮತ್ತು ರಾಜಕೀಯ ಹೋರಾಟದಲ್ಲಿ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ತಮ್ಮ ರಾಜ್ಯದ ಹಿತಾಸಕ್ತಿಗೆ ದ್ರೋಹ ಬಗೆದಿದ್ದಾರೆ ಎಂದು ಆರೋಪಿಸಿ ಗೋವಾದ ಪ್ರತಿಪಕ್ಷಗಳು ಗುರುವಾರ ವಾಗ್ದಾಳಿ ನಡೆಸಿವೆ.

ಮಹದಾಯಿ ಯೋಜನೆಯ ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗ ಅನುಮೋದನೆ ನೀಡಿದ ಬೆನ್ನಲ್ಲೆ ಅಂತರ ರಾಜ್ಯ ನೀರು ಹಂಚಿಕೆ ವಿವಾದದಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಸಾವಂತ್ ಸಮರ್ಥಿಸಿಕೊಂಡಿದ್ದಾರೆ.

‘ಮಹದಾಯಿ ನೀರಿಗಾಗಿ ಹೋರಾಟ ಮುಂದುವರಿಸಲಾಗುವುದು. ಡಿಪಿಆರ್ ಅನುಮೋದನೆ ಹೊರತಾಗಿಯೂ ಕರ್ನಾಟಕ ಮಹದಾಯಿ ನದಿ ನೀರನ್ನು ತಿರುಗಿಸಲು ಸಾಧ್ಯವಿಲ್ಲ. ಏಕೆಂದರೆ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ಕಳಸಾ ನದಿ ನೀರನ್ನು ಯಾವುದೇ ರೀತಿಯಲ್ಲಿ ತಿರುಗಿಸಲು ಸಾಧ್ಯವಿಲ್ಲ’ ಎಂದು ಸಾವಂತ್ ಹೇಳಿದರು.

ಕಳಸಾ ನದಿಯಿಂದ ಯಾವುದೇ ನೀರನ್ನು ಅಕ್ರಮವಾಗಿ ತಿರುಗಿಸದಂತೆ ನೋಡಿಕೊಳ್ಳಲು ಕೂಡಲೇ ಮಹದಾಯಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸಾವಂತ್ ಅವರು ಬಿಜೆಪಿ ಆಡಳಿತವಿರುವ ಕರ್ನಾಟಕದ ಪರವಾಗಿ ಗೋವಾದ ಹಿತಾಸಕ್ತಿಯನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಮಾಜಿ ಉಪ ಮುಖ್ಯಮಂತ್ರಿ ಮತ್ತು ಗೋವಾ ಫಾರ್ವರ್ಡ್ ಪಕ್ಷದ ಶಾಸಕ ವಿಜಯ್ ಸರ್ದೇಸಾಯಿ ಟ್ವೀಟ್ ಮಾಡಿದ್ದಾರೆ.

ಕಳಸಾ ಬಂಡೂರಿ; ತಕ್ಷಣವೇ ಕಾಮಗಾರಿಗೆ ಚಾಲನೆ: ಬೊಮ್ಮಾಯಿ

ಒಂದನೇ ಪುಟದಿಂದ

‘ಪರಿಷ್ಕೃತ ಡಿಪಿಆರ್‌ಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇಡೀ ಕರ್ನಾಟಕದ ಜನರ, ವಿಶೇಷವಾಗಿ ಉತ್ತರ ಕರ್ನಾಟಕದ ಜನರ, ಪ್ರಧಾನಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ’ ಎಂದರು.

ರಕ್ತದಲ್ಲಿ ಮನವಿ ಬರೆದಿದ್ದ ಬೊಮ್ಮಾಯಿ: ಕಳಸಾ–ಬಂಡೂರಿ ಯೋಜನೆ ಅನುಷ್ಠಾನಕ್ಕಾಗಿ 2003ರಲ್ಲಿ 10 ದಿನಗಳ ಪಾದಯಾತ್ರೆ ನಡೆಸಿದ್ದ ಬಸವರಾಜ ಬೊಮ್ಮಾಯಿ, ಯೋಜನೆ ಜಾರಿಗೆ ಆಗ್ರಹಿಸಿ ರಕ್ತದಲ್ಲಿ ಮನವಿ ಪತ್ರ ಬರೆದಿದ್ದರು.

ಜೆಡಿಯುನಿಂದ ವಿಧಾನಪರಿಷತ್ ಸದಸ್ಯರಾಗಿದ್ದ ಅವರು, ಅವಿಭಜಿತ ಧಾರವಾಡ ಜಿಲ್ಲೆಯ ವ್ಯಾಪ್ತಿಗೆ ನೀರುಣಿಸುವ ಯೋಜನೆ ಜಾರಿಗಾಗಿ 2003ರ ಜುಲೈ 10ರಂದು ಧಾರವಾಡದಿಂದ ಪಾದಯಾತ್ರೆ ಆರಂಭಿಸಿದ್ದರು. ಈ ಯೋಜನೆಯ ನೀರು ಪೂರೈಕೆಯಾಗುವ ನಗರ–ಗ್ರಾಮೀಣ ಪ್ರದೇಶದಲ್ಲಿ ಯಾತ್ರೆ ನಡೆಸಿ ಜನರನ್ನು ಸಂಘಟಿಸಿದ್ದರು. ರೈತ ಹುತಾತ್ಮರ ದಿನದಂದು ನರಗುಂದದಲ್ಲಿ ಯಾತ್ರೆ ಮುಕ್ತಾಯದ ಅಂಗವಾಗಿ ಬೃಹತ್ ಸಮಾವೇಶವೂ ನಡೆದಿತ್ತು. ಅದೇ, ಸಮಾವೇಶದಲ್ಲಿ ರಕ್ತದಲ್ಲಿ ಮನವಿ ಪತ್ರ ಬರೆದಿದ್ದರು.

ದೆಹಲಿಯ ಜಂತರ್ ಮಂತರ್‌ನಲ್ಲಿ ಜಾರ್ಜ್ ಫರ್ನಾಂಡಿಸ್ ನೇತೃತ್ವದಲ್ಲಿ 2004ರ ಡಿಸೆಂಬರ್‌ನಲ್ಲಿ ಧರಣಿ ನಡೆದಿತ್ತು. ಬಸವರಾಜ ಬೊಮ್ಮಾಯಿ, ಈಗಿನ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಮೊದಲಾದವರು ಪಾಲ್ಗೊಂಡಿದ್ದರು.

ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯೋಜನೆಗೆ ಚಾಲನೆ ನೀಡಲಾಗಿತ್ತು. 2008ರಲ್ಲಿ ಅಸ್ತಿತ್ವಕ್ಕೆ ಬಂದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಬೊಮ್ಮಾಯಿ, ಪೂರ್ಣ ಪ್ರಮಾಣದ ಸಮಗ್ರ ಯೋಜನಾ ವರದಿ ಸಿದ್ಧಪಡಿಸಿದ್ದರು. ಟೆಂಡರ್ ಕರೆದು ಐದು ಕಿ.ಮೀ ಸಂಪರ್ಕ ಕಾಲುವೆಯ ಕಾಮಗಾರಿಯನ್ನೂ ನಡೆಸಿದ್ದರು.

ಪ್ರತಿಭಟನೆಗೆ ಹೆದರಿ ಒಪ್ಪಿಗೆ: ಸಿದ್ದರಾಮಯ್ಯ

ಜನವರಿ 2ರಂದು ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ‘ಮಹದಾಯಿ ಜನಾಂದೋಲನ’ಕ್ಕೆ ಹೆದರಿ ತರಾತುರಿಯಲ್ಲಿ ಆದೇಶ ಹೊರಡಿಸಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ಮಹದಾಯಿ ಯೋಜನೆಗೆ ಇದ್ದ ಅಡೆತಡೆ ನಿವಾರಿಸಿ ಯೋಜನೆ ಜಾರಿ ಮಾಡುವುದಾಗಿ ಯಡಿಯೂರಪ್ಪ ಹೇಳಿದ್ದರು. ಇಲ್ಲಿಯವರೆಗೂ ಮಾಡಿರಲಿಲ್ಲ. ಅಧಿಸೂಚನೆ ಹೊರಡಿಸಿ ಎರಡು ವರ್ಷ ಆಗಿದೆ. ಇಲ್ಲಿಯವರೆಗೂ ಸುಮ್ಮನಿದ್ದ ಕೇಂದ್ರ ಸರ್ಕಾರ, ಚುನಾವಣೆ ಹೊತ್ತಿಗೆ ಇದಕ್ಕೆ ಅನುಮೋದನೆ ಕೊಟ್ಟಿದೆ ಎಂದರು.

ಕಾಂಗ್ರೆಸ್ ಹಮ್ಮಿಕೊಂಡಿರುವ ಆಂದೋಲನವು ಎಂಟು ವರ್ಷ ಅಧಿಕಾರದ ಗಾಢ ನಿದ್ರೆಯಲ್ಲಿ ಮಲಗಿದ್ದ ಮೋದಿ ಸರ್ಕಾರವನ್ನು ಎಬ್ಬಿಸಿದೆ. ವಿಳಂಬವಾಗಿ ನೀಡಿರುವ ಅನುಮೋದನೆಯು ಬಿಜೆಪಿ ಮಾಡಿರುವ ಮಹಾದ್ರೋಹ. ಇದನ್ನು ಕನ್ನಡಿಗರು, ಅದರಲ್ಲೂ ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಜನರು ಎಂದಿಗೂ ಕ್ಷಮಿಸುವುದಿಲ್ಲ ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

ಕನ್ನಡಿಗರ ಹೋರಾಟಕ್ಕೆ ದೊರೆತ ಫಲ: ಎಚ್‌.ಡಿ. ಕುಮಾರಸ್ವಾಮಿ

ಕಳಸಾ ಬಂಡೂರಿ ವಿಸ್ತೃತ ಯೋಜನೆಗೆ ಕೇಂದ್ರ ಜಲ ಆಯೋಗ ಒಪ್ಪಿಗೆ ನೀಡಿರುವುದು ಸಮಸ್ತ ಕನ್ನಡಿಗರ ಹೋರಾಟಕ್ಕೆ ದೊರೆತ ಫಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ರಾಜಕೀಯಕ್ಕೆ ಅತೀತವಾಗಿ ರೈತರು, ಕನ್ನಡಪರ ಹೋರಾಟಗಾರರು, ಕಾರ್ಮಿಕರು ಸೇರಿ ಎಲ್ಲರೂ ನಡೆಸಿದ ಸಮಷ್ಟಿ ಹೋರಾಟಕ್ಕೆ ಸಂದ ಜಯ ಇದು. ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡರು ಸಂಸತ್ತಿನ ಒಳಗೆ, ಹೊರಗೆ ದೊಡ್ಡ ಸಂಘರ್ಷವನ್ನೇ ನಡೆಸಿದ್ದಾರೆ. ಕೆಲ ದಿನಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಈ ಬಗ್ಗೆ ಮಾತುಕತೆ ನಡೆಸಿದ್ದರು ಎಂದು ಅವರು ಹೇಳಿದ್ದಾರೆ.

ಮಹದಾಯಿ: ಡಿಪಿಆರ್‌ಗೆ ಹಸಿರು ನಿಶಾನೆ

ಒಂದನೇ ಪುಟದಿಂದ

‘ಇತರ ಯಾವುದೇ ನದಿಗಳ ತಿರುವಿನಿಂದ ಕೃಷ್ಣಾ ನದಿಯ ನೀರಿನ ಪ್ರಮಾಣ ಏರಿಕೆಯಾದರೆ, ಯಾವುದೇ ರಾಜ್ಯಗಳು ಯಾವುದೇ ಪ್ರಾಧಿಕಾರ ಅಥವಾ ನ್ಯಾಯಾಧೀಕರಣದ ಎದುರು ಅದರ ಹಕ್ಕು ಕೇಳುವುದರಿಂದ ತಡೆಯುವಂತಿಲ್ಲ. ಅದನ್ನು ಪ್ರಶ್ನಿಸುವುದರಿಂದ ಕೂಡ ಯಾವುದೇ ರಾಜ್ಯವನ್ನು ತಡೆಯುವಂತಿಲ್ಲ’ ಎಂದು ಬಚಾವತ್ ಆಯೋಗ ಸ್ಪಷ್ಟಪಡಿಸಿದೆ’ ಎಂಬ ಕಾರಣ ಮುಂದಿಟ್ಟುಕೊಂಡು ಆಯೋಗವು ಪೂರ್ವ ಕಾರ್ಯಸಾಧ್ಯತಾ ವರದಿಗಳಿಗೆ ಒಪ್ಪಿಗೆ ಕೊಟ್ಟಿರಲಿಲ್ಲ.


‘ಒಂದು ವೇಳೆ ಇಂತಹ ಪರಿಸ್ಥಿತಿ ಎದುರಾದರೆ ಕರ್ನಾಟಕ ಸರ್ಕಾರ ಅದನ್ನು ಪರಿಣಾಮಕಾರಿಯಾಗಿ ನಿಭಾಯಿಸಲಿದೆ. ಬಚಾವತ್ ಅಯೋಗದ ಷರತ್ತಿನ ಪ್ರಕಾರ, ಮಹದಾಯಿ ಯೋಜನೆಗೆ ನದಿ-ತೀರದ ಇತರ ರಾಜ್ಯಗಳ ಅನುಮತಿ ಪಡೆಯುವುದು ಕಡ್ಡಾಯವಲ್ಲ. ಈ ಅಂಶವನ್ನು ಪರಿಗಣಿಸಿ ಜಲ ಆಯೋಗವು ವರದಿಗೆ ಒಪ್ಪಿಗೆ ನೀಡಬೇಕು’ ಎಂದು ಕರ್ನಾಟಕ ಸರ್ಕಾರವು ಕೋರಿತ್ತು. ಬಳಿಕ ಸರ್ಕಾರವು ಯೋಜನಾ ಸ್ವರೂಪ (ಅರಣ್ಯ ಭೂಮಿ ಕಡಿಮೆ ಬಳಕೆ ಹಾಗೂ ಪೈಪ್ ಮೂಲಕ ನೀರು ಹರಿಸುವುದು) ಬದಲಿಸಿ ಜಲ ಆಯೋಗಕ್ಕೆ ಡಿಪಿಆರ್ ಸಲ್ಲಿಸಿತ್ತು.

2012ರಲ್ಲಿ ಈ ಯೋಜನೆಯ ವೆಚ್ಚ ₹840 ಕೋಟಿ ಆಗಿತ್ತು. ಕರ್ನಾಟಕ ಸರ್ಕಾರ 2021–22ರಲ್ಲಿ ಯೋಜನಾ ಮೊತ್ತವನ್ನು ₹1,677 ಕೋಟಿಗೆ ಏರಿಸಿ ಆಡಳಿತಾತ್ಮಕ ಅನುಮೋದನೆ ನೀಡಿತ್ತು. ಈಗ ಯೋಜನೆಯ ಮೊತ್ತ ₹1,759 ಕೋಟಿ ಆಗಿದೆ. 2022–23ನೇ ಸಾಲಿನ ಬಜೆಟ್‌ನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ₹500 ಕೋಟಿ ಮೀಸಲಿಡಲಾಗಿದೆ.

ಇದು ಕುಡಿಯುವ ನೀರಿನ ಯೋಜನೆ ಆಗಿರುವುದರಿಂದ ‘ಪರಿಸರ ಪರಿಣಾಮ ಅಧ್ಯಯನ ಅಧಿಸೂಚನೆ–2006’ರ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಯೋಜನೆ ಅನುಷ್ಠಾನಕ್ಕೆ ತಕರಾರು ಇಲ್ಲ ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯ 2019ರಲ್ಲೇ ಸ್ಪಷ್ಟಪಡಿಸಿದೆ.

> **ಯೋಜನೆಗೆ ಸಂಬಂಧಪಟ್ಟ ಶಾಸನಬದ್ಧ ಅನುಮತಿಗಳನ್ನು ಪಡೆಯಲು ಹಾಗೂ ಶೀಘ್ರದಲ್ಲಿ ಯೋಜನೆ ಅನುಷ್ಠಾನಗೊಳಿಸಲು ಇದು ರಹದಾರಿಯಾಗಿದೆ**
>
> **ಮೋಹನ್ ಕಾತರಕಿ,** ಸುಪ್ರೀಂ ಕೋರ್ಟ್ ಹಿರಿಯ ವಕೀಲ

ಮಹದಾಯಿ ನ್ಯಾಯಾಧೀಕರಣದಿಂದ ನೀರಿನ ಹಂಚಿಕೆ (ಟಿಎಂಸಿ ಅಡಿಯಲ್ಲಿ)



ಅಂಕಿ-ಅಂಶಗಳು

- **2,032** ಚ.ಕಿ.ಮೀ — ಮಹದಾಯಿ ಜಲಾನಯನ ಪ್ರದೇಶ
- **1,580** ಚ.ಕಿ.ಮೀ — ಗೋವಾದಲ್ಲಿರುವ ಜಲಾನಯನ ಪ್ರದೇಶ (ಶೇ 78)
- **375** ಚ.ಕಿ.ಮೀ — ಕರ್ನಾಟಕದಲ್ಲಿರುವ ಜಲಾನಯನ ಪ್ರದೇಶ (ಶೇ 18)
- **77** ಚ.ಕಿ.ಮೀ — ಮಹಾರಾಷ್ಟ್ರದಲ್ಲಿರುವ ಜಲಾನಯನ ಪ್ರದೇಶ (ಶೇ 4)

ಕರ್ನಾಟಕಕ್ಕೆ ನ್ಯಾಯಾಧೀಕರಣಕ್ಕೆ ನೀರಿನ ಹಂಚಿಕೆ ಪ್ರಮಾಣ (ಟಿಎಂಸಿ ಅಡಿಯಲ್ಲಿ)

- **1.72** — ಕಳಸಾ ನಾಲಾ ತಿರುವು ಯೋಜನೆ
- **2.18** — ಬಂಡೂರಿ ನಾಲಾ ತಿರುವು ಯೋಜನೆ
- **8.02** — ಮಹದಾಯಿ ಜಲವಿದ್ಯುತ್ ಯೋಜನೆ
- **1.5** — ಮಹದಾಯಿ ಕಣಿವೆಯೊಳಗಿನ ಪ್ರದೇಶಗಳ ನೀರಾವರಿ, ಕುಡಿಯುವ ನೀರಿನ ಬಳಕೆ ಮತ್ತು ಇತರೆ ಸೌಲಭ್ಯಗಳಿಗಾಗಿ

ಜಲ ಆಯೋಗದ ಷರತ್ತುಗಳೇನು?

ಜಲ ಆಯೋಗವು ತಾಂತ್ರಿಕ ಮೌಲ್ಯಮಾಪನ ನಡೆಸಿ ಡಿಪಿಆರ್‌ಗೆ ಒಪ್ಪಿಗೆ ಕೊಟ್ಟಿದೆ. ಆದರೆ, ಕೆಲವೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದೆ. ಈ ಮಂಜೂರಾತಿಯು ಅರಣ್ಯ ಸಂರಕ್ಷಣಾ ಕಾಯ್ದೆ 1981 ಮತ್ತು ಪರಿಸರ ಸಂರಕ್ಷಣಾ ಕಾಯ್ದೆ 1985 ಅಡಿಯಲ್ಲಿ ಕೇಂದ್ರ ಸರ್ಕಾರದ ಅನುಮತಿಗಳನ್ನು ಪಡೆಯುವುದಕ್ಕೆ ಒಳಪಟ್ಟಿರುತ್ತದೆ.

ಷರತ್ತುಗಳೇನು:

- ಯೋಜನಾ ಪ್ರಾಧಿಕಾರವು ಕಡ್ಡಾಯವಾಗಿ ನ್ಯಾಯಾಧೀಕರಣದ ತೀರ್ಪಿನ ಅನುಸಾರ ಇತರ ತಾಂತ್ರಿಕ ಏಜೆನ್ಸಿಗಳಿಂದ ಅನುಮೋದನೆ ಪಡೆಯುವುದು ಕಡ್ಡಾಯ.
- ಜಲ ಆಯೋಗವು ನೀಡಿರುವ ಅಭಿಪ್ರಾಯಗಳನ್ನು ಯೋಜನಾ ಪ್ರಾಧಿಕಾರ ಪರಿಗಣಿಸಬೇಕು. ಯೋಜನೆಯ ಅಂತಿಮ ವಿನ್ಯಾಸ ಮಹದಾಯಿ ನ್ಯಾಯಾಧೀಕರಣದ ತೀರ್ಪಿನ ನಿರ್ದೇಶನಗಳನ್ನು ಸಂಪೂರ್ಣವಾಗಿ ಒಳಗೊಂಡಿರಬೇಕು.
- ಯೋಜನಾ ಪ್ರಾಧಿಕಾರ ಮಹದಾಯಿ ನ್ಯಾಯಾಧೀಕರಣದ ತೀರ್ಪಿನಲ್ಲಿ ಉಲ್ಲೇಖಿಸಿರುವ ಎಲ್ಲ ಕಾನೂನುಬದ್ಧವಾದ ಕಡ್ಡಾಯ ಹಾಗೂ ಶಾಸನಬದ್ಧ ನಿರಕ್ಷೇಪಣಾ ಪತ್ರಗಳನ್ನು ಪಡೆದಿರಬೇಕು.
- ಮಹದಾಯಿ ನದಿ ನೀರನ್ನು ಪ್ರತಿನಿತ್ಯ ಎಷ್ಟು ಬಳಸಿಕೊಳ್ಳಲಾಗಿದೆ ಎಂಬ ಬಗ್ಗೆ ಕರ್ನಾಟಕ ಸರ್ಕಾರವು ಗೋವಾ, ಮಹಾರಾಷ್ಟ್ರ ರಾಜ್ಯಗಳಿಗೆ ನಿಯಮಿತವಾಗಿ ಮಾಹಿತಿ ನೀಡಬೇಕು. ಮಹದಾಯಿ ನ್ಯಾಯಾಧೀಕರಣದ ತೀರ್ಪಿನ ನಿಯಮ 12ರಲ್ಲಿ ಉಲ್ಲೇಖಿಸಿದಂತೆ ‘ಮಹದಾಯಿ ನದಿ ನೀರು ನಿರ್ವಹಣಾ ಪ್ರಾಧಿಕಾರ’ ಸ್ಥಾಪನೆಯಾದ ನಂತರ ಈ ಯೋಜನೆಗಳಿಗಾಗಿ ನದಿ ನೀರು ಬಳಕೆ ತಿರುವು ತೀರ್ಮಾನಗಳನ್ನು ಈ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕೈಗೊಳ್ಳಬೇಕು.
- ಈ ಯೋಜನೆಗೆ ಅನುಮತಿ ನೀಡಿರುವುದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿರುವ ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ಸರ್ಕಾರಗಳ ಪ್ರತ್ಯೇಕ ಅರ್ಜಿಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಅರಣ್ಯ ಅನುಮೋದನೆಯ ಸವಾಲು

ಮಹದಾಯಿ (ಕಳಸಾ- ಬಂಡೂರಿ) ಯೋಜನೆಯ ಪರಿಷ್ಕೃತ ಪೂರ್ವ ಕಾರ್ಯಸಾಧ್ಯತಾ ವರದಿಯ ಪ್ರಕಾರ, ಯೋಜನೆಯ ಅನುಷ್ಠಾನಕ್ಕೆ 61 ಹೆಕ್ಟೇರ್ ಅರಣ್ಯ ಭೂಮಿ ಬೇಕಿದೆ. ಈ ಅರಣ್ಯ ಭೂಮಿ ಬಳಕೆಗೆ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅನುಮತಿ ಪಡೆಯಬೇಕಿದೆ.

ಕಳಸಾ ಯೋಜನೆಗೆ 16.6 ಹೆಕ್ಟೇರ್ ಅರಣ್ಯ ಹಾಗೂ 11.27 ಹೆಕ್ಟೇರ್ ಅರಣ್ಯೇತರ ಭೂಮಿ, ಬಂಡೂರಿ ಯೋಜನೆಗೆ 44 ಹೆಕ್ಟೇರ್ ಅರಣ್ಯ ಹಾಗೂ 11.05 ಹೆಕ್ಟೇರ್ ಅರಣ್ಯೇತರ ಭೂಮಿ ಬೇಕಿದೆ.

‘ಯೋಜನೆಗಾಗಿ ಅರಣ್ಯದ ಭೂಮಿಯನ್ನು ಪಡೆಯಬೇಕಿದೆ. ಹೀಗಾಗಿ, ಅನುಮೋದನೆ ಪಡೆಯಲು ಕರ್ನಾಟಕ ಸರ್ಕಾರದ ಮುಂದೆ ಬಹುದೊಡ್ಡ ಸವಾಲು ಇದೆ. ಇದಕ್ಕಾಗಿ ಸಚಿವಾಲಯಕ್ಕೆ ಸಾಕಷ್ಟು ವಿವರಣೆಗಳನ್ನು ನೀಡಬೇಕಾಗುತ್ತದೆ’ ಎಂದು ಜಲಶಕ್ತಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಿದೇಶದಲ್ಲಿ ವ್ಯಾಸಂಗ ಮಾಡಿ, ಭಾರತದಲ್ಲಿ ಕಡ್ಡಾಯ ಪರೀಕ್ಷೆ ಉತ್ತೀರ್ಣರಾಗದ ಆರೋಪ

ಅನರ್ಹರಿಂದ ವೈದ್ಯ ವೃತ್ತಿ: ಸಿಬಿಐ ಶೋಧ

ನವದೆಹಲಿ (ಪಿಟಿಐ): ವಿದೇಶಗಳಲ್ಲಿ ವೈದ್ಯಕೀಯ ಕೋರ್ಸ್ ವ್ಯಾಸಂಗ ಮಾಡಿದವರು ಭಾರತದಲ್ಲಿ ಕಡ್ಡಾಯ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೂ ಅವರಿಗೆ ದೇಶದಲ್ಲಿ ವೈದ್ಯಕೀಯ ವೃತ್ತಿ ಮಾಡಲು ಕೆಲವು ರಾಜ್ಯಗಳ ವೈದ್ಯಕೀಯ ಪರಿಷತ್ತುಗಳು ಅನುಮತಿ ನೀಡಿವೆ ಎಂಬ ಆರೋಪದ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ, ಗುರುವಾರ ದೇಶದಾದ್ಯಂತ 91 ಸ್ಥಳಗಳಲ್ಲಿ ಶೋಧ ನಡೆಸಿದೆ.

14 ರಾಜ್ಯಗಳ ವೈದ್ಯಕೀಯ ಪರಿಷತ್ತುಗಳು ಹಾಗೂ 73 ವೈದ್ಯಕೀಯ ಪದವೀಧರರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿದೆ. ಈ ವಿದ್ಯಾರ್ಥಿಗಳು ಭಾರತದಲ್ಲಿ ವೃತ್ತಿಯಲ್ಲಿ ತೊಡಗಬೇಕಿದ್ದರೆ ವಿದೇಶಿ ವೈದ್ಯಕೀಯ ಪದವೀಧರ ಪರೀಕ್ಷೆಯಲ್ಲಿ (ಎಫ್‌ಎಂಜಿಇ) ಕಡ್ಡಾಯವಾಗಿ ಉತ್ತೀರ್ಣರಾಗಬೇಕು. ರಾಷ್ಟ್ರೀಯ ಪರೀಕ್ಷಾ ಮಂಡಳಿಯು (ಎನ್‌ಬಿಇ) ಈ ಪರೀಕ್ಷೆ ನಡೆಸುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅಥವಾ ರಾಜ್ಯಗಳ ವೈದ್ಯಕೀಯ ಮಂಡಳಿಗಳಲ್ಲಿ ತಾತ್ಕಾಲಿಕ ಅಥವಾ ಕಾಯಂ ನೋಂದಣಿಗೆ ಅವಕಾಶ ಸಿಗುತ್ತದೆ.

ಪರೀಕ್ಷಾ ಫಲಿತಾಂಶವನ್ನು ವಿದ್ಯಾರ್ಥಿಗಳು ಹಾಗೂ ಸಂಬಂಧಿತ ಮಂಡಳಿಗಳಿಗೆ ಎನ್‌ಬಿಇ ಕಳುಹಿಸಿಕೊಡುತ್ತದೆ. ಒಂದು ವೇಳೆ ವಿದ್ಯಾರ್ಥಿಗಳು ನಕಲಿ ಉತ್ತೀರ್ಣ ಪ್ರಮಾಣ ಪತ್ರಗಳನ್ನು ನೀಡಿದರೆ, ವೈದ್ಯಕೀಯ ಮಂಡಳಿಗಳು ಎನ್‌ಬಿಇ ಕಳುಹಿಸಿದ ಪರೀಕ್ಷಾ ಫಲಿತಾಂಶದ ಜೊತೆ ಪರಿಶೀಲಿಸಬೇಕಿತ್ತು ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಭ್ರಷ್ಟಾಚಾರ, ಅಪರಾಧ ಸಂಚು, ವಂಚನೆ ಆರೋಪದ ಮೇಲೆ ವಿವಿಧ ರಾಜ್ಯಗಳ ವೈದ್ಯಕೀಯ ಮಂಡಳಿಗಳು ಹಾಗೂ ಭಾರತೀಯ ವೈದ್ಯಕೀಯ ಮಂಡಳಿಯ ಅಧಿಕಾರಿಗಳು ಮತ್ತು 73 ವಿದ್ಯಾರ್ಥಿಗಳ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

ಲಂಚ–ರಕ್ಷಣಾ ಲೆಕ್ಕಪತ್ರ ಸೇವೆ ಅಧಿಕಾರಿ ಬಂಧನ: ₹10 ಲಕ್ಷ ಲಂಚ ಪಡೆದ ಆರೋಪದಲ್ಲಿ ಭಾರತೀಯ ರಕ್ಷಣಾ ಲೆಕ್ಕಪತ್ರ ಸೇವೆಯ ಅಧಿಕಾರಿಯೊಬ್ಬರನ್ನು ಸಿಬಿಐ ಗುರುವಾರ ಬಂಧಿಸಿದೆ. ಖಾಸಗಿ ಕಂಪನಿಗಳಿಗೆ ಗುತ್ತಿಗೆ ಕೊಡಿಸಲು ಹಾಗೂ ಬಾಕಿ ಬಿಲ್ ಪಾವತಿಗೆ ಅವರು ನೆರವಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಪಿಎಫ್‌ಐ: ಕೇರಳದ 56 ಸ್ಥಳಗಳಲ್ಲಿ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಕ್ಕೆ (ಪಿಎಫ್‌ಐ) ಸಂಬಂಧಿಸಿದ ಕೇರಳದ 56 ಸ್ಥಳಗಳಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಗುರುವಾರ ಶೋಧ ನಡೆಸಿದೆ. ಕಾನೂನುಬಾಹಿರ ಹಾಗೂ ಹಿಂಸಾತ್ಮಕ ಚಟುವಟಿಕೆ ಆರೋಪದಲ್ಲಿ 12 ಜಿಲ್ಲೆಗಳಲ್ಲಿ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಿಎಫ್‌ಐನ ರಾಜ್ಯ ಕಾರ್ಯಕಾರಿ ಸಮಿತಿಯ ಏಳು ಸದಸ್ಯರು, ಪ್ರಾದೇಶಿಕ ಮುಖ್ಯಸ್ಥರು, ಹರಿತವಾದ ಆಯುಧಗಳ ಬಳಕೆಯ ತರಬೇತಿ ಪಡೆದ 15 ಸದಸ್ಯರ ನಿವಾಸಗಳಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ. ಇತರ 20 ಮಂದಿ ಶಂಕಿತರ ನಿವಾಸಗಳಲ್ಲೂ ಶೋಧ ನಡೆದಿದೆ.

ಎರ್ನಾಕುಲಂನ 13, ಕಣ್ಣೂರಿನ ಒಂಬತ್ತು, ಮಲಪ್ಪುರಂನ ಏಳು, ವಯನಾಡ್‌ನ ಆರು, ಕೋಯಿಕ್ಕೋಡ್‌ನ ನಾಲ್ಕು, ತಿರುವನಂತಪುರ, ಪತ್ತಣಂತಿಟ್ಟ ಹಾಗೂ ಆಲಪ್ಪುಳದ ತಲಾ ಮೂರು, ತ್ರಿಶ್ಶೂರ್ ಹಾಗೂ ಕೋಟಯಂನ ತಲಾ ಎರಡು ಮತ್ತು ಪಾಲಕ್ಕಾಡ್‌ನ ಒಂದು ಸ್ಥಳದಲ್ಲಿ ಶೋಧ ನಡೆದಿದೆ.

'ಪರಿಶೀಲನೆ ವೇಳೆ ಹರಿತವಾದ ಆಯುಧಗಳು, ಪ್ರಚೋದನಕಾರಿ ಸಾಹಿತ್ಯ ಹಾಗೂ ಡಿಜಿಟಲ್ ಉಪಕರಣಗಳು ಪತ್ತೆಯಾಗಿವೆ. ಭಯೋತ್ಪಾದಕ ಸಂಘಟನೆಗಳಿಗೆ ಯುವಕರನ್ನು ಪಿಎಫ್‌ಐ ಸೆಳೆಯುತ್ತಿರುವುದು ಕಂಡುಬಂದಿದೆ' ಎಂದು ಎನ್‌ಐಎ ತಿಳಿಸಿದೆ.

ಸೆ.19ರಂದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ತನಿಖಾ ಸಂಸ್ಥೆಯು, ಮೂರು ದಿನಗಳ ಬಳಿಕ ಕೇರಳದ 24 ಸ್ಥಳಗಳಲ್ಲಿ ಶೋಧ ನಡೆಸಿತ್ತು. ಪಿಎಫ್‌ಐ ಕಚೇರಿಗಳು ಹಾಗೂ 13 ಆರೋಪಿಗಳ ಮನೆಗಳಲ್ಲಿ ಪರಿಶೀಲನೆ ನಡೆಸಿತ್ತು. ಸಂಘಟನೆಯ ಪದಾಧಿಕಾರಿಗಳನ್ನು ಗುರಿಯಾಗಿಸಿ, ಅದೇ ತಿಂಗಳಲ್ಲಿ 15 ರಾಜ್ಯಗಳಲ್ಲಿ ವಿವಿಧ ಭದ್ರತಾ ಸಂಸ್ಥೆಗಳು ಏಕಕಾಲಕ್ಕೆ ಶೋಧ ನಡೆಸಿದ್ದವು.

ಅತ್ಯಾಚಾರ, ಮತಾಂತರಕ್ಕೆ ಒತ್ತಾಯ: ಮೂವರ ಬಂಧನ

ನೊಯಿಡಾ (ಪಿಟಿಐ): ವಿವಾಹದ ನೆಪದಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರವೆಸಗಿ, ಮತಾಂತರಕ್ಕೆ ಪ್ರಯತ್ನಿಸಿದ ಆರೋಪದ ಮೇಲೆ 30 ವರ್ಷದ ಇಂತೆಜಾರ್ ಖಾನ್ (30) ಎಂಬಾತನನ್ನು ನೊಯಿಡಾ ಬಳಿ ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಅಲ್ಲದೆ, ಈ ಸಂಚಿನಲ್ಲಿ ಭಾಗಿಯಾದ್ದಾರೆ ಎನ್ನಲಾದ ಆರೋಪಿಯ ತಮ್ಮ ಸುಹೈಲ್ (24) ಹಾಗೂ ತಂದೆ ಅಬ್ಬಾಸ್ ಅಲಿಯನ್ನೂ (52) ಬಂಧಿಸಲಾಗಿದೆ ಎಂದರು.

'ಆರೋಪಿ ಇಂತೆಜಾರ್ ಸಂತ್ರಸ್ತೆಯನ್ನು ಶಾಹ್‌ಬೆರಿಯಲ್ಲಿನ ಜಿಮ್‌ವೊಂದರಲ್ಲಿ ಮೊದಲ ಬಾರಿಗೆ ಭೇಟಿಯಾಗಿದ್ದ. ಆ ಜಿಮ್‌ನಲ್ಲಿ ಸಂತ್ರಸ್ತೆಯು ವ್ಯವಸ್ಥಾಪಕಿಯಾಗಿ ಕೆಲಸ ಮಾಡುತ್ತಿದ್ದಳು. ತನ್ನನ್ನು ಸೋನು ಎಂದು ಸಂತ್ರಸ್ತೆಯೊಂದಿಗೆ ಪರಿಚಯಿಸಿಕೊಂಡಿದ್ದ ಇಂತೆಜಾರ್ ತನ್ನ ಧಾರ್ಮಿಕ ಗುರುತನ್ನು ಮುಚ್ಚಿಟ್ಟಿದ್ದ' ಎಂದೂ ಹೇಳಿದರು.

'ಆರೋಪಿಯು ತನಗೆ ವಿವಾಹದ ಆಮಿಷವೊಡ್ಡಿ ಅತ್ಯಾಚಾರ ನಡೆಸಿದ್ದಲ್ಲದೇ ಮತಾಂತರಕ್ಕೂ ಪ್ರಯತ್ನಿಸಿದ್ದಾಗಿ ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಹೆಚ್ಚುವರಿ ಉಪ ಪೊಲೀಸ್ ಆಯುಕ್ತ ಸಾದ್ ಮಿಯಾ ಖಾನ್ ಹೇಳಿದರು.

ಬಾಲಕಿ ಮೇಲೆ ಅತ್ಯಾಚಾರ: ಸ್ವಾಮೀಜಿ ಬಂಧನ

ಜೈಪುರ(ಪಿಟಿಐ): 17 ವರ್ಷ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಸ್ವಾಮೀಜಿ ಸರ್ಜುದಾಸ್ ಮಹಾರಾಜ್ ಅವರನ್ನು ಬುಧವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಕ್ಸೊ) ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376 ಅಡಿ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ. ಬಂಧನದ ಬಳಿಕ ಅವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸುವಂತೆ ಮ್ಯಾಜಿಸ್ಟ್ರೇಟ್ ಆದೇಶ ನೀಡಿದರು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಸಂತ್ರಸ್ತೆಯ ತಾಯಿ ಈ ತಿಂಗಳ ಆರಂಭದಲ್ಲಿ ಆ್ಯಸಿಡ್ ದಾಳಿಗೆ ಒಳಗಾಗಿದ್ದು, ದಾಳಿ ಹಿಂದೆ ಸರ್ಜುದಾಸ್ ಮಹಾರಾಜ್ ಇರುವುದಾಗಿ ಅವರು ದೂರಿದ್ದರು. ಆಕೆಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಸಂತ್ರಸ್ತೆ, ಆಶ್ರಮದಲ್ಲಿ ಸ್ವಾಮೀಜಿ ನೀಡಿದ ಕಿರುಕುಳಗಳ ಕುರಿತು ವಿವರಿಸುವ ವೇಳೆ ತಾನು ಕಳೆದ ಎರಡು ವರ್ಷಗಳಿಂದ ಸರ್ಜುದಾಸ್‌ರಿಂದ ಅತ್ಯಾಚಾರಕ್ಕೆ ಒಳಗಾಗಿದ್ದಾಗಿ ಹೇಳಿದ್ದಳು. ಆರೋಪದ ಕುರಿತು ತನಿಖೆ ನಡೆಸಿದ ಬಳಿಕ ಸ್ವಾಮೀಜಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಭದ್ರತೆಗೆ ರಾಹುಲ್ ಅಸಹಕಾರ'

ನವದೆಹಲಿ (ಪಿಟಿಐ): 'ಭಾರತ್ ಜೋಡೊ ಯಾತ್ರೆ'ಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರ ಭದ್ರತೆಯಲ್ಲಿ ಲೋಪವಾಗಿದೆ ಎಂದು ಕಾಂಗ್ರೆಸ್ ಮಾಡಿರುವ ಆರೋಪವನ್ನು ಕೇಂದ್ರ ಸರ್ಕಾರದ ಅಧಿಕಾರಿಗಳು ತಳ್ಳಿಹಾಕಿದ್ದಾರೆ. ರಾಹುಲ್ ಅವರೇ ಭದ್ರತೆಗೆ ಸಹಕರಿಸುತ್ತಿಲ್ಲ ಎಂದು ಕೇಂದ್ರದ ಭದ್ರತಾ ಸಂಸ್ಥೆಗಳು ಆರೋಪಿಸಿವೆ.

'ಭಾರತ್ ಜೋಡೊ ಯಾತ್ರೆ'ಯು ದೆಹಲಿಯಲ್ಲಿದ್ದಾಗ, ರಾಹುಲ್ ಅವರಿಗೆ ಅಗತ್ಯ ಭದ್ರತೆ ಒದಗಿಸಿಲ್ಲ. ಅವರ ಭದ್ರತೆಯಲ್ಲಿ ಲೋಪವಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬುಧವಾರ ಪತ್ರ ಬರೆದಿದ್ದರು. ಜತೆಗೆ, ಭದ್ರತೆಯನ್ನು ಖಚಿತಪಡಿಸುವಂತೆ ಆಗ್ರಹಿಸಿದ್ದರು. ಈ ಪತ್ರಕ್ಕೆ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಅಧಿಕಾರಿಗಳು ಪ್ರತಿಕ್ರಿಯೆ ನೀಡಿದ್ದಾರೆ.

'ಯಾವುದೇ ವ್ಯಕ್ತಿಗೆ ಅಗತ್ಯ ಭದ್ರತೆಯನ್ನು ಒದಗಿಸಿದಾಗ, ಆ ವ್ಯಕ್ತಿಯೂ ಭದ್ರತಾ ಶಿಷ್ಟಾಚಾರಗಳನ್ನು ಪಾಲಿಸಿದರೆ ಮಾತ್ರ ಭದ್ರತಾ ವ್ಯವಸ್ಥೆ ಪರಿಣಾಮಕಾರಿ ಆಗಿರುತ್ತದೆ. ಆದರೆ, ರಾಹುಲ್ ಗಾಂಧಿ ಅವರು 2020ರಿಂದ ಈವರೆಗೆ 113 ಬಾರಿ ಇಂತಹ ಶಿಷ್ಟಾಚಾರಗಳನ್ನು ಉಲ್ಲಂಘಿಸಿದ್ದಾರೆ. ಅವರಿಗೂ ಈ ಬಗ್ಗೆ ಮಾಹಿತಿ ನೀಡಲಾಗಿದೆ' ಎಂದು ಸಿಆರ್‌ಪಿಎಫ್ ತಿಳಿಸಿದೆ.

ದೆಹಲಿಯಲ್ಲಿ ಡಿಸೆಂಬರ್ 24ರಂದು ನಡೆದ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಭದ್ರತಾ ಲೋಪವಾಗಿದೆ ಎಂಬ ವಿಚಾರವನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತಿದೆ. ಪ್ರತಿ ರಾಜ್ಯದಲ್ಲೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಸಿಆರ್‌ಪಿಎಫ್ ರಾಹುಲ್ ಅವರಿಗೆ ಭದ್ರತೆ ಒದಗಿಸುತ್ತಾ ಬಂದಿದೆ. ದೆಹಲಿಯಲ್ಲೂ ಅವರಿಗೆ ಅಗತ್ಯ ಭದ್ರತೆ ಒದಗಿಸುವಂತೆ ದೆಹಲಿ ಪೊಲೀಸರಿಗೆ ಮುಂಚಿತವಾಗಿಯೇ ಮಾಹಿತಿ ನೀಡಲಾಗಿತ್ತು. ಡಿಸೆಂಬರ್ 22ರಂದೇ ಪೂರ್ವಭಾವಿಯಾಗಿ ಭದ್ರತೆಯನ್ನು ಪರಿಶೀಲಿಸಲಾಗಿತ್ತು. ಅಗತ್ಯ ಸಿಬ್ಬಂದಿಯನ್ನು ದೆಹಲಿ ಪೊಲೀಸ್ ಇಲಾಖೆ ಒದಗಿಸಿತ್ತು. ಮಾರ್ಗಸೂಚಿಯ ಅನುಗುಣವಾಗಿಯೇ ಅವರಿಗೆ ಭದ್ರತೆಯನ್ನು ಒದಗಿಸಲಾಗಿದೆ ಎಂದು ಸಿಆರ್‌ಪಿಎಫ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಚಾರಣೆ ಬಗ್ಗೆ ಪ್ರತಿಕ್ರಿಯೆ ಇಲ್ಲ: ಹರಿಯಾಣದಲ್ಲಿ ರಾಜ್ಯ ಗುಪ್ತಚರ ಇಲಾಖೆಯ ಅಧಿಕಾರಿಗಳು 'ಭಾರತ್ ಜೋಡೊ' ಯಾತ್ರಿಗಳ ಕಂಟೇನರ್‌ಗಳಿಗೆ ನುಗ್ಗಿ ತನಿಖೆ ನಡೆಸಿದ್ದರು ಎಂದು ಕಾಂಗ್ರೆಸ್ ಆರೋಪಿಸಿತ್ತು. ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯವಾಗಲೀ, ಹರಿಯಾಣ ಗುಪ್ತಚರ ಇಲಾಖೆ ಮತ್ತು ರಾಜ್ಯ ಸರ್ಕಾರವಾಗಲೀ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಮೋದಿ ಶಿಷ್ಟಾಚಾರ ಪಾಲಿಸುತ್ತಾರೆಯೇ?'

'ಭದ್ರತೆ ವಿಚಾರದಲ್ಲಿ ಬಿಜೆಪಿ ಸರ್ಕಾರವು ಗಾಂಧಿ ಕುಟುಂಬದವರನ್ನು ಗುರಿ ಮಾಡಬಾರದು' ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹೇಳಿದ್ದಾರೆ.

'ರಾಹುಲ್ ಗಾಂಧಿ ಅವರೇ ಭದ್ರತೆಗೆ ಸಹಕಾರ ನೀಡುತ್ತಿಲ್ಲ. ಜನರನ್ನು ಭೇಟಿ ಮಾಡುತ್ತಾರೆ ಎಂದು ಭದ್ರತಾ ಸಂಸ್ಥೆಗಳು ಆರೋಪಿಸಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಭದ್ರತಾ ಶಿಷ್ಟಾಚಾರಗಳನ್ನು ಪಾಲಿಸುತ್ತಾರೆಯೇ? ಗುಜರಾತ್ ಚುನಾವಣಾ ಪ್ರಚಾರದ ವೇಳೆ ಮೋದಿ ಅವರೂ, ಜನರ ಬಳಿಗೆ ಹೋಗುತ್ತಿದ್ದರು ಮತ್ತು ಜನರನ್ನು ಭೇಟಿ ಮಾಡಿ ಮಾತನಾಡುತ್ತಿದ್ದರು. ಹಾಗೆಂದು ಅವರ ಭದ್ರತೆಯನ್ನು ಸಡಿಲಗೊಳಿಸಲಾಗಿತ್ತೇ' ಎಂದು ಅವರು ಪ್ರಶ್ನಿಸಿದ್ದಾರೆ.

ದಲೈಲಾಮಾಗೆ ಬೆದರಿಕೆ: ಬೋಧಗಯಾದಲ್ಲಿ ಕಟ್ಟೆಚ್ಚರ

ನವದೆಹಲಿ (ಪಿಟಿಐ): ಟಿಬೆಟ್ ಧರ್ಮಗುರು ದಲೈಲಾಮಾ ಅವರಿಗೆ ಚೀನಾ ಮಹಿಳೆಯೊಬ್ಬರು ಬೆದರಿಕೆ ಹಾಕಿರುವ ಹಿನ್ನೆಲೆಯಲ್ಲಿ ಗುರುವಾರ ಬಿಹಾರದ ಬೋಧಗಯಾದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಲಾಗಿದೆ.

'ಭದ್ರತಾ ವಿಚಾರ' ಆಗಿರುವುದರಿಂದ ಹೆಚ್ಚಿನ ಪ್ರತಿಕ್ರಿಯೆ ನೀಡಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ನಿರಾಕರಿಸಿದೆ.

'ಭದ್ರತೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಇದು ಸರಿಯಾದ ವೇದಿಕೆಯಲ್ಲ ಎಂದು ಭಾವಿಸುತ್ತೇನೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಹೇಳಿದ್ದಾರೆ.

ದಲೈಲಾಮಾ ಭೇಟಿ ಹಿನ್ನೆಲೆಯಲ್ಲಿ ಬೋಧ್ ಗಯಾದಲ್ಲಿ ಭದ್ರತೆ ಬಿಗಿಗೊಳಿಸಿದ್ದು, ಇದೇ ವೇಳೆ ಪೊಲೀಸರು ಚೀನಾದ ಮಹಿಳೆಗಾಗಿ ಶೋಧ ಆರಂಭಿಸಿದ್ದಾರೆ. ಮಹಿಳೆಯ ಚಿತ್ರವನ್ನು ಬಿಡುಗಡೆ ಮಾಡಿದ ಅವರು, ಮಹಿಳೆಯನ್ನು ಸಾಂಗ್ ಷಿಯಾವ್ಲೊಲನ್ ಎಂದು ಗುರುತಿಸಿದರು. ಆಕೆಯ ವೀಸಾ, ಪಾಸ್‌ಪೋರ್ಟ್ ಮಾಹಿತಿಯನ್ನು ಕೂಡಾ ಮಾಧ್ಯಮಗಳಿಗೆ ನೀಡಿದರು.

ತಯಾರಿಕೆ ಸ್ಥಗಿತಗೊಳಿಸಿದ ಕಂಪನಿ

ಭಾರತದ ಕಂಪನಿಯ ಕೆಮ್ಮಿನ ಔಷಧಿ ಸೇವನೆ: ಉಜ್ಬೇಕಿಸ್ತಾನದ 18 ಮಕ್ಕಳ ಸಾವು

ಉಜ್ಬೇಕಿಸ್ತಾನ/ನವದೆಹಲಿ (ಪಿಟಿಐ, ರಾಯಿಟರ್ಸ್): ಭಾರತದ ಔಷಧಿ ತಯಾರಿಕಾ ಕಂಪನಿ ಮ್ಯಾರಿಯೊನ್ ಬಯೋಟೆಕ್‌ನ ಕೆಮ್ಮಿನ ಔಷಧ 'ಡಾಕ್–1–ಮ್ಯಾಕ್ಸ್' ಸೇವಿಸಿ 18 ಮಕ್ಕಳು ಮೃತಪಟ್ಟಿದ್ದಾರೆ ಎಂದು ಉಜ್ಬೇಕಿಸ್ತಾನ ಆರೋಪಿಸಿದ ಬೆನ್ನಲ್ಲೇ ಮ್ಯಾರಿಯೊನ್ ಬಯೋಟೆಕ್ ಕಂಪನಿಯು ತನ್ನ ನೊಯಿಡಾ ಘಟಕದಲ್ಲಿ ಔಷಧಿ ತಯಾರಿಕೆಯನ್ನು ಸ್ಥಗಿತಗೊಳಿಸಿದೆ.

'ಒಟ್ಟು 21 ಮಕ್ಕಳು ಈ ಔಷಧವನ್ನು ಸೇವಿಸಿದ್ದು, 18 ಮಕ್ಕಳು ಸಾವಿಗೀಡಾಗಿದ್ದಾರೆ. ಈ ಔಷಧದಲ್ಲಿ ಎಥೆನೀಲ್ ಗ್ಲೈಕೋಲ್ ಎನ್ನುವ ರಾಸಾಯನಿಕ ಅಂಶವಿದೆ. ಇದು ಜೀವಕ್ಕೆ ಹಾನಿಕರವಾಗಿದೆ' ಎಂದು ಉಜ್ಬೇಕಿಸ್ತಾನದ ಆರೋಗ್ಯ ಸಚಿವಾಲಯ ಹೇಳಿದೆ.

ಭಾರತದ ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಮಕ್ಕಳ ಸಾವಿನ ಸಂಬಂಧ ತನಿಖೆ ಪ್ರಾರಂಭಿಸಿದೆ. ಚಂಡೀಗಢದಲ್ಲಿರುವ ಪ್ರಾದೇಶಿಕ ಔಷಧಿ ಪರೀಕ್ಷಾ ಪ್ರಯೋಗಾಲಯಕ್ಕೆ (ಆರ್‌ಡಿಟಿಎಲ್) ಔಷಧದ ಮಾದರಿಗಳನ್ನು ಕಳುಹಿಸಲಾಗಿದೆ.

ಕಂಪನಿ ಕೇಂದ್ರ ಕಚೇರಿಯಲ್ಲಿ ತಪಾಸಣೆ: ಸಿಡಿಎಸ್‌ಸಿಒ ಹಾಗೂ ಉತ್ತರ ಪ್ರದೇಶದ ಔಷಧ ವಿಭಾಗದ ತಂಡಗಳು ನೊಯಿಡಾದಲ್ಲಿರುವ ಮ್ಯಾರಿಯೊನ್ ಬಯೋಟೆಕ್‌ನ ಕೇಂದ್ರ ಕಚೇರಿಯಲ್ಲಿ ತಪಾಸಣೆ ನಡೆಸಿವೆ.

'ಡಿ.27ಕ್ಕೆ ಮೊದಲ ಹಂತದ ತಪಾಸಣೆ ನಡೆದಿದೆ. ಈ ವೇಳೆ ಐದು ಔಷಧಿಗಳ ಮಾದರಿಗಳನ್ನು ಪಡೆದುಕೊಳ್ಳಲಾಗಿತ್ತು. ಮತ್ತೊಂದು ಸುತ್ತಿನ ತಪಾಸಣೆಯನ್ನು ಗುರುವಾರ ನಡೆಸಲಾಯಿತು' ಎಂದು ಉತ್ತರ ಪ್ರದೇಶದ ಔಷಧ ನಿರೀಕ್ಷಕ ವೈಭವ್ ಬಾಬರ್ ಹೇಳಿದರು.

'ಕಂಪನಿಯ ಬಳಿ ಔಷಧಿ ತಯಾರಿಕೆಯ ಪರವಾನಗಿ ಹಾಗೂ ಅನುಮತಿ ಇದೆ. ಔಷಧಿಗಳನ್ನು ರಫ್ತು ಮಾಡುವ ಪ್ರಮಾಣಪತ್ರ ಕೂಡ ಇದೆ. ಔಷಧಿ ತಯಾರಿಕೆಯಲ್ಲಿ ಬಳಸುವ ಕಚ್ಚಾ ವಸ್ತುಗಳನ್ನು ಎಲ್ಲಿಂದ ಸಂಗ್ರಹಿಸಲಾಗಿದೆ ಮತ್ತು ಎಲ್ಲೆಲ್ಲಿ ಬಳಸಲಾಗಿದೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದರು.

ಮಕ್ಕಳ ಸಾವಿನ ಕುರಿತು ಉಜ್ಬೇಕಿಸ್ತಾನದಲ್ಲೂ ತನಿಖೆ ಪ್ರಾರಂಭಗೊಂಡಿದೆ. ಇದರ ವಿವರ ನೀಡುವಂತೆ ಭಾರತವು ಅಲ್ಲಿನ ಅಧಿಕಾರಿಗಳಿಗೆ ಮನವಿ ಮಾಡಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

70 ಮಕ್ಕಳ ಸಾವು: ಭಾರತದ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ಕಂಪನಿ ತಯಾರಿಸಿದ್ದ ಕೆಮ್ಮಿನ ಔಷಧಿಯನ್ನು ಸೇವಿಸಿ ಗ್ಯಾಂಬಿಯಾದಲ್ಲಿ ಕೂಡ 70 ಮಕ್ಕಳು ಈ ವರ್ಷದ ಪ್ರಾರಂಭದಲ್ಲಿ ಮೃತಪಟ್ಟಿದ್ದರು. ಔಷಧಿ ತಯಾರಿಕಾ ಮಾನದಂಡಗಳನ್ನು ಉಲ್ಲಂಘಿಸಿದ್ದರಿಂದ ಈ ಕಂಪನಿಯ ಹರಿಯಾಣ ಘಟಕವನ್ನು ಮುಚ್ಚಲಾಯಿತು.

ಮುಖ್ಯಾಂಶಗಳು

- 2010ರಿಂದ ಕಾರ್ಯ ನಿರ್ವಹಿಸುತ್ತಿರುವ ಕಂಪನಿ
- ಉಜ್ಬೇಕಿಸ್ತಾನಕ್ಕೆ ಮಾತ್ರ ಔಷಧ ರಫ್ತು. ದೇಶದಲ್ಲಿ ಈ ಔಷಧಿಯ ಮಾರಾಟ ಇಲ್ಲ
- ಗುರುವಾರ ಬೆಳಿಗ್ಗೆಯಿಂದ ಕಂಪನಿಯ ವೆಬ್‌ಸೈಟ್ ಸ್ಥಗಿತ

ತನಿಖೆ ಪೂರ್ಣಗೊಂಡ ಬಳಿಕ ಔಷಧ ತಯಾರಿಕಾ ಕಂಪನಿ ಮ್ಯಾರಿಯೊನ್ ಬಯೋಟೆಕ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಮನ್‌ಸುಖ್ ಮಾಂಡವೀಯ, ಕೇಂದ್ರ ಆರೋಗ್ಯ ಸಚಿವ

ನಮ್ಮ ಕಡೆಯಿಂದ ಯಾವುದೇ ತಪ್ಪಾಗಿಲ್ಲ. ತನಿಖೆ ವರದಿ ಬಂದ ಬಳಿಕ ಮುಂದಿನ ನಡೆ ಬಗ್ಗೆ ಯೋಚಿಸಲಾಗುವುದು

ಮ್ಯಾರಿಯೊನ್ ಬಯೋಟೆಕ್, 'ಡಾಕ್–1–ಮ್ಯಾಕ್ಸ್' ಔಷಧಿ ತಯಾರಿಕಾ ಕಂಪನಿ

ಕಾಂಗ್ರೆಸ್–ಬಿಜೆಪಿ ವಾಕ್ಸಮರ

ಭಾರತದ ಕಂಪನಿಗಳು ತಯಾರಿಸಿದ ಔಷಧಿಗಳನ್ನು ಸೇವಿಸಿ ವಿದೇಶಗಳಲ್ಲಿ ಮಕ್ಕಳು ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ. ಇದು ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

'ಭಾರತದಲ್ಲಿ ತಯಾರಾಗುವ ಔಷಧಿಗಳು ಮಾರಣಾಂತಿಕವಾಗಿವೆ. ಮೊದಲು 70 ಮಕ್ಕಳು ಮೃತಪಟ್ಟರು; ಈಗ 18 ಮಕ್ಕಳು. ಭಾರತವು ಜಗತ್ತಿನ ಔಷಧ ತಯಾರಿಕೆಯ ಕೇಂದ್ರ ಎಂದು ಬಡಾಯಿ ಕೊಚ್ಚಿಕೊಳ್ಳುವುದನ್ನು ಬಿಡಿ, ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

'ಈ ರೀತಿಯ ಹೇಳಿಕೆ ನೀಡುವ ಮೂಲಕ, ಭಾರತದ ಮಾನವನ್ನು ಕಾಂಗ್ರೆಸ್ ಕಳೆಯುತ್ತಿದೆ. ಕೋವಿಡ್ ನಂತರದಲ್ಲಿ ಭಾರತದ ಔಷಧಿಗಳ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೆ ಚೀನಾದ ಔಷಧಿ ರಫ್ತು ಪ್ರಮಾಣದಲ್ಲಿ ಕಡಿತವಾಗಿದೆ' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

'ಭಾರತದ ಔಷಧಿ ಸೇವಿಸಿ ಗ್ಯಾಂಬಿಯಾದಲ್ಲಿ ಮಕ್ಕಳು ಸಾವಿಗೀಡಾಗಿಲ್ಲ ಎಂದು ಗ್ಯಾಂಬಿಯಾದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಭಾರತದ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಕೂಡ ಇದನ್ನೇ ಹೇಳಿದ್ದಾರೆ. ಆದರೆ, ಮೋದಿ ಅವರ ದ್ವೇಷದಲ್ಲಿ ಅಂಧವಾಗಿರುವ ಕಾಂಗ್ರೆಸ್, ಭಾರತವನ್ನು ಹಾಗೂ ಅದರ ಉದ್ಯಮಶೀಲತಾ ಸ್ಫೂರ್ತಿಯನ್ನು ಅಪಹಾಸ್ಯ ಮಾಡುತ್ತಿದೆ' ಎಂದು ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.



ಯಾವುದೇ ದ್ರವವು, ದ್ರವ ರೂಪದಲ್ಲಿಯೇ ಇರಲು ಎಥೆನೀಲ್ ಗ್ಲೈಕೋಲ್ ಅನ್ನು ಬಳಸಲಾಗುತ್ತದೆ. ರಕ್ತದಲ್ಲಿ ಎಥೆನೀಲ್ ಗ್ಲೈಕೋಲ್ ಪ್ರಮಾಣ ಹೆಚ್ಚಾಗುವುದರಿಂದ ತಲೆತಿರುಗುವುದು, ಮೂರ್ಛೆ ರೋಗ, ರಕ್ತದ ಮೇಲೆ ದುಷ್ಪರಿಣಾಮ ಬೀರುತ್ತದೆ. ಜೊತೆಗೆ ಕಿಡ್ನಿಗೂ ತೊಂದರೆಯಾಗುತ್ತದೆ

ಡಾ. ಸಂಜಯ್ ಕೆ.ಎಸ್., ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ನಿರ್ದೇಶಕ, ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಫೆ.21ರಿಂದ ಎನ್‌ಇಟಿ ಪರೀಕ್ಷೆ

ನವದೆಹಲಿ (ಪಿಟಿಐ): ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಅರ್ಹತೆಗೆ ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) 2023ರ ಫೆಬ್ರವರಿ 21ರಿಂದ ಮಾರ್ಚ್ 10ರವರೆಗೆ ನಡೆಯಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಗುರುವಾರ ತಿಳಿಸಿದೆ.

ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕ ಮತ್ತು ಜೂನಿಯರ್ ರಿಸರ್ಚ್ ಫೆಲೋಶಿಪ್‌ನ ಅರ್ಹತೆಗಾಗಿ ಎನ್‌ಇಟಿ ನಡೆಸಲಾಗುತ್ತಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದ್ದಾರೆ.

83 ವಿಷಯಗಳಲ್ಲಿ ಪರೀಕ್ಷೆಯು ಕಂಪ್ಯೂಟರ್ ಆಧಾರಿತವಾಗಿ ನಡೆಯಲಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು 2022ರ ಡಿ.29 ರಿಂದ 2023 ಜನವರಿ 17ರವರೆಗೆ ಅವಕಾಶ ನೀಡಲಾಗಿದೆ.

ಚಂದಾ ಕೊಚ್ಚರ್ ದಂಪತಿಗೆ ಜ.10ರವರೆಗೆ ನ್ಯಾಯಾಂಗ ಬಂಧನ

ಮುಂಬೈ: ಐಸಿಐಸಿಐ ಬ್ಯಾಂಕ್ ಸಾಲ ವಂಚನೆ ಪ್ರಕರಣದಲ್ಲಿ ಬ್ಯಾಂಕ್‌ನ ಮಾಜಿ ಸಿಇಒ ಚಂದಾ ಕೊಚ್ಚರ್, ಅವರ ಪತಿ ದೀಪಕ್ ಕೊಚ್ಚರ್ ಮತ್ತು ವಿಡಿಯೊಕಾನ್ ಸಮೂಹದ ಸಂಸ್ಥಾಪಕ ವೇಣುಗೋಪಾಲ್ ಧೂತ್ ಅವರನ್ನು ಗುರುವಾರ ಇಲ್ಲಿನ ವಿಶೇಷ ಸಿಬಿಐ ನ್ಯಾಯಾಲಯವು ಜನವರಿ 10ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕೊಚ್ಚರ್ ದಂಪತಿಯನ್ನು ಕಳೆದ ಶುಕ್ರವಾರ ಹಾಗೂ ವೇಣುಗೋಪಾಲ್ ಅವರನ್ನು ಸೋಮವಾರ ಸಿಬಿಐ ಬಂಧಿಸಿತ್ತು.

ಔಷಧ ಲಭ್ಯತೆ ಖಚಿತಪಡಿಸಿಕೊಳ್ಳಿ: ಕೇಂದ್ರ

ನವದೆಹಲಿ (ಪಿಟಿಐ): ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್ ನಿರ್ವಹಣೆ ಸೇರಿದಂತೆ ಎಲ್ಲಾ ಔಷಧಿಗಳ ಸಾಕಷ್ಟು ದಾಸ್ತಾನು ಮತ್ತು ಲಭ್ಯತೆ ಖಚಿತಪಡಿಸಿಕೊಳ್ಳಲು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯ ಗುರುವಾರ ಫಾರ್ಮಾ ಕಂಪನಿಗಳಿಗೆ ಸೂಚಿಸಿದ್ದಾರೆ.

ಕೋವಿಡ್–19 ನಿರ್ವಹಣಾ ಔಷಧಗಳ ಸ್ಥಿತಿ, ಸಮರ್ಪಕತೆ ಮತ್ತು ಉತ್ಪಾದನಾ ಸಾಮರ್ಥ್ಯಗಳನ್ನು ಅವರು ವರ್ಚುವಲ್ ಕಾನ್ಫರೆನ್ಸ್ ಮೂಲಕ ಔಷಧ ಕಂಪನಿಗಳ ಪ್ರತಿನಿಧಿಗಳೊಂದಿಗೆ ಪರಿಶೀಲಿಸಿದರು.

ಭಾರತ ಯಾವುದೇ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸನ್ನದ್ಧವಾಗಿದೆ. ಚೀನಾ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳ ಗಮನದಲ್ಲಿಟ್ಟುಕೊಂಡು ಸಭೆ ನಡೆಸಲಾಯಿತು. ಜಾಗತಿಕ ವಿದ್ಯಮಾನಗಳ ಬಗ್ಗೆ ಅಧಿಕಾರಿಗಳು ಸಚಿವರಿಗೆ ವಿವರಿಸಿದರು.

ದೇಶದ ಔಷಧೀಯ ಉದ್ಯಮ ಸದೃಢ ಮತ್ತು ಸ್ಪಂದನಶೀಲವಾಗಿದೆ. ಅವರ ಶಕ್ತಿಯಿಂದಾಗಿ ಸಾಂಕ್ರಾಮಿಕ ಸಂದರ್ಭದಲ್ಲಿ 150 ದೇಶಗಳಿಗೆ ಔಷಧಗಳನ್ನು ಪೂರೈಸಲು ಸಾಧ್ಯವಾಯಿತು ಎಂದು ಹೇಳಿದರು.

'ಜ.1ರಿಂದ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ'

ನವದೆಹಲಿ (ಪಿಟಿಐ): ಚೀನಾ, ಹಾಂಗ್‌ಕಾಂಗ್, ಜಪಾನ್, ದಕ್ಷಿಣ ಕೊರಿಯಾ, ಸಿಂಗಪುರ ಮತ್ತು ಥಾಯ್ಲೆಂಡ್‌ನಿಂದ ಭಾರತಕ್ಕೆ ಬರುವ ಪ್ರಯಾಣಿಕರು ಜನವರಿ 1ರಿಂದ ಕಡ್ಡಾಯವಾಗಿ ಕೋವಿಡ್ ನೆಗೆಟಿವ್ ವರದಿ ಸಲ್ಲಿಸಬೇಕು ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಗುರುವಾರ ತಿಳಿಸಿದ್ದಾರೆ.

ಈ ದೇಶಗಳಿಂದ ಬರುವ ಪ್ರಯಾಣಿಕರು ಪ್ರಯಾಣ ಹೊರಡುವ ಮೊದಲು ಕಡ್ಡಾಯವಾಗಿ ಆರ್‌ಟಿ–ಪಿಸಿಆರ್‌ನ ನೆಗೆಟಿವ್ ವರದಿಯನ್ನು 'ಏರ್ ಸುವಿಧಾ' ಪೋರ್ಟಲ್‌ಗೆ ಸಲ್ಲಿಸಬೇಕು. ಪ್ರಯಾಣ ಹೊರಡುವ 72 ಗಂಟೆಗಳೊಳಗೆ ಕೋವಿಡ್ ಪರೀಕ್ಷೆ ಮಾಡಿಸಿರಬೇಕು ಎಂದೂ ಹೇಳಿದ್ದಾರೆ.

ವಿವಿಧ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಕಾರಣ ಕೇಂದ್ರವು ಕೋವಿಡ್ ಮಾನದಂಡಗಳನ್ನು ಬಿಗಿಗೊಳಿಸಿದ್ದು, ಸನ್ನದ್ಧರಾಗಿರುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಒಬಿಸಿ ಮೀಸಲಾತಿ: 'ಸುಪ್ರೀಂ'ಗೆ ಉತ್ತರಪ್ರದೇಶ

ನವದೆಹಲಿ (ಪಿಟಿಐ): ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿ ಹೊರಡಿಸಿದ್ದ ಕರಡು ಅಧಿಸೂಚನೆಯನ್ನು ರದ್ದುಗೊಳಿಸಿರುವ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಆದೇಶವನ್ನು ಪ್ರಶ್ನಿಸಿ ಉತ್ತರಪ್ರದೇಶ ಸರ್ಕಾರವು ಗುರುವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡದೆ ಚುನಾವಣೆ ನಡೆಸುವಂತೆಯೂ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರನ್ನು ಹೊರತುಪಡಿಸಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೀಸಲಾತಿ ನೀಡಿ ಡಿಸೆಂಬರ್‌5ರಂದು ಹೊರಡಿಸಿರುವ ಕರಡು ಅಧಿಸೂಚನೆಯನ್ನು ಹೈಕೋರ್ಟ್ ರದ್ದುಗೊಳಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಮೇಲ್ಮನವಿಯಲ್ಲಿ ಹೇಳಿದೆ.

ವಾಸಸ್ಥಳದಿಂದಲೇ ವಲಸಿಗರ ಮತದಾನಕ್ಕೆ ಆರ್‌ವಿಎಂ ಅಭಿವೃದ್ಧಿ

ಒಂದನೇ ಪುಟದಿಂದ...

ಅಲ್ಲದೆ ವಲಸಿಗರಿಗೆ ಮತದಾನಕ್ಕೆ ಅವಕಾಶ ಕಲ್ಪಿಸುವ ಕ್ರಮ, ಈ ಪ್ರಕ್ರಿಯೆಯ ಅನುಷ್ಠಾನ ಕ್ರಮ, ಪೂರಕವಾಗಿ ಆಡಳಿತಾತ್ಮಕವಾಗಿ ಆಗಬೇಕಿರುವ ಬದಲಾವಣೆ, ಪ್ರತ್ಯೇಕ ಕಾಯ್ದೆಯ ಅಗತ್ಯ ಕುರಿತಂತೆ ಅಭಿಪ್ರಾಯ ತಿಳಿಸುವಂತೆಯೂ ಪಕ್ಷಗಳಿಗೆ ಕೋರಲಾಗಿದೆ.



ಸಮರ್ಪಕ ಸಾರಿಗೆ ವ್ಯವಸ್ಥೆಯಿಲ್ಲದ ಕುಗ್ರಾಮಗಳ ಮತಗಟ್ಟೆಗಳಿಗೆ ಮತಯಂತ್ರ ಸಾಗಣೆ, ಸಿಬ್ಬಂದಿ ಪ್ರಯಾಣ ಕಷ್ಟವಾಗಿತ್ತು. ಮತ ಎಣಿಕೆ ಕೂಡಾ 'ತಾಂತ್ರಿಕವಾಗಿ ಸವಾಲಿನದ್ದಾಗಿತ್ತು' ಎಂದು ಆಯೋಗದ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಪ್ರಾಥಮಿಕ ಹಂತದಲ್ಲಿ ಮಾದರಿ ಆರ್‌ವಿಎಂನ ಪ್ರಾತ್ಯಕ್ಷಿಕೆ ಹಾಗೂ ವಿವಿಧ ಭಾಗಿದಾರರ ಅಭಿಪ್ರಾಯಗಳನ್ನು ಪರಿಗಣಿಸಿ ಮತದಾನ ಪ್ರಕ್ರಿಯೆಯಲ್ಲಿ ಇದನ್ನು ಜಾರಿಗೊಳಿಸಲು ಆಯೋಗ ನಿರ್ಧರಿಸಿದೆ. ಈ ಬಗ್ಗೆ ಕಾನೂನಾತ್ಮಕ, ಆಡಳಿತ ಮತ್ತು ತಾಂತ್ರಿಕ ಸವಾಲುಗಳು ಕುರಿತಂತೆ ಈಗ ರಾಜಕೀಯ ಪಕ್ಷಗಳ ಜೊತೆ ಸಮಾಲೋಚಿಸಲು ಮುಂದಾಗಿದೆ.

ಮತದಾನ ಪ್ರಮಾಣವನ್ನು ಹೆಚ್ಚಿಸಲು ಇದು ಉತ್ತಮ ಪರಿಕ್ರಮವಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ತಿಳಿಸಿದ್ದಾರೆ.

ಬಳಕೆಗೆ ಅರ್ಹವಾದ, ವಿಶ್ವಾಸಾರ್ಹವಾದ ಮತ್ತು ಭಾಗಿದಾರರು ಒಪ್ಪಬಹುದಾದ ತಾಂತ್ರಿಕ ಪರಿಹಾರ ಕ್ರಮಗಳನ್ನು ಗುರುತಿಸುವುದರ ಭಾಗವಾಗಿ ರಾಜೀವ್ ಕುಮಾರ್, ಆಯುಕ್ತರಾದ ಅನೂಪ್ ಚಂದ್ರ ಪಾಂಡೆ, ಅರುಣ್ ಗೋಯಲ್ ನೇತೃತ್ವದಲ್ಲಿ ಆಯೋಗವು ಈಗ ಆರ್‌ವಿಎಂ ರೂಪಿಸಿದೆ ಎಂದು ಹೇಳಿಕೆ ತಿಳಿಸಿದೆ.

ಕಾಂಗ್ರೆಸ್ ವಿರೋಧ: ತಾವಿರುವ ಸ್ಥಳದಿಂದಲೇ ಮತದಾನ ಮಾಡಲು ಅನುವಾಗಲು ಚುನಾವಣಾ ಆಯೋಗ ಅಭಿವೃದ್ಧಿ ಪಡಿಸಿರುವ ಆರ್‌ವಿಎಂ ಮಾದರಿಗೆ ವಿರೋಧವಿದೆ. ಇವಿಎಂಗಳ ದುರುಪಯೋಗದ ಬಗ್ಗೆ ಪ್ರತಿಪಕ್ಷಗಳ ಆತಂಕ ಮೊದಲು ನಿವಾರಿಸಬೇಕು. ಇದು ಚುನಾವಣಾ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ದುರ್ಬಲಗೊಳಿಸುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

ಅತ್ಯಾಧುನಿಕ ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ(ಪಿಟಿಐ): ಸಮರ ನೌಕೆಗಳಿಂದ ಎದುರಾಗುವ ಗುರಿಗಳನ್ನು ಭೇದಿಸುವ ವಿಸ್ತರಿತ ವ್ಯಾಪ್ತಿ ಆವೃತ್ತಿಯ ಅತ್ಯಾಧುನಿಕ ಬ್ರಹ್ಮೋಸ್ ವಾಯು ಕ್ಷಿಪಣಿಯನ್ನು ಸುಖೋಯ್–30ಎಂಕೆಐ ಯುದ್ಧ ವಿಮಾನದಿಂದ ಭಾರತೀಯ ವಾಯು ಪಡೆಯು (ಐಎಎಫ್) ನಡೆಸಿದ ಪರೀಕ್ಷಾರ್ಥ ಪ್ರಯೋಗ ಗುರುವಾರ ಯಶಸ್ವಿಯಾಗಿದೆ.

'ಬಂಗಾಳ ಕೊಲ್ಲಿಯಲ್ಲಿ ಹಡಗಿನಿಂದ ಎದುರಾದ ನಿಗದಿತ ಗುರಿಯ ಮೇಲೆ ಎಸ್‌ಯು–30 ಎಂಕೆಐ ಯುದ್ಧ ವಿಮಾನದಿಂದ ಹಾರಿಸಿದ ವಿಸ್ತರಿತ ವ್ಯಾಪ್ತಿ ಆವೃತ್ತಿಯ ಬ್ರಹ್ಮೋಸ್ ಕ್ಷಿಪಣಿ ನಿಖರ ದಾಳಿ ನಡೆಸಿತು. ಐಎಎಫ್, ಭಾರತೀಯ ನೌಕಾಪಡೆ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಬಿಎಪಿಎಲ್ ಹಾಗೂ ಎಚ್‌ಎಎಲ್‌ನ ಸಮರ್ಪಿತ ಪ್ರಯತ್ನಗಳ ಫಲವಾಗಿ ಉದ್ದೇಶಿತ ಯೋಜನೆ ಯಶಸ್ವಿಯಾಗಿದೆ' ಎಂದು ಐಎಎಫ್ ತಿಳಿಸಿದೆ.

ಕರ್ನಾಟಕ ತಂಡ ಸಮಗ್ರ ಚಾಂಪಿಯನ್

ದಕ್ಷಿಣ ವಲಯ ಈಜು: ಧ್ಯಾನ್, ನೈಷಾ, ಅದಿತಿ ಶ್ರೇಷ್ಠ ಈಜುಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಷ್ಠ ಸಾಮರ್ಥ್ಯ ತೋರಿದ ಕರ್ನಾಟಕದ ಈಜುಪಟುಗಳು ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದರು.

ಕೇರಳದ ತಿರುವನಂತಪುರದ ಡಾ. ಬಿ.ಆರ್. ಅಂಬೇಡ್ಕರ್ ಅಂತರರಾಷ್ಟ್ರೀಯ ಈಜು ಕಾಂಪ್ಲೆಕ್ಸ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಗುರುವಾರ ರಾಜ್ಯದ ಈಜುಪಟುಗಳಿಂದ ಏಳು ಕೂಟ ದಾಖಲೆಗಳು ನಿರ್ಮಾಣವಾದವು.

ಒಟ್ಟು 1,047 ಪಾಯಿಂಟ್ಸ್ ಕಲೆಹಾಕಿದ ಕರ್ನಾಟಕ ಸಮಗ್ರ ಚಾಂಪಿಯನ್ ಎನಿಸಿಕೊಂಡಿತು. ತಮಿಳುನಾಡು ಮತ್ತು ಕೇರಳ ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದವು. ವಾಟರ್‌ಪೋಲೊದಲ್ಲಿ ಕರ್ನಾಟಕ ಎರಡನೇ ಸ್ಥಾನ ಗಳಿಸಿತು.

ಕರ್ನಾಟಕದ ಧ್ಯಾನ್ ಎಂ. ಬಾಲಕರ ವಿಭಾಗದ ಶ್ರೇಷ್ಠ ಈಜುಪಟು ಎನಿಸಿಕೊಂಡರೆ, ಬಾಲಕಿಯರ ವಿಭಾಗದಲ್ಲಿ ರಾಜ್ಯದ ನೈಷಾ ಶೆಟ್ಟಿ, ಅದಿತಿ ಎನ್. ಮುಲಾಯ್ ಜಂಟಿಯಾಗಿ ಈ ಗೌರವ ಗಳಿಸಿದರು.

ಮೂರನೇ ದಿನದ ಫಲಿತಾಂಶಗಳು (ಕರ್ನಾಟಕ ಮಾತ್ರ): ಬಾಲಕರು: 400 ಮೀ. ಫ್ರೀಸ್ಟೈಲ್: ಗುಂಪು 1: ಸಂಜೀತ್ ಜೆ.–2, ಪವನ್ ಧನಂಜಯ್–3. ಗುಂಪು 2: ರೇಣುಕಾಚಾರ್ಯ ಎ.–2, ದಕ್ಷಣ್ ಎಸ್–3.

100 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 1: ಸೂರ್ಯ ಜೋಯಪ್ಪ–2, ಬಾಸಿತ್ ಅಹಮದ್–3. ಗುಂಪು 2: ವಿಷಾಗ್ನ ಸರವಣನ್–2. ಗುಂಪು 3: ಅಥರ್ವ್ ಪಾಲ್ ಸಿಂಗ್–1 (ಕಾಲ: 1 ನಿ. 25.64 ಸೆ.), ವೈಭವ್ ಪ್ರತಾಪ್–2

50 ಮೀ. ಬ್ಯಾಕ್ ಸ್ಟ್ರೋಕ್: ಗುಂಪು 1: ಧ್ಯಾನ್ ಎಂ.–1 (ಕೂಟ ದಾಖಲೆ, ಕಾಲ: 27.88 ಸೆ.), ಆಕಾಶ್ ಮಣಿ–2. ಗುಂಪು 2: ಅಮನ್ ಸುಣಗಾರ–2, ಸೂರ್ಯ ಜೆ.ಟಿ–3. ಗುಂಪು 3: ಅದ್ವೈತ್ ವಿ.ಎಂ.–2

200 ಮೀ. ಬಟರ್‌ಫ್ಲೈ ಸ್ಟ್ರೋಕ್: ಗುಂಪು 1: ನೀಲೇಶ್ ದಾಸ್–2, ಶ್ರೇಯಸ್ ವೆಂಕಟೇಶ್–3. ಗುಂಪು 2: ಅಕ್ಷಜ್ ಠಾಕೂರಿಯಾ–1 (ಕಾಲ: 2 ನಿ. 18.76 ಸೆ.), ಆರ್ಯನ್–2

400 ಮೀ. ವೈಯಕ್ತಿಕ ಮೆಡ್ಲೆ: ಗುಂಪು 1: ಪವನ್ ಧನಂಜಯ್–1 (ಕೂಟ ದಾಖಲೆ, ಕಾಲ: 4 ನಿ.50.21 ಸೆ.)

100 ಮೀ. ಫ್ರೀಸ್ಟೈಲ್: ಗುಂಪು 1: ತರುಣ್ ಅರುಣ್ ಗೌಡ–1 (ಕೂಟ ದಾಖಲೆ, ಕಾಲ: 54.62 ಸೆ.), ಧ್ಯಾನ್ ಎಂ.–2. ಗುಂಪು 2: ರೇಣುಕಾಚಾರ್ಯ–2, ಅಕ್ಷಜ್ ಠಾಕೂ ರಿಯಾ–3. ಗುಂಪು 3: ಕೃಷ್ಣ ನಂದಕುಮಾರ್–2, ಕೃಷ್–3

ಬಾಲಕಿಯರು: 1500 ಮೀಟರ್ಸ್ ಫ್ರೀಸ್ಟೈಲ್: ಗುಂಪು 1: ಅದಿತಿ ಎನ್. ಮುಲಾಯ್–1 (ಕೂಟ ದಾಖಲೆ, ಕಾಲ: 19 ನಿ. 1.16 ಸೆಕೆಂಡು), ಸಿಂಧಿಯಾ ಚೌಧುರಿ–2. ಗುಂಪು 2: ಶ್ರೀಚರಣಿ ತುಮು–1, (ಕಾಲ: 18 ನಿ. 53.99 ಸೆ.) ತನಿಶಾ ವಿನಯ್–2.

100 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 1: ಹಿತೈಷಿ ವಿ.–2, ಮೇಘಾಂಜಲಿ–3. ಗುಂಪು 2: ತಾನ್ಯಾ ಎಸ್–1 (ಕಾಲ: 1 ನಿ. 20.8ಸೆ.), ರಿಯಾನ್ನಾ 2. ಗುಂಪು 3: ಸ್ಪರ್ಷಾ ಹರೀಶ–3

50 ಮೀ. ಬ್ಯಾಕ್‌ಸ್ಟ್ರೋಕ್: ಗುಂಪು 1: ಆರುಷಿ ಅಗರವಾಲ್–1 (ಕೂಟ ದಾಖಲೆ, ಕಾಲ: 31.72 ಸೆ.), ನೈಷಾ ಶೆಟ್ಟಿ–2. ಗುಂಪು 2: ನಕ್ಷತ್ರ ಗೌತಮ್–2

200 ಮೀ. ಬಟರ್‌ಫ್ಲೈ ಸ್ಟ್ರೋಕ್: ಗುಂಪು 1: ಸಿಂಧಿಯಾ ಚೌಧುರಿ–1 (ಕಾಲ: 2 ನಿ. 35.77 ಸೆ.), ಅದಿತಿ ಮುಲಾಯ್–2. ಗುಂಪು 2: ಸುಹಾಸಿನಿ ಘೋಷ್–1 (ಕೂಟ ದಾಖಲೆ, ಕಾಲ: 2 ನಿ. 28.80 ಸೆ.), ತನಿಶಾ ವಿನಯ್–2

400 ಮೀ. ವೈಯಕ್ತಿಕ ಮೆಡ್ಲೆ: ಗುಂಪು 1: ಅನ್ವಿ ದೇಶಪಾಂಡೆ–1 (ಕಾಲ: 5 ನಿ. 35.84 ಸೆ.). ಗುಂಪು 2: ತಾನ್ಯಾ ಎಸ್.–1 (ಕೂಟ ದಾಖಲೆ, ಕಾಲ: 5 ನಿ. 26. 16 ಸೆ.), ಸಬಾ ಸುಹಾನಾ–2.

100 ಮೀ. ಫ್ರೀಸ್ಟೈಲ್: ಗುಂಪು 1: ಲಕ್ಷ್ಮಿ ತ್ರಿವಿಕ್ರಮ್–1 (ಕಾಲ: 1 ನಿ. 2.4 ಸೆ.), ಸಾಕ್ಷಿ ಧ್ಯಾಮನ್ನವರ್–3. ಗುಂಪು 2: ಆರ್ನಾ ಎಂ.ಪಿ.–1 (ಕಾಲ: 1 ನಿ.2.74 ಸೆ.), ತಿಶ್ಯಾ ಸೋನಾರ್–2. ಗುಂಪು 3: ಮೀರಾ ನಂಬಿಯಾರ್–3.



ಸಮಗ್ರ ಚಾಂಪಿಯನ್‌ಷಿಪ್ ಗೆದ್ದ ಕರ್ನಾಟಕ ತಂಡ

ಕರ್ನಾಟಕಕ್ಕೆ ಭರ್ಜರಿ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಕರ್ನಾಟಕ ತಂಡದವರು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು.

ದೆಹಲಿಯಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಗುರುವಾರ ಕರ್ನಾಟಕ 10–0 ಗೋಲುಗಳಿಂದ ತ್ರಿಪುರ ತಂಡಕ್ಕೆ ಸೋಲುಣಿಸಿದರು. ಕರ್ನಾಟಕ ಪರ ಶೆಲ್ಟನ್ ಪಾಲ್ (2 ಮತ್ತು 27ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿ ಮಿಂಚಿದರು. ರಾಬಿನ್ ಯಾದವ್ (16ನೇ ನಿ.), ಪ್ರಶಾಂತ್ ಕಳಿಂಗ (30ನೇ ನಿ.), ಎಂ. ಸುನಿಲ್ ಕುಮಾರ್ (40ನೇ ನಿ.), ಅಭಿಷೇಕ್ ಶಂಕರ್ ಪೊವಾರ್ (54ನೇ ನಿ.), ಅಪ್ಪು (78ನೇ ನಿ.), ಅಂಕಿತ್ ಪಿ. (81ನೇ ನಿ.), ರಾಜ ಗಣಪತಿ (86ನೇ ನಿ.) ಮತ್ತು ಕಮಲೇಶ್ (90 + 6ನೇ ನಿ.) ಕಾಣಿಕೆ ನೀಡಿದರು.

'2036ರ ಒಲಿಂಪಿಕ್ಸ್: ಬಿಡ್ ಸಲ್ಲಿಸಲು ಸಿದ್ಧ'

ನವದೆಹಲಿ (ಎಎಫ್‌ಪಿ): ಭಾರತವು 2036ರ ಒಲಿಂಪಿಕ್ ಕೂಟದ ಅತಿಥ್ಯಕ್ಕೆ ಬಿಡ್ ಸಲ್ಲಿಸಲು ಸಿದ್ಧವಾಗಿದೆ ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

'ಅಹಮದಾಬಾದ್‌ನಲ್ಲಿ ಒಲಿಂಪಿಕ್ಸ್ ಆಯೋಜಿಸುವುದು ನಮ್ಮ ಉದ್ದೇಶ. ಮುಂದಿನ ವರ್ಷ ನಡೆಯಲಿರುವ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸಭೆಯಲ್ಲಿ ಆತಿಥ್ಯದ ಹಕ್ಕು ಮಂಡಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ. 'ಕ್ರೀಡಾಕೂಟಕ್ಕೆ ಬಿಡ್ ಸಲ್ಲಿಸಲು ಸೂಕ್ತ ಸಮಯ ಇದು. ಯಶಸ್ವಿಯಾಗಿ ಆಯೋಜಿಸುವ ಸಾಮರ್ಥ್ಯವಿದೆ' ಎಂದಿದ್ದಾರೆ.



ಅಸ್ತಮಿಸಿದ ಫುಟ್‌ಬಾಲ್ 'ಸೂರ್ಯ'

ರಿಯೊ ಡಿ ಜನೈರೊ, ಬ್ರೆಜಿಲ್ (ಎಎಫ್‌ಪಿ): ಮೂರು ವಿಶ್ವಕಪ್ ಟೂರ್ನಿಗಳಲ್ಲಿ ಬ್ರೆಜಿಲ್ ತಂಡವನ್ನು ಚಾಂಪಿಯನ್ ಆಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪೆಲೆ (82) ಗುರುವಾರ ಕ್ಯಾನ್ಸರ್‌ನಿಂದಾಗಿ ನಿಧನರಾದರು.

ಬ್ರೆಜಿಲ್ ತಂಡವು ಮೂರು ಬಾರಿ ವಿಶ್ವಕಪ್ (1958, 1962 ಮತ್ತು 1970) ಜಯಿಸಲು ಪೆಲೆ ಅವರ ಆಟವು ಪ್ರಮುಖವಾಗಿತ್ತು. ಬ್ರೆಜಿಲ್ ಪರವಾಗಿ ಅತಿ ಹೆಚ್ಚು ಗೋಲು ಗಳಿಸಿದ (77) ಅವರ ದಾಖಲೆಯನ್ನು ಈಚೆಗೆ ನಡೆದ ವಿಶ್ವಕಪ್ ಟೂರ್ನಿಯಲ್ಲಿ ನೇಮರ್ ಸರಿಗಟ್ಟಿದ್ದರು.

'ಪೆಲೆಗೆ ನೀಡುತ್ತಿರುವ ಕಿಮೊಥೆರಪಿ ಪರಿಣಾಮ ಬೀರುತ್ತಿಲ್ಲ. ಆದ್ದರಿಂದ ಅವರನ್ನು ಪ್ಯಾಲೆಟಿವ್ ಕೇರ್ ವಿಭಾಗದಲ್ಲಿ ದಾಖಲಿಸಲಾಗಿದೆ' ಎಂದು ಪತ್ರಿಕೆಯೊಂದು ವರದಿ ಮಾಡಿತ್ತು. ಅದನ್ನು ಕುಟುಂಬದ ಸದಸ್ಯರು ಅಲ್ಲಗಳೆದಿದ್ದರು.

ನವೆಂಬರ್ ಕೊನೆಯ ವಾರದಲ್ಲಿ ಪೆಲೆ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಕರುಳಿನ ಕ್ಯಾನ್ಸರ್ ಉಲ್ಬಣಿಸಿದ್ದು ಮೂತ್ರಪಿಂಡ ಮತ್ತು ಹೃದಯಕ್ಕೆ ಸೋಂಕು ವ್ಯಾಪಿಸಿದೆ ಎಂದು ಈಚೆಗೆ ಆಸ್ಪತ್ರೆಯ ಮೂಲಗಳು ತಿಳಿಸಿದ್ದವು. 1957ರಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದ ಅವರು ವೃತ್ತಿಜೀವನದಲ್ಲಿ 1000ಕ್ಕೂ ಹೆಚ್ಚು ಗೋಲುಗಳನ್ನು ದಾಖಲಿಸಿದ್ದರು. 1977ರಲ್ಲಿ ನಿವೃತ್ತರಾಗಿದ್ದರು.

ಫಾರ್ವರ್ಡ್ ಮತ್ತು ಅಟ್ಯಾಕಿಂಗ್ ಮಿಡ್‌ಫೀಲ್ಡರ್ ಆಟಗಾರರಾಗಿದ್ದ ಪೆಲೆ, 1995–1998ರ ಅವಧಿಯಲ್ಲಿ ದೇಶದ ಕ್ರೀಡಾ ಸಚಿವರಾಗಿದ್ದರು. ವಿಶ್ವಕಪ್ ಟೂರ್ನಿಗಳ 14 ಪಂದ್ಯಗಳಲ್ಲಿ 12 ಗೋಲುಗಳನ್ನು ಗಳಿಸಿದ್ದರು. ಪ್ರಮುಖವಾಗಿ ಸ್ಯಾಂಟೊಸ್ ಮತ್ತು ನ್ಯೂಯಾರ್ಕ್ ಕಾಸ್ಮೊಸ್ ಕ್ಲಬ್‌ಗಳಿಗೆ ಆಡಿದ್ದರು.

ಮೊದಲ ಟೆಸ್ಟ್‌ಗೆ ಗ್ರೀನ್, ಸ್ಟಾರ್ಕ್ ಅಲಭ್ಯ?

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಮತ್ತು ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು ಭಾರತದಲ್ಲಿ ನಡೆಯಲಿರುವ ಬಾರ್ಡರ್– ಗಾವಸ್ಕರ್ ಟೆಸ್ಟ್ ಸರಣಿಯ ಮೊದಲ ಪಂದ್ಯಕ್ಕೆ ಅಲಭ್ಯರಾಗುವ ಸಾಧ್ಯತೆಯಿದೆ.

ದಕ್ಷಿಣ ಆಫ್ರಿಕಾ ವಿರುದ್ಧದ 'ಬಾಕ್ಸಿಂಗ್ ಡೇ' ಟೆಸ್ಟ್ ಪಂದ್ಯದ ವೇಳೆ ಇವರಿಬ್ಬರೂ ಕೈಬೆರಳಿನ ಗಾಯಕ್ಕೆ ಒಳಗಾಗಿದ್ದರು. ಗ್ರೀನ್ ಅವರ ಗಾಯಕ್ಕೆ ಶಸ್ತ್ರಕ್ರಿಯೆ ಬೇಕಿದ್ದು, ಫೆ.9 ರಂದು ಆರಂಭವಾಗಲಿರುವ ಮೊದಲ ಟೆಸ್ಟ್ ವೇಳೆಗೆ ಗುಣಮುಖರಾಗುವ ಸಾಧ್ಯತೆ ಕಡಿಮೆ. ಸ್ಟಾರ್ಕ್ ಅವರಿಗೂ ಫಿಟ್‌ನೆಸ್ ಮರಳಿ ಪಡೆಯಲು ಇನ್ನಷ್ಟು ದಿನಗಳು ಬೇಕು ಎಂದು ತಂಡದ ಮೂಲಗಳು ತಿಳಿಸಿವೆ.

ಡಾಡ್ಜ್ ಬಾಲ್: ರಾಜ್ಯ ತಂಡ ಚಾಂಪಿಯನ್

ಹಾಸನ: ಕರ್ನಾಟಕದ ತಂಡಗಳು ಇಲ್ಲಿನ ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ಮುಕ್ತಾಯಗೊಂಡ ರಾಷ್ಟ್ರೀಯ ಡಾಡ್ಜ್ ಬಾಲ್ ಚಾಂಪಿಯನ್‌ಷಿಪ್‌ನ ಸೀನಿಯರ್ಸ್ ವಿಭಾಗದಲ್ಲಿ ಚಾಂಪಿಯನ್ ಆದವು.

ಪುರುಷರ ತಂಡವು ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಗೆದ್ದರೆ, ಮಹಿಳಾ ವಿಭಾಗದವರು ಮಹಾರಾಷ್ಟ್ರ ತಂಡದವರನ್ನು ಮಣಿಸಿದರು.

ಐಸಿಸಿ ವಾರ್ಷಿಕ ಪ್ರಶಸ್ತಿ: ಸೂರ್ಯ, ಮಂದಾನ ನಾಮನಿರ್ದೇಶನ

ದುಬೈ (ಪಿಟಿಐ): ಭಾರತದ ಸೂರ್ಯ ಕುಮಾರ್ ಯಾದವ್ ಮತ್ತು ಸ್ಮೃತಿ ಮಂದಾನ ಅವರು ಐಸಿಸಿ ನೀಡುವ ಕ್ರಮವಾಗಿ ವರ್ಷದ ಟಿ20 ಆಟಗಾರ ಮತ್ತು ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಇಂಗ್ಲೆಂಡ್‌ನ ಸ್ಯಾಮ್ ಕರನ್, ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಮತ್ತು ಜಿಂಬಾಬ್ವೆಯ ಸಿಕಂದರ್ ರಾಜಾ ಕೂಡ ಸ್ಪರ್ಧೆಯಲ್ಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಪಾಕಿ ಸ್ತಾನದ ನಿದಾ ದರ್, ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಮತ್ತು ಆಸ್ಟ್ರೇಲಿಯಾದ ತಹ್ಲಿಯಾ ಮೆಗ್ರಾ ಕೂಡ ಪಟ್ಟಿಯಲ್ಲಿದ್ದಾರೆ.

ಸೂರ್ಯ ಅವರು, 2022ರಲ್ಲಿ ಟಿ20 ಮಾದರಿಯಲ್ಲಿ ಒಂದು ಸಾವಿರ ರನ್ ಗಡಿ ದಾಟಿದ ವಿಶ್ವದ ಎರಡನೇ ಆಟಗಾರ ಎನಿಸಿಕೊಂಡಿದ್ದಾರೆ.

ಬೆಂಗಳೂರು ರೇಸ್

ಅಜ್‌ಟೆಕ್ ಕ್ವೀನ್ ಗೆಲ್ಲುವ ನಿರೀಕ್ಷೆ

ಕರ್ನಾಟಕ ಪೋಲಿಸ್ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಜ್‌ಟೆಕ್ ಕ್ವೀನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶೀಈಸ್ ಇನ್ನೊಸೆಂಟ್ 1, ರೀಗಲ್ ಫೋರ್ಸ್ 9, ಕೋನಿಚಿವ 7
2ನೇ ರೇಸ್: ಬಾಬ ವಾಸ್ 5, ಸ್ಪೀಡ್ ಸೆವೆನ್ 4, ಮೆಮೋರಬಲ್ ಟೈಮ್ 7
3ನೇ ರೇಸ್: ಅಂಜ್ಯಾಕ್ ಪಿಂಪರ್ನಲ್ 5, ಡಬಲ್ ಸ್ಕಾಚ್ 1, ಡೈನಾಮಿಕ್ ಫೋರ್ಸ್ 2
4ನೇ ರೇಸ್: ಸ್ಟಾರ್ಮಿ ಓಷನ್ 2. ರೂಲ್ ಆಫ್ ಲಾ 7, ಬ್ಯಾಂಕ್ಸಿ 4
5ನೇ ರೇಸ್: ಗ್ರೀನ್ ಚಾನೆಲ್ 1. ಮೆಮೊರೈಟರ್ 2, ಬೆನಿಡಿಕ್ಟನ್ 9
6ನೇ ರೇಸ್: ಅಜ್‌ಟೆಕ್ ಕ್ವೀನ್ 3, ಸ್ಟಾರ್ ಗ್ಲೋರಿ 6, ಡಿ ವಿಲ್ಲಿಯರ್ಸ್ 1
7ನೇ ರೇಸ್: ಕಿಂಗ್ಸ್ ಸ್ಪೀಚ್ 2, ಡಾಕ್ಟರ್ ಲೋಗನ್ 6, ಪೆಲುಷೆ 1
8ನೇ ರೇಸ್: ಪ್ರಿನ್ಸೆಸ್ ಜಾಸ್ಮೈನ್ 1, ಥಂಡರ್‌ಸ್ಟ್ರಕ್ 5, ಎಲೈಟ್ ಏಜೆಂಟ್ 8

ಉತ್ತಮ ಬೆಟ್: ಅಂಜ್ಯಾಕ್ ಪಿಂಪರ್ನಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

2022 ಹಿನ್ನೋಟ

ರೋಜರ್ ಫೆಡರರ್ ವಿದಾಯದ ವರ್ಷ



ವಿದಾಯದ ಸಂದರ್ಭದಲ್ಲಿ ಭಾವುಕರಾದ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್– ಎಎಫ್‌ಪಿ ಚಿತ್ರ

ದಿಗ್ಗಜ ಆಟಗಾರ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರು ವೃತ್ತಿಜೀವನಕ್ಕೆ ವಿದಾಯ ಹೇಳಿದ್ದು ಈ ವರ್ಷ ಪ್ರಮುಖವಾಗಿ ಸುದ್ದಿಮಾಡಿತು. ಕೊರೊನಾ ಲಸಿಕೆ ಹಾಕಿಸಿಕೊಳ್ಳದೇ ದೇಶ ಪ್ರವೇಶಿಸಿದ್ದ ಜೊಕೊವಿಚ್ ಅವರ ವೀಸಾಅನ್ನು ಆಸ್ಟ್ರೇಲಿಯಾ ಸರ್ಕಾರ ರದ್ದು ಮಾಡಿದ್ದು, 25ನೇ ವಯಸ್ಸಿನಲ್ಲೇ ಟೆನಿಸ್‌ಗೆ ವಿದಾಯ ಹೇಳಿದ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ; ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್, ರಷ್ಯಾದ ಎಲೆನಾ ರಿಬಾಕಿನಾ ಎಂಬ ನವತಾರೆಗಳ ಉದಯ 2022ರಲ್ಲಿ ಕಂಡುಬಂದ ಪ್ರಮುಖ ಬೆಳವಣಿಗೆಗಳು.

ಸ್ವಿಸ್ ದಿಗ್ಗಜನ 24 ವರ್ಷಗಳ ವೃತ್ತಿಜೀವನಕ್ಕೆ ತೆರೆ

ಟೆನಿಸ್ ಲೋಕದ ದಿಗ್ಗಜ ಆಟಗಾರ, ಕೋಟ್ಯಂತರ ಅಭಿಮಾನಿಗಳ ಕಣ್ಮಣಿ ರೋಜರ್ ಫೆಡರರ್ ಅವರು ಇಪ್ಪತ್ತನಾಲ್ಕು ವರ್ಷಗಳ ವೃತ್ತಿಜೀವನಕ್ಕೆ ಈ ವರ್ಷ ವಿದಾಯ ಹೇಳಿದರು. ಸೆಪ್ಟೆಂಬರ್ 24ರಂದು ನಡೆದ ಲೆವರ್ ಕಪ್ ಟೆನಿಸ್ ಟೂರ್ನಿಯ ಡಬಲ್ಸ್ ಪಂದ್ಯದಲ್ಲಿ ಫೆಡರರ್, ಸ್ಪೇನ್‌ನ ರಫೆಲ್ ನಡಾಲ್ ಜತೆಗೂಡಿ ಆಡಿ ಟೆನಿಸ್ ಜಗತ್ತಿಗೆ ಗುಡ್‌ಬೈ ಹೇಳಿದರು. ಅವರು 20 ಗ್ರ್ಯಾನ್‌ಸ್ಲಾಮ್ ಕಿರೀಟ ಸೇರಿ ಹಲವು ಪ್ರಶಸ್ತಿ ಜಯಿಸಿದ್ದರು.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡತಿ ಆ್ಯಶ್ಲಿ ಬಾರ್ಟಿ ತಮ್ಮ 25ನೇ ವಯಸ್ಸಿನಲ್ಲಿ ವಿದಾಯ ಹೇಳಿ ಅಚ್ಚರಿ ಮೂಡಿಸಿದರು. ಅಮೆರಿಕದ ಆಟಗಾರ್ತಿ ಸೆರೆನಾ ವಿಲಿಯಮ್ಸ್, ಅಮೆರಿಕ ಓಪನ್ ತಮ್ಮ ಕೊನೆಯ ಟೂರ್ನಿ ಎಂದಿದ್ದರೂ ಅಧಿಕೃತವಾಗಿ ನಿವೃತ್ತಿ ಪ್ರಕಟಿಸಿಲ್ಲ.

ಜೊಕೊವಿಚ್ ಕೋವಿಡ್ ಪ್ರಹಸನ..

ಕೊರೊನಾ ಸೋಂಕು ಹರಡುವಿಕೆ ಉತ್ತುಂಗದಲ್ಲಿದ್ದ ಸಂದರ್ಭದಲ್ಲಿ ಲಸಿಕೆ ಹಾಕಿಸಿಕೊಳ್ಳದೆ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಆಡಲು ತೆರಳಿದ್ದ ಸರ್ಬಿಯಾ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಅಲ್ಲಿಯ ಸರ್ಕಾರ ಅವಕಾಶ ನೀಡದಿರುವುದು ದೊಡ್ಡ ಸುದ್ದಿಯಾಯಿತು.

ವೀಸಾ ರದ್ದು ಮಾಡಿದ ಹಿನ್ನೆಲೆಯಲ್ಲಿ ಟೂರ್ನಿ ಆರಂಭವಾಗುವ ಹಿಂದಿನ ದಿನ ಜೊಕೊವಿಚ್ ಅವರು ಅಲ್ಲಿಂದ ತವರಿಗೆ ವಾಪಸಾಗಿದ್ದರು.

ಹಳೆ ಬೇರು.. ಹೊಸ ಚಿಗುರು

ಈ ವರ್ಷ ಟೆನಿಸ್ ಕ್ರೀಡೆಯಲ್ಲಿ ಅನುಭವಿ ಆಟಗಾರರ ಪಾರಮ್ಯದ ಜೊತೆಗೆ ಕೆಲವು ಹೊಸ ತಾರೆಗಳು ಉದಯಿಸಿದವು. ಸ್ಪೇನ್‌ನ ರಫೆಲ್ ನಡಾಲ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎರಡು ಗ್ರ್ಯಾನ್‌ಸ್ಲಾಮ್ (ಆಸ್ಟ್ರೇಲಿಯಾ, ಫ್ರೆಂಚ್ ಓಪನ್) ಕಿರೀಟ ಧರಿಸಿದರು. ಅಮೆರಿಕ ಓಪನ್ ಗ್ರ್ಯಾನ್‌ಸ್ಲಾನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಜಯಿಸುವ ಮೂಲಕ ಸ್ಪೇನ್‌ನ 19 ವರ್ಷದ ಕಾರ್ಲೋಸ್ ಅಲ್ಕರಾಜ್ ತಮ್ಮ ಮೊದಲ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿಕೊಂಡರು. ನಾರ್ವೆಯ ಕಾಸ್ಪರ್ ರೂಡ್ ಎರಡು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ರನ್ನರ್ಸ್ ಅಪ್ ಆದರು.

ಟ್ಯುನಿಷಿಯಾದ ಆನ್ಸ್ ಜಬೇರ್ ಕೂಡ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಎರಡು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ರನ್ನರ್ಸ್ ಅಪ್ ಗರಿ ಮೂಡಿಸಿಕೊಂಡರು.

● **ಭಾರತಕ್ಕೆ ನಿರಾಸೆ:** ಡೇವಿಸ್ ಕಪ್ ಟೂರ್ನಿಯ ವಿಶ್ವ ಗುಂಪು ಒಂದರ ಪಂದ್ಯದಲ್ಲಿ ಭಾರತ ತಂಡವು ನಾರ್ವೆ ಎದುರು ಸೋಲು ಅನುಭವಿಸಿತು.

2022-ಗ್ರ್ಯಾನ್‌ಸ್ಲಾಮ್ ವಿಜೇತರು ಮತ್ತು ರನ್ನರ್ಸ್ ಅಪ್

ಮಹಿಳಾ ಸಿಂಗಲ್ಸ್		
ಟೂರ್ನಿ	ವಿಜೇತ ಆಟಗಾರ್ತಿ	ರನ್ನರ್ಸ್ ಅಪ್
ಅಮೆರಿಕ ಓಪನ್	ಇಗಾ ಸ್ವಟೆಕ್	ಆನ್ಸ್ ಜಬೇರ್
ವಿಂಬಲ್ಡನ್	ಎಲೆನಾ ರಿಬಾಕಿನಾ	ಆನ್ಸ್ ಜಬೇರ್
ಫ್ರೆಂಚ್ ಓಪನ್	ಇಗಾ ಸ್ವಟೆಕ್	ಕೊಕೊ ಗಫ್
ಆಸ್ಟ್ರೇಲಿಯಾ ಓಪನ್	ಆ್ಯಶ್ಲಿ ಬಾರ್ಟಿ	ಡ್ಯಾನಿಲ್ಲೆ ಕಾಲಿನ್ಸ್
ಪುರುಷರ ಸಿಂಗಲ್ಸ್		
ಟೂರ್ನಿ	ವಿಜೇತ ಆಟಗಾರ	ರನ್ನರ್ಸ್ ಅಪ್
ಅಮೆರಿಕ ಓಪನ್	ಕಾರ್ಲೋಸ್ ಅಲ್ಕರಾಜ್	ಕಾಸ್ಪರ್ ರೂಡ್
ವಿಂಬಲ್ಡನ್	ಜೊಕೊವಿಚ್	ನಿಕ್ ಕಿರ್ಗಿಯೊಸ್
ಫ್ರೆಂಚ್ ಓಪನ್	ರಫೆಲ್ ನಡಾಲ್	ಕಾಸ್ಪರ್ ರೂಡ್
ಆಸ್ಟ್ರೇಲಿಯಾ ಓಪನ್	ರಫೆಲ್ ನಡಾಲ್	ಮೆಡ್ವೆಡೆವ್

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಕರ್ನಾಟಕ ಮೇಲುಗೈ

ಗೋವಾ ನೆರವಿಗೆ ಸುಯಶ್, ದರ್ಶನ್

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾ ತಂಡವನ್ನು ಸಣ್ಣ ಮೊತ್ತಕ್ಕೆ ಕಟ್ಟಿಹಾಕಬೇಕೆಂಬ ಕರ್ನಾಟಕ ತಂಡದ ಕನಸಿಗೆ ಸುಯಶ್ ಪ್ರಭು ದೇಸಾಯಿ, ಸಿದ್ಧೇಶ್ ಲಾಡ್ ಮತ್ತು ದರ್ಶನ್ ಮಿಸಾಳ್ ಅಡ್ಡಿಯಾದರು.

ಜಿಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೂರನೇ ದಿನವಾದ ಗುರುವಾರದ ಆಟದ ಅಂತ್ಯಕ್ಕೆ ಗೋವಾ, 8 ವಿಕೆಟ್‌ಗಳಿಗೆ 321 ರನ್ ಕಲೆಹಾಕಿದೆ. ಆತಿಥೇಯ ತಂಡ ಇನ್ನೂ 282 ರನ್‌ಗಳಿಂದ ಹಿನ್ನಡೆಯಲ್ಲಿದೆ.

ಮೊದಲ ಇನಿಂಗ್ಸ್‌ನಲ್ಲಿ 603 ರನ್ ಗಳಿಸಿದ್ದ ಮಯಂಕ್ ಅಗರವಾಲ್ ಬಳಗ ಎದುರಾಳಿಗಳ ಮೇಲೆ ಒತ್ತಡ ಹೇರುವಲ್ಲಿ ವಿಫಲವಾಯಿತು. ಸುಯಶ್ (87 ರನ್, 165 ಎ), ಸಿದ್ಧೇಶ್ ಲಾಡ್ (63 ರನ್, 84 ಎ) ಮತ್ತು ನಾಯಕ ದರ್ಶನ್ (ಬ್ಯಾಟಿಂಗ್ 66, 134 ಎ) ಅವರು ಅರ್ಧಶತಕದ ಮೂಲಕ ಕಾಡಿದರು.

ಈ ಪಂದ್ಯವನ್ನು ಗೆದ್ದು ಪೂರ್ಣ ಅಂಕ ಗಳಿಸಬೇಕಾದರೆ ಕೊನೆಯ ದಿನವಾದ ಶುಕ್ರವಾರ ಕಠಿಣ ಪರಿಶ್ರಮ ನಡೆಸುವ ಸವಾಲು ಕರ್ನಾಟಕದ ಬೌಲರ್‌ಗಳ ಮುಂದಿದೆ. ಅಂತಿಮ ದಿನ ಯಾವುದೇ ಪವಾಡ ನಡೆಯದಿದ್ದರೆ, ಪಂದ್ಯ ಡ್ರಾದಲ್ಲಿ ಕೊನೆಗೊಳ್ಳುವ ಸಾಧ್ಯತೆಯೇ ಅಧಿಕ.



ಮೂರು ವಿಕೆಟ್ ಪಡೆದ ಕೆ.ಗೌತಮ್

ಆಫ್‌ಸ್ಪಿನ್ನರ್ ಕೆ.ಗೌತಮ್ (109ಕ್ಕೆ 3) ರಾಜ್ಯ ತಂಡದ ಪರ ಅತ್ಯಂತ ಯಶಸ್ವಿ ಬೌಲರ್ ಎನಿಸಿಕೊಂಡರೆ, ಶುಭಾಂಗ್ ಹೆಗ್ಡೆ ಮತ್ತು ವಿಜಯಕುಮಾರ್ ವೈಶಾಖ್ ತಲಾ 2 ವಿಕೆಟ್ ತಮ್ಮದಾಗಿಸಿಕೊಂಡರು.

ಗೋವಾ ತಂಡ 1 ವಿಕೆಟ್‌ಗೆ 45 ರನ್‌ಗಳಿಂದ ಇನಿಂಗ್ಸ್ ಮುಂದುವರಿಸಿತ್ತು. ಸುಮೀರನ್ ಆಮೋಣಕರ್ (30) ವಿಕೆಟ್ ಪಡೆದ ಶುಭಾಂಗ್ ಹೆಗ್ಡೆ, ಕರ್ನಾಟಕಕ್ಕೆ ದಿನದ ಮೊದಲ ಯಶಸ್ಸು ತಂದಿತ್ತರು. ಆದರೆ ಸುಯಶ್ ಅವರು ಸ್ನೇಹಲ್ ಕೌತಣಕರ (21) ಅವರೊಂದಿಗೆ 3ನೇ ವಿಕೆಟ್‌ಗೆ 64 ರನ್ ಜತೆಯಾಟ ನೀಡಿದರು. ಸಿದ್ಧೇಶ್ ಮತ್ತು ದರ್ಶನ್ ನಡುವೆ ಆರನೇ ವಿಕೆಟ್‌ಗೆ 65 ರನ್‌ಗಳ ಜತೆಯಾಟ ಮೂಡಿಬಂತು. ಗೋವಾ ತಂಡ 270 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡಿತು. ಆದರೆ ದರ್ಶನ್ ಅವರನ್ನು ಕೂಡಿಕೊಂಡ ಲಕ್ಷ್ಯ ಗರ್ಗ್, ಮೂರನೇ ದಿನದಾಟದಲ್ಲಿ ತಂಡ ಆಲೌಟ್ ಆಗುವುದನ್ನು ತಪ್ಪಿಸಿದರು. ಇವರಿಬ್ಬರು 9ನೇ ವಿಕೆಟ್‌ಗೆ ಈಗಾಗಲೇ 51 ರನ್ ಕಲೆಹಾಕಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 7 ವಿಕೆಟ್‌ಗಳಿಗೆ 603 ಡಿಕ್ಲೇರ್ಡ್. ಗೋವಾ 109 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 321 (ಬುಧವಾರದ ಆಟದ ಅಂತ್ಯಕ್ಕೆ 23 ಓವರ್‌ಗಳಲ್ಲಿ 1 ವಿಕೆಟ್‌ಗೆ 45)

ಟೆಸ್ಟ್: ಆಸ್ಟ್ರೇಲಿಯಾಕ್ಕೆ ಜಯ

ಮೆಲ್ಬರ್ನ್ (ಎಎಫ್‌ಪಿ): ತವರು ನೆಲದಲ್ಲಿ ಅಮೋಘ ಪ್ರದರ್ಶನ ಮುಂದುವರಿಸಿದ ಆಸ್ಟ್ರೇಲಿಯಾ ತಂಡ, ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಇನಿಂಗ್ಸ್ ಹಾಗೂ 182 ರನ್‌ಗಳಿಂದ ಮಣಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 2–0 ರಲ್ಲಿ ಮುನ್ನಡೆ ಸಾಧಿಸಿತು.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದ ನಾಲ್ಕನೇ ದಿನವಾದ ಗುರುವಾರ ದಕ್ಷಿಣ ಆಫ್ರಿಕಾ 204 ರನ್‌ಗಳಿಗೆ ಆಲೌಟಾಯಿತು.

ಡೀನ್ ಎಲ್ಗರ್ ಬಳಗ 1 ವಿಕೆಟ್‌ಗೆ 15 ರನ್‌ಗಳಿಂದ ದಿನದಾಟ ಮುಂದುವರಿಸಿತ್ತು. ಇನಿಂಗ್ಸ್ ಸೋಲು ತಪ್ಪಿಸಲು 371 ರನ್ ಗಳಿಸಬೇಕಾದ ಸವಾಲು ಮುಂದಿತ್ತು. ಆದರೆ ಆಸ್ಟ್ರೇಲಿಯಾದ ಶಿಸ್ತಿನ ಬೌಲಿಂಗ್ ಮುಂದೆ ಆಗಿಂದಾಗ್ಗೆ ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿನ ಹಾದಿ ಹಿಡಿಯಿತು. ನೇಥನ್ ಲಯನ್ (58ಕ್ಕೆ 3) ಮತ್ತು ಸ್ಕಾಟ್ ಬೋಲಂಡ್ (49ಕ್ಕೆ 2) ನಾಲ್ಕನೇ ದಿನದಾಟದಲ್ಲೇ ತಮ್ಮ ತಂಡಕ್ಕೆ ಗೆಲುವು ತಂದುಕೊಟ್ಟರು.

ಸಾರೆಲ್ ಎರ್ವಿ (21) ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಮಿಚೆಲ್ ಸ್ಟಾರ್ಕ್, ವಿಕೆಟ್ ಬೇಟೆಗೆ ಚಾಲನೆ ನೀಡಿದರು. 65 ರನ್ ಆಗುವಷ್ಟರಲ್ಲಿ 4 ವಿಕೆಟ್‌ಗಳು ಬಿದ್ದವು. ತೆಂಬಾ ಬವುಮಾ (65, 144 ಎ.) ಮತ್ತು ಕೈಲ್ ವೆರೆಯ್ನ್ (33) ಐದನೇ ವಿಕೆಟ್‌ಗೆ 63 ರನ್ ಸೇರಿಸಿ ಅಲ್ಪ ಪ್ರತಿರೋಧ ಒಡ್ಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 189. ಆಸ್ಟ್ರೇಲಿಯಾ 8 ವಿಕೆಟ್‌ಗಳಿಗೆ 575 ಡಿಕ್ಲೇರ್ಡ್. 2ನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 68.5 ಓವರ್‌ಗಳಲ್ಲಿ 204 (ಥೆವ್ನಿಸ್ ಡೆ ಬ್ರುಯ್ನ್ 28, ತೆಂಬಾ ಬವುಮಾ 65, ಕೈಲ್ ವೆರೆಯ್ನ್ 33, ನೇಥನ್ ಲಯನ್ 58ಕ್ಕೆ 3, ಸ್ಕಾಟ್ ಬೋಲಂಡ್ 49ಕ್ಕೆ 2) ಫಲಿತಾಂಶ: ಆಸ್ಟ್ರೇಲಿಯಾಕ್ಕೆ ಇನಿಂಗ್ಸ್, 182 ರನ್‌ಗಳ ಗೆಲುವು

ಭಾರತ–ಪಾಕಿಸ್ತಾನ ಟೆಸ್ಟ್ ಆಯೋಜಿಸಲು ಎಂಸಿಸಿ ಆಸಕ್ತಿ

ಮೆಲ್ಬರ್ನ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ಟೆಸ್ಟ್ ಪಂದ್ಯ ಆಯೋಜಿಸಲು ಮೆಲ್ಬರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಆಸಕ್ತಿ ತೋರಿದೆ. ಈ ವರ್ಷದ ಆರಂಭದಲ್ಲಿ ಉಭಯ ತಂಡಗಳು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಮುಖಾಮುಖಿಯಾಗಿದ್ದವು.

ಟೆಸ್ಟ್ ಆಯೋಜನೆ ಸಾಧ್ಯತೆ ಕುರಿತು ಇತ್ತೀಚೆಗೆ ವಿಕ್ಟೋರಿಯಾ ಸರ್ಕಾರವು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಜೊತೆಗೆ ಚರ್ಚೆ ನಡೆಸಿದೆ.

'ಎಂಸಿಜಿ ಕ್ರೀಡಾಂಗಣದಲ್ಲಿ ಭಾರತ–ಪಾಕ್ ಮಧ್ಯೆ ಮೂರು ಟೆಸ್ಟ್ ಪಂದ್ಯಗಳ ಆಯೋಜಿಸುವ ಯೋಜನೆಯಿದೆ' ಎಂದು ಎಂಸಿಸಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸ್ಟುವರ್ಟ್ ಫಾಕ್ಸ್ ತಿಳಿಸಿದ್ದಾಗಿ ಎಸ್‌ಇಎನ್ ರೇಡಿಯೊ ಉಲ್ಲೇಖಿಸಿದೆ.

ಕೇನ್ ದ್ವಿಶತಕ

ಕರಾಚಿ (ರಾಯಿಟರ್ಸ್): ಕೇನ್ ವಿಲಿಯಮ್ಸನ್ ಅವರ ಅಜೇಯ ದ್ವಿಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ, ಪಾಕಿಸ್ತಾನ ವಿರುದ್ಧದ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ತನ್ನ ಹಿಡಿತ ಬಿಗಿಗೊಳಿಸಿದೆ.

ಕರಾಚಿ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ನಾಲ್ಕನೇ ದಿನದಾಟದಲ್ಲಿ ಪ್ರವಾಸಿ ತಂಡ 9 ವಿಕೆಟ್‌ಗಳಿಗೆ 612 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. 174 ರನ್‌ಗಳ ಹಿನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿರುವ ಬಾಬರ್ ಅಜಂ ಬಳಗ ಗುರುವಾರದ ಆಟದ ಅಂತ್ಯಕ್ಕೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡು 77 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 130.5 ಓವರ್‌ಗಳಲ್ಲಿ 438. ನ್ಯೂಜಿಲೆಂಡ್ 194.5 ಓವರ್‌ಗಳಲ್ಲಿ 9 ವಿಕೆಟ್‌ಗೆ 612 ಡಿ. (ಕೇನ್ ವಿಲಿಯಮ್ಸನ್ ಔಟಾಗದೆ 200, ಇಶ್ ಸೋಧಿ 65, ಅಬ್ರಾರ್ ಅಹ್ಮದ್ 205ಕ್ಕೆ 5, ನೌಮಾನ್ 185ಕ್ಕೆ 3) ಎರಡನೇ ಇನಿಂಗ್ಸ್: ಪಾಕಿ ಸ್ತಾನ 31 ಓವರ್‌ಗಳಲ್ಲಿ 2 ವಿಕೆಟ್‌ಗೆ 77 ಇಮಾಮ್ ಉಲ್ ಹಕ್ ಬ್ಯಾಟಿಂಗ್ 45, ನೌಮಾನ್ ಅಲಿ ಬ್ಯಾಟಿಂಗ್ 4, ಬ್ರೇಸ್‌ವೆಲ್ 23ಕ್ಕೆ 1)